ಶನಿವಾರ, ಸೆಪ್ಟೆಂಬರ್ 4, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಮತಾ ಪ್ರತಿರೂಪ
ಕೋಲ್ಕತ್ತದಲ್ಲಿ ಶುಕ್ರವಾರ ನಡೆದ ಕಾರ್ಯಾಗಾರವೊಂದರಲ್ಲಿ ಕುಶಲಕರ್ಮಿಯೊಬ್ಬರು ರಚಿಸಿದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಮಣ್ಣಿನ ಪ್ರತಿರೂಪ –ಎಎಫ್‌ಪಿ ಚಿತ್ರ



ಶನಿವಾರ, ಸೆಪ್ಟೆಂಬರ್ 4, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 247 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಇತ್ತೀಚೆಗೆ ಹೆಚ್ಚುತ್ತಿದೆ. ಈ ನಿಟ್ಟಿನಲ್ಲಿ ಮಹಿಳೆಯರನ್ನು ಗೌರವಿಸುವುದು, ಲಿಂಗ ಸೂಕ್ಷ್ಮತೆ ಬೆಳೆಸಿಕೊಳ್ಳುವುದನ್ನು ಗಂಡು ಮಕ್ಕಳಿಗೆ ಕಲಿಸಬೇಕಾಗಿದೆ.



ಚರ್ಚೆ: ಮಹಿಳೆಯರ ಸುರಕ್ಷತೆ ಸ್ವಯಂ ನಿಯಂತ್ರಣ ಅಗತ್ಯವೇ? 5
ಶಾಲಾ- ಕಾಲೇಜಿಗೆ ನಡೆದೇ ಹೋಗುವ ವಿದ್ಯಾರ್ಥಿಗಳು 8
ಸಾರಿಗೆ ನಿಗಮಗಳ ಪುನಶ್ಚೇತನಕ್ಕೆ ತಜ್ಞರ ಸಮಿತಿ 8


ಸೆನ್ಸೆಕ್ಸ್	ನಿಫ್ಟಿ	₹/$
58,129	17,323	73.02

ಬೊಮ್ಮಾಯಿ ನೇತೃತ್ವದಲ್ಲೇ ಮುಂದಿನ ಚುನಾವಣೆ: ಶಾ ಹೇಳಿಕೆಗೆ ಬೆಂಬಲ–ತಕರಾರು

ಅಮಿತ್ ಮಾತು: ಹಿತ–ಅಹಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಹುಬ್ಬಳ್ಳಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲೇ ಮುಂದಿನ ವಿಧಾನಸಭಾ ಚುನಾವಣೆ ಎದುರಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ ಹೇಳಿಕೆಗೆ ರಾಜ್ಯದ ಬಿಜೆಪಿ ನಾಯಕರ ಪೈಕಿ ಕೆಲವರು ತಕರಾರು ಎತ್ತಿದ್ದರೆ, ಇನ್ನು ಕೆಲವರು ಬೆಂಬಲ ವ್ಯಕ್ತಪಡಿಸಿದ್ದಾರೆ.



ಬಸವರಾಜ ಬೊಮ್ಮಾಯಿ

ಕಂದಾಯ ಸಚಿವ ಆರ್.ಅಶೋಕ ಮತ್ತು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಶಾ ಹೇಳಿಕೆಯನ್ನು ಸ್ವಾಗತಿಸಿದ್ದರೆ, ಶಾಸಕ ಜಗದೀಶ ಶೆಟ್ಟರ್ ಅವರು ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡಿದ್ದಾರೆ. ಆದರೆ, ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಬಸವರಾಜ ಬೊಮ್ಮಾಯಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಪಕ್ಷದ ಸಂಘಟನೆಗಾಗಿ ರಾಜ್ಯ ಪ್ರವಾಸಕ್ಕೆ ಅಣಿಯಾಗಿರುವ ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಅವರ ನಡೆಗೆ ತಡೆ ಹಾಕಲು, ಬೊಮ್ಮಾಯಿ ನೇತೃತ್ವದಲ್ಲೇ ಚುನಾವಣೆ ಎಂಬ ಘೋಷಣೆಯನ್ನು ಉದ್ದೇಶಪೂರ್ವಕವಾಗಿ ಅಮಿತ್ ಶಾ ಮಾಡಿದ್ದಾರೆ ಎಂಬ ವಿಶ್ಲೇಷಣೆಯೂ ಆ ಪಕ್ಷದಲ್ಲಿ ಶುರುವಾಗಿದೆ.

‘ಬೊಮ್ಮಾಯಿ ಅವರು ಆಡಳಿತದಲ್ಲಿ ಪಾರದರ್ಶಕತೆ ತರಲು ಮಹತ್ವಪೂರ್ಣ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ದೆಹಲಿಯಲ್ಲಿದ್ದು ಕರ್ನಾಟಕ ಸರ್ಕಾರವನ್ನು ಸೂಕ್ಷ್ಮವಾಗಿ ಗಮನಿಸುವವರು ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ್ದರಿಂದ ಬಿಜೆಪಿ ಬಲವರ್ಧನೆಯಾಗಿದೆ ಎಂದು ಮಾತನಾಡುತ್ತಿದ್ದಾರೆ’ ಎಂದು ಶಾ, ಮೆಚ್ಚುಗೆಯ ಮಾತುಗಳನ್ನಾಡಿದ್ದರು. ‘ಬೊಮ್ಮಾಯಿ ನೇತೃತ್ವದಲ್ಲೇ ಮುಂದೆ ಬಿಜೆಪಿ ಬಹುಮತದೊಂದಿಗೆ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ’ ಎಂದು ಹೇಳಿದ್ದರು. ಈ ವಿಷಯದ ಕುರಿತು ಬಿಜೆಪಿ ವಲಯದಲ್ಲಿ ಚರ್ಚೆಯೂ ಆರಂಭವಾಗಿದೆ.

‘ಬೊಮ್ಮಾಯಿ ನೇತೃತ್ವದ ಸರ್ಕಾರ ಒಂದು ತಿಂಗಳಷ್ಟೇ ಪೂರ್ಣಗೊಳಿಸಿದೆ. ಈ ಹಂತದಲ್ಲಿ ಅವರು ಪಾಸೋ ಫೇಲೋ ಎಂದು ನಿರ್ಧರಿಸಲಾಗದು’ ಎಂದು ಶೆಟ್ಟರ್ ಹೇಳಿರುವುದು, ಶಾ ಹೇಳಿಕೆಗೆ ಪ್ರತಿಕ್ರಿಯೆ ಇದ್ದಂತಿದೆ ಎಂಬ ವ್ಯಾಖ್ಯಾನವೂ ನಡೆದಿದೆ.

ಅಶೋಕ ಬೆಂಬಲ: ‘ಅಮಿತ್ ಶಾ ಹೇಳಿಕೆಗೆ ನನ್ನ ಬೆಂಬಲವಿದೆ. ಮುಖ್ಯಮಂತ್ರಿ ನಾಯಕತ್ವದಲ್ಲಿ ಚುನಾವಣೆ ಎದುರಿಸುವುದು ಸಹಜವಾದ ಪ್ರಕ್ರಿಯೆ. ಶಾ ಹೇಳಿಕೆ ಸರಿಯಾಗಿಯೇ ಇದೆ. ಅದಕ್ಕೆ ತಮ್ಮ ಸಮರ್ಥನೆ ಇದೆ’ ಎಂದು ಆರ್. ಅಶೋಕ ಹೇಳಿದರು.

8ನೇ ಪುಟ ನೋಡಿ

ಸಾಮೂಹಿಕ ನಾಯಕತ್ವ: ಈಶ್ವರಪ್ಪ ಒಲವು



ಶಿವಮೊಗ್ಗ: ‘ಸಾಮೂಹಿಕ ನಾಯಕತ್ವದಲ್ಲಿ ಮುಂದಿನ ಚುನಾವಣೆ ಎದುರಿಸಬೇಕು ಎನ್ನುವುದು ಪಕ್ಷದ ಬಹುತೇಕ ಮುಖಂಡರ ಒಲವು. ಇನ್ನೂ ಸಮಯವಿದೆ. ಎಲ್ಲರೂ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತೇವೆ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು. ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಮುಂದಿನ ಚುನಾವಣೆ ಎಂದು ಅಮಿತ್ ಶಾ ಯಾವ ಅರ್ಥದಲ್ಲಿ ಹೇಳಿದ್ದಾರೊ ಗೊತ್ತಿಲ್ಲ. ಬೊಮ್ಮಾಯಿ ಅವರು ಸರ್ಕಾರ ನಡೆಸುತ್ತಿದ್ದಾರೆ. ನಳಿನ್ ಕುಮಾರ್ ಕಟೀಲ್ ನೇತೃತ್ವದಲ್ಲಿ ಪಕ್ಷ ಸಂಘಟನೆ ನಡೆಯುತ್ತಿದೆ. ಎಲ್ಲ ಹಿರಿಯ ನಾಯಕರ ನೇತೃತ್ವ ಇರಬೇಕು ಎನ್ನುವುದು ನಮ್ಮ ಅಭಿಲಾಷೆ’ ಎಂದರು.

ಚುನಾವಣೆ ಇನ್ನೂ ದೂರ ಇದೆ:ಶೆಟ್ಟರ್



ಹುಬ್ಬಳ್ಳಿ: ‘ಚುನಾವಣೆ ಇನ್ನೂ ದೂರವಿದೆ. ನಾನು ಪಕ್ಷದ ಶಿಸ್ತಿನ ಸಿಪಾಯಿಯಾಗಿದ್ದು, ಪಕ್ಷ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧ’ ಎಂದು ಜಗದೀಶ ಶೆಟ್ಟರ್ ಹೇಳಿದರು.


ಮುಂದಿನ ಚುನಾವಣೆಯ ನಾಯಕತ್ವ ಕುರಿತಾಗಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ಯಡಿಯೂರಪ್ಪ ಅವರು ಸ್ವಯಂ ಆಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ ಎಂದು ಅಮಿತ್ ಶಾ ಅವರೇ ಹೇಳಿದ್ದಾರೆ. ಇನ್ನು ಈ ವಿಷಯದಲ್ಲಿ ನಾನು ಹೇಳುವುದು ಏನೂ ಇಲ್ಲ’ ಎಂದರು.

ಅವನಿ ‘ಡಬಲ್’ ಪ್ರವೀಣಗೆ ಬೆಳ್ಳಿ




ಟೋಕಿಯೊ(ಪಿಟಿಐ): ಭಾರತದ ಅಥ್ಲೀಟ್‌ಗಳು ಶುಕ್ರವಾರ ಮೂರು ಪದಕಗಳನ್ನು ಜಯಿಸಿದರು. ಇದರೊಂದಿಗೆ ಭಾರತವು ಈ ಕೂಟದಲ್ಲಿ ಇಲ್ಲಿಯವರೆಗೆ 13 ಪದಕಗಳನ್ನು ಗೆದ್ದಂತಾಗಿದೆ.

ಶೂಟಿಂಗ್ ಪಟು ಅವನಿ ಲೇಖರ ಶೂಟಿಂಗ್‌ನಲ್ಲಿ ಕಂಚಿನ ಪದಕ ಜಯಿಸಿದರು. ನಾಲ್ಕು ದಿನಗಳ ಹಿಂದಷ್ಟೇ ಅವರು 10 ಮೀ ಏರ್ ರೈಫಲ್‌ನಲ್ಲಿ ಚಿನ್ನ ಗೆದ್ದಿದ್ದರು. ಪ್ಯಾರಾಲಿಂಪಿಕ್ಸ್‌ನಲ್ಲಿ ಡಬಲ್ ಪದಕ ಸಾಧನೆ ಮಾಡಿದ ಭಾರತದ ಪ್ರಥಮ ಮಹಿಳೆಯೆಂಬ ಹೆಗ್ಗಳಿಕೆಗ ಪಾತ್ರರಾದರು.



ಪ್ರವೀಣಕುಮಾರ್
ಹೈಜಂಪ್ ಟಿ64
ಬೆಳ್ಳಿ
ಎತ್ತರ: 2.07 ಮೀ.
(ಏಷ್ಯನ್ ದಾಖಲೆ)
ವಯಸ್ಸು: 18



ಅವನಿ ಲೇಖರ
ಕಂಚು. 50 ಮೀ ರೈಫಲ್ 3 ಪೊಸಿಷನ್
ವಯಸ್ಸು: 19



ಹರವಿಂದರ್ ಸಿಂಗ್
ಪುರುಷರ ವೈಯಕ್ತಿಕ ರಿಕರ್ವ್ ವಿಭಾಗ
ಎದುರಾಳಿ: ಕಿಮ್ ಮಿನ್ ಸು (ಕೊರಿಯಾ)
5-3ರಿಂದ ಜಯ, ಕಂಚು. ವಯಸ್ಸು: 31

ಭಾರತ ಗೆದ್ದಿರುವ ಒಟ್ಟು ಪದಕಗಳು 13

ಇಂದು ಪತ್ರಿಕಾ ವಿತರಕರ ದಿನ



ಕೋವಿಡ್ ಸಂಕಷ್ಟ ಕಾಲದಲ್ಲೂ, ಮಳೆ-ಗಾಳಿ -ಚಳಿಯನ್ನೂ ಲೆಕ್ಕಿಸದೆ ಪ್ರತಿನಿತ್ಯ ಓದುಗರಿಗೆ ಸಕಾಲಕ್ಕೆ ಪತ್ರಿಕೆ ವಿತರಿಸುತ್ತಿರುವ ಎಲ್ಲರಿಗೂ

ಶುಭಾಶಯಗಳು

ಪ್ರಶಸ್ತಿಗೆ ಕಲ್ಯಾಣ ನಿಧಿ ಹಣ ಬಳಕೆ: ಆಕ್ಷೇಪ 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟ



ತಾಲಿಬಾನ್ ಸರ್ಕಾರ ರಚನೆ ವಿಳಂಬ 11

ಮುಸ್ಲಿಮರ ಪರ ದನಿ: ತಾಲಿಬಾನ್

ಇಸ್ಲಾಮಾಬಾದ್ (ಪಿಟಿಐ): ‘ಕಾಶ್ಮೀರವೂ ಸೇರಿದಂತೆ ಜಗತ್ತಿನ ಎಲ್ಲೆಡೆ ಇರುವ ಮುಸ್ಲಿಮರ ಪರವಾಗಿ ಧ್ವನಿ ಎತ್ತುವ ಹಕ್ಕನ್ನು ನಾವು ಹೊಂದಿದ್ದೇವೆ’ ಎಂದು ತಾಲಿಬಾನ್ ಹೇಳಿದೆ. ತಾಲಿಬಾನ್ ಮುಂದಾಳತ್ವದ ಅಫ್ಗಾನಿಸ್ತಾನದ ನೆಲವನ್ನು ಉಗ್ರರು ಭಾರತದ ವಿರುದ್ಧ ಬಳಕೆ ಮಾಡಿಕೊಳ್ಳಬಹುದು ಎಂಬ ಕಳವಳ ಹೆಚ್ಚುತ್ತಿರುವ ಸಂದರ್ಭದಲ್ಲೇ ತಾಲಿಬಾನ್ ಈ ಮಾತು ಹೇಳಿದೆ.

ಬಿಬಿಸಿಗೆ ನೀಡಿರುವ ವಿಶೇಷ ಸಂದರ್ಶನದಲ್ಲಿ ತಾಲಿಬಾನ್ ವಕ್ತಾರ ಸುಹೇಲ್ ಶಹೀನ್ ಅವರು ಇದನ್ನು ಪ್ರತಿಪಾದಿಸಿದ್ದಾರೆ.

‘ನಾವು ಎಲ್ಲೆಡೆಯ ಮುಸ್ಲಿಮರ ಪರವಾಗಿ ಧ್ವನಿ ಎತ್ತುತ್ತೇವೆ. ಮುಸ್ಲಿಮರೂ ನಿಮ್ಮವರು, ನಿಮ್ಮ ನಾಗರಿಕರು ಮತ್ತು ಅವರೂ ಸಮಾನ ಹಕ್ಕುಗಳನ್ನು ಹೊಂದಲು ಅರ್ಹರಾಗಿದ್ದಾರೆ ಎಂಬುದನ್ನು ಒತ್ತಿ ಹೇಳುತ್ತೇವೆ’ ಎಂದು ಶಹೀನ್ ಹೇಳಿದ್ದಾರೆ.

‘ತಾಲಿಬಾನ್ ಒಂದು ಮುಸ್ಲಿಂ ಸಂಘಟನೆಯಾಗಿ, ಕಾಶ್ಮೀರ ಮಾತ್ರವಲ್ಲ ಜಗತ್ತಿನ ಎಲ್ಲೆಡೆಯ ಮುಸ್ಲಿಮರ ಪರವಾಗಿ ಮಾತನಾಡುವ ಹಕ್ಕನ್ನು ಹೊಂದಿದೆ. ಆದರೆ ಬೇರೆ ಯಾವುದೇ ದೇಶದ ಮೇಲೆ ಸಶಸ್ತ್ರ ಹೋರಾಟ ನಡೆಸುವ ನೀತಿ ನಮ್ಮಲ್ಲಿಲ್ಲ’ ಎಂದು ಶಹೀನ್ ಸ್ಪಷ್ಟಪಡಿಸಿದ್ದಾರೆ.

‘ಚೀನಾ ಮುಖ್ಯ ಪಾಲುದಾರ’

ಪೆಶಾವರ (ಪಿಟಿಐ): ಚೀನಾ ತನ್ನ ಅತ್ಯಂತ ಮುಖ್ಯವಾದ ಪಾಲುದಾರ ಎಂದು ತಾಲಿಬಾನ್ ಘೋಷಿಸಿದೆ.

ತಮ್ಮ ದೇಶದಲ್ಲಿ ಅಪಾರ ಪ್ರಮಾಣದ ತಾಮ್ರದ ಗಣಿಗಳಿವೆ. ಈ ಗಣಿಗಳನ್ನು ಚೀನಾವು ಆಧುನೀಕರಿಸಬಹುದು ಮತ್ತು ಪುನರಾರಂಭಿಸಬಹುದು. ಅದಲ್ಲದೆ, ಚೀನಾ ಮೂಲಕ ಜಗತ್ತಿನ ಇತರ ಮಾರುಕಟ್ಟೆಗಳ ಜತೆಗೆ ಅಫ್ಗಾನಿಸ್ತಾನವು ಸಂಪರ್ಕ ಪಡೆಯಬಹುದು ಎಂದು ತಾಲಿಬಾನ್ ಹೇಳಿದೆ. ಚೀನಾ ಕೂಡ ತಾಲಿಬಾನ್ ಬಗ್ಗೆ ಸಕಾರಾತ್ಮಕವಾಗಿಯೇ ಇದೆ. ಅಫ್ಗಾನಿಸ್ತಾನವು ಚೀನಾಕ್ಕೆ ಹತ್ತಿರವಾಗುತ್ತಿರುವುದು ಭಾರತಕ್ಕೆ ಒಳ್ಳೆಯ ಸುದ್ದಿಯೇನೂ ಅಲ್ಲ ಎಂದು ವಿದೇಶಾಂಗ ನೀತಿ ಪರಿಣತರು ವಿಶ್ಲೇಷಿಸಿದ್ದಾರೆ.

31 ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ

ಬೆಂಗಳೂರು: ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಟ್ಟಿಯನ್ನು ಶುಕ್ರವಾರ ಪ್ರಕಟಿಸಲಾಗಿದ್ದು, 2021-22ನೇ ಸಾಲಿನಲ್ಲಿ ಒಟ್ಟು 31 ಶಿಕ್ಷಕರು ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಪ್ರಾಥಮಿಕ ಶಾಲಾ ವಿಭಾಗದಲ್ಲಿ 20 ಮತ್ತು ಪ್ರೌಢಶಾಲಾ ವಿಭಾಗದಲ್ಲಿ ಒಬ್ಬರು ವಿಶೇಷ ಶಿಕ್ಷಕ ಸೇರಿ 11 ಶಿಕ್ಷಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಶಿಕ್ಷಕಿಯರಿಗೆ ‘ಮಾತೆ ಸಾವಿತ್ರಿಬಾಯಿ ಫುಲೆ’ ಹೆಸರಿನಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ತಲಾ ₹10 ಸಾವಿರ, ಅವರ ಶಾಲೆಗಳ ಅಭಿವೃದ್ಧಿಗೆ ಪ್ರತಿ ಶಾಲೆಗೆ ₹50 ಸಾವಿರ ನೀಡಲಾಗುತ್ತದೆ.

ಪ್ರಾಥಮಿಕ ಶಾಲಾ ಶಿಕ್ಷಕರು: ಟಿ.ಪಿ. ಉಮೇಶ- ಅಮೃತಾಪುರ, ಚಿತ್ರದುರ್ಗ, ಹೇಮಾ ಪಿ. ಅಂಗಡಿ- ಬೆಳಗಾವಿ ನಗರ. ವೈ.ಎ. ಚಂದ್ರು- ಲಿಂಗಸಗೂರು, ರಾಯಚೂರು, ಎಂ.ಪರಮೇಶ್ವರಯ್ಯ-ಮಾಲವಿ, ಬಳ್ಳಾರಿ. ಮಾರುತಿ ಭಜಂತ್ರಿ-ಚಳಮಟ್ಟಿ, ಧಾರವಾಡ. ಕೆ.ಎಸ್. ಪ್ರಕಾಶ್- ಹೊಸೂರು, ಶಿವಮೊಗ್ಗ. ಎಚ್.ಎ. ಶಿವಶಂಕರಯ್ಯ- ಚಿಕ್ಕನಾಯಕನಹಳ್ಳಿ, ತುಮಕೂರು. ಪಂಚಯ್ಯ ಹಿರೇಮಠ- ಹೊಸಹಳ್ಳಿ, ಗದಗ. ಸದಪ್ಪ ಏಳಗಂಟಿ- ಹೆಗ್ಗೂರ, ಬಾಗಲಕೋಟೆ. ಡಿ. ಗೋಪಾಲಸ್ವಾಮಿ- ಇಕ್ಕಡಹಳ್ಳಿ, ಚಾಮರಾಜನಗರ. ಎಸ್. ಕೃಷ್ಣಪ್ಪ- ರಾಮನಗರ. ಜಿ.ಎಸ್. ಉಂಕಿ- ಗುಡ್ಡದ ಚನ್ನಾಪುರ, ಹಾವೇರಿ.

5A ಪುಟ ನೋಡಿ

ಪೌಷ್ಟಿಕ ಆಹಾರ ಸೇವಿಸಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಭಾರತ ಸರ್ಕಾರ – ರಕ್ಷಣಾ ಸಚಿವಾಲಯ
ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ
ವಾಯುಯಾನ ವ್ಯವಸ್ಥೆಗಳ ಕೇಂದ್ರ

ಎಎಸ್ 9100ಡಿ & ಐಎಸ್‌ಒ 9001:205 ಪ್ರಮಾಣೀಕೃತ ಸಂಸ್ಥೆ

ಬೇಲೂರು, ಯಮಲೂರು ಅಂಚೆ, ಬೆಂಗಳೂರು–560037, ಭಾರತ

ವಾಯುಯಾನ ವ್ಯವಸ್ಥೆಗಳ ಕೇಂದ್ರ (ಸಿಎಬಿಎಸ್) ಬೆಂಗಳೂರು, ಇದೊಂದು ಪ್ರಿಮಿಯರ್ ಸಂಶೋಧನಾ ಕೇಂದ್ರವಾಗಿದ್ದು, ವಾಯುಯಾನ ವ್ಯವಸ್ಥೆಗಳ ಕ್ಷೇತ್ರದಲ್ಲಿನ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ವಾಯುಯಾನ ಮುಂಜಾಗ್ರತಾ ಸೂಚನೆ ಹಾಗೂ ನಿಯಂತ್ರಣ ವ್ಯಸ್ಥೆಗಳ (ಎಇಡಬ್ಲ್ಯು&ಸಿ) ವಿನ್ಯಾಸ ಹಾಗೂ ಅಭಿವೃದ್ಧಿಯಲ್ಲಿ ಮತ್ತು ಇನನಿತರ ಯೋಜನೆಗಳಲ್ಲಿ ತೊಡಗಿಕೊಂಡಿರುತ್ತದೆ.

ಜೂನಿಯರ್ ರಿಸರ್ಚ್ ಪೆಲೋಶಿಪ್ (ಜೆಆರ್‌ಎಫ್) ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಫೆಲೋಶಿಪ್ ಖಾಲಿ ಹುದ್ದೆಗಳು: (20)

ಪ್ಯಾನಲ್ ಘೋಷಣೆಗೊಂಡ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಮೆರಿಟ್/ಡಿಸಿಪ್ಲೀನ್ ಆಧಾರದ ಮೇರೆಗೆ ಭವಿಷ್ಯದ ಖಾಲಿಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ನಿಟ್ಟಿನಲ್ಲಿ ಕ್ರಿಯಾಶೀಲ ಅಭ್ಯರ್ಥಿಗಳ ಒಂದು ಪ್ಯಾನಲ್ ರೂಪಿಸಲಾಗುತ್ತಿದೆ. ಡಿಸಿಪ್ಲೀನ್‌ವಾರು ಖಾಲಿಹುದ್ದೆಗಳ (ಹೆಚ್ಚುವರಿ ಖಾಲಿಹುದ್ದೆಗಳು ಸೇರಿದಂತೆ) ವಿವರ ಕೆಳಗಿನಂತಿರುತ್ತದೆ:–

ಕ್ರ.ಸಂ.	ಡಿಸಿಪ್ಲೀನ್ಸ್	ಖಾಲಿಹುದ್ದೆಗಳು	ಅವಶ್ಯಕ ಪದವಿ ವಿದ್ಯಾರ್ಹತೆಯಲ್ಲಿನ ಸ್ವೀಕಾರರ್ಹ ತತ್ಸಮಾನ ವಿಷಯಗಳು
1	ಏರೋನಾಟಿಕಲ್ ಇಂಜಿನಿಯರ್	02	ಏರೋನಾಟಿಕಲ್ ಇಂಜಿನಿಯರಿಂಗ್/ಏರೋಸ್ಪೇಸ್ ಇಂಜಿನಿಯರಿಂಗ್/ಏರೋಸ್ಪೇಸ್ ಇಂಜಿನಿಯರಿಂಗ್ (ಏವಿಯಾನಿಕ್ಸ್).
2	ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್	05	ಕಂಪ್ಯೂಟರ್ ಸೈನ್ಸ್/ಇಂಜಿನಿಯರಿಂಗ್/ಟೆಕ್ನಾಲಜಿ, ಕಂಪ್ಯುಟರ್ ಸೈನ್ಸ್ & ಇಂಜಿನಿಯರಿಂಗ್/ಟೆಕ್ನಾಲಜಿ, ಕಂಪ್ಯೂಟರ್ ಸೈನ್ಸ್/ಇಂಜಿನಿಯರಿಂಗ್ & ಐಟಿ, ಸಾಫ್ಟ್‌ವೇರ್ ಇಂಜಿನಿಯರಿಂಗ್/ಟೆಕ್ನಾಲಜಿ, ಕಂಪ್ಯೂಟರ್ ಸೈನ್ಸ್ &ಬ ಆಟೋಮೇಶನ್ ಇಂಜಿನಿಯರಿಂಗ್/ಟೆಕ್ನಾಲಜಿ, ಮಾಹಿತಿ ತಂತ್ರಜ್ಞಾನ, ಕಂಪ್ಯೂಟರ್ ವಿಜ್ಞಾನ/ತಂತ್ರಜ್ಞಾನ ಮತ್ತು ಇನ್‌ಫಾರ್ಮಾಟಿಕ್ಸ್ ಇಂಜಿನಿಯರಿಂಗ್/ಟೆಕ್ನಾಲಜಿ, ಮಾಹಿತಿ ವಿಜ್ಞಾನ & ಇಂಜಿನಿಯರಿಂಗ್/ತಂತ್ರಜ್ಞಾನ, ಕಂಪ್ಯೂಟರ್ & ಕಮ್ಯುನಿಕೇಶನ್ ಇಂಜಿನಿಯರಿಂಗ್, ಕಪ್ಯೂಟರ್ ನೆಟ್‌ವರ್ಕಿಂಗ್.
3	ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಇಂಜಿನಿಯರಿಂಗ್	09	ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಕಂಪ್ಯೂಟರ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಕಂಟ್ರೋಲ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಸಿಸ್ಟಮ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಇನ್‌ಸ್ಟ್ರೂಮೆಂಟೇಶನ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಟೆಲೆ ಕಮ್ಯುನಿಕೇಶನ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಟೆಲೆಮ್ಯಾಟಿಕ್ಸ್ ಇಂಜಿನಿಯರಿಂಗ್, ಇಂಡಸ್ಟ್ರಿಯಲ್ ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಟೆಲೆ–ಕಮ್ಯುನಿಕೇಶನ್ ಇಂಜಿನಿಯರಿಂಗ್, ಟೆಲೆಕಮ್ಯುನಿಕೇಶನ್ & ಇನಫಾರ್ಮೇಶನ್ ಟೆಕ್ನಾಲಜಿ, ಅಪ್ಲೈಡ್ ಇಲೆಕ್ಟ್ರಾನಿಕ್ಸ್ & ಇನ್‌ಸ್ಟ್ರುಮೆಂಟೇಶನ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಇಲೆಕ್ಟ್ರಿಕಲ್ ಕಮ್ಯುನಿಕೇಶನ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ & ಕಮ್ಯುನಿಕೇಶನ್ ಇಂಜಿನಿಯರಿಂಗ್, ರೇಡಿಯೊ ಫಿಜಿಕ್ಸ್ ಅಂಡ್ ಇಲೆಕ್ಟ್ರಾನಿಕ್ಸ್, ಇಲೆಕ್ಟ್ರಿಕಲ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ಇಂಜಿನಿಯರಿಂಗ್ (ಏವಿಯಾನಿಕ್ಸ್).
4	ಇಲೆಕ್ಟ್ರಿಕಲ್ ಇಂಜಿನಿಯರ್	01	ಇಲೆಕ್ಟ್ರಿಕಲ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ ಪವರ್ ಸಿಸ್ಟಮ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ & ರಿನ್ಯೂವೇಬಲ್ ಎನರ್ಜಿ ಇಂಜಿನಿಯರಿಂಗ್, ಪವರ್ ಇಂಜಿನಿಯರಿಂಗ್, ಪವರ್ ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಇಲೆಕ್ಟ್ರಿಕಲ್ ಕಮ್ಯುನಿಕೇಶನ್ಸ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ ವಿಥ್ ಕಮ್ಯುನಿಕೇಶನ್ ಇಂಜಿನಿಯರಿಂಗ್.
5	ಮೆಕ್ಯಾನಿಕಲ್ ಇಂಜಿನಿಯರ್	03	ಮೆಕ್ಯಾನಿಕಲ್ ಇಂಜಿನಿಯರಿಂಗ್, ಮೆಕ್ಯಾನಿಕಲ್ & ಆಟೋಮೇಶನ್ ಇಂಜಿನಿಯರಿಂಗ್, ಮೆಕ್ಯಾನಿಕಲ್ & ಪ್ರೊಡಕ್ಷನ್ ಇಂಜಿನಿಯರಿಂಗ್.

ಸಂಶೋಧನಾ ಕ್ಷೇತ್ರ: ಏರೋಡೈನಾಮಿಕ್ಸ್, ಸ್ಟ್ರಕ್ಚರಲ್ ಡಿಸೈನ್ ಅನಲೈಸಿಸ್, ರಡಾರ್ ಇಂಜಿನಿಯರಿಂಗ್, ಕಮ್ಯುನಿಕೇಶನ್ ಇಂಜಿನಿಯರಿಂಗ್, ನೆಟ್‌ವರ್ಕಿಂಗ್ ಅಂಡ್ ಡಿಸ್‌ಪ್ಲೇ ಸಿಸ್ಟಂ, ಮಿಶನ್ ಕಂಪ್ಯೂಟರ್, ಥರ್ಮಲ್ ಮ್ಯಾನೇಜ್‌ಮೆಂಟ್ ಇತ್ಯಾದಿ.

ರಿಸರ್ಚ್ ಫೆಲೋಶಿಪ್ ಸ್ಥಳ: ವಾಯುಯಾನ ವ್ಯವಸ್ಥೆಗಳ ಕೇಂದ್ರ (ಸಿಎಬಿಎಸ್), ಡಿಆರ್‌ಡಿಒ, ರಕ್ಷಣಾ ಸಚಿವಾಲಯ, ಬೇಲೂರು, ಯಮಲೂರು ಅಂಚೆ, ಬೆಂಗಳೂರು–560037.

ಅವಧಿ: ಆರಂಭಿಕ ಹಂತದಲ್ಲಿ ಸದರಿ ನೇಮಕಾತಿಯು ಎರಡು ವರ್ಷಗಳದ್ದಾಗಿರುತ್ತದೆ, ಅದಾಗ್ಯೂ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ನಿಬಂಧನೆಯ ಮೇರೆಗೆ ಮುಂದಿನ ಎರಡು ವರ್ಷ ಕಾಲ ವಿಸ್ತರಿಸಬಹುದಾಗಿರುತ್ತದೆ (ಒಂದು ಬಾರಿಗೆ ಒಂದು ವರ್ಷ).

ಸಂಭಾವನೆ: ಮಾಸಿಕ ರೂ. 31,000/– + ಅನ್ವಯಿಕ ಮನೆ ಬಾಡಿಗೆ ಭತ್ಯೆ.

ಶೈಕ್ಷಣಿಕ ವಿದ್ಯಾರ್ಹತೆ: ಪ್ರಥಮ ದರ್ಜೆ ಬಿಇ/ಬಿ.ಟೆಕ್ ಜೊತೆಗೆ ವ್ಯಾಲಿಡ್ ಗೇಟ್ ಸ್ಕೋರ್.

ಅಥವಾ

ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ಮೇಲಿನ ಡಿಸಿಪ್ಲೀನ್‌ಗಳಲ್ಲಿ ಪ್ರಥಮ ದರ್ಜೆ ಎಂಇ/ಎಂ.ಟೆಕ್.
ಕೇವಲ ಗೇಟ್ 2020 ಮತ್ತು ಗೇಟ್ 2021 ಮಾತ್ರ ಸ್ವೀಕಾರರ್ಹವಾಗಿರುತ್ತವೆ.

ಗರಿಷ್ಠ ವಯೋಮಿತಿ: ಜಾಹೀರಾತಿನ ಕ್ಲೋಸಿಂಗ್ ದಿನಾಂಕದಂದು 28 ವರ್ಷ ಮೇಲ್ಪಟ್ಟಿರಬಾರದು. ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಒಬಿಸಿ (ನಾನ್–ಕ್ರೀಮಿ ಲೇಯರ್) ಅಭ್ಯರ್ಥಿಗಳಿಗೆ 3 ವರ್ಷಗಳ ಸಡಿಲಿಕೆ. ಅನ್ವಯವಾಗುವಂತಿದ್ದಲ್ಲಿ, ಜಾತಿ ಪ್ರಮಾಣಪತ್ರದ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸುವುದು.

ಆಯ್ಕೆ ಪ್ರಕ್ರಿಯೆ: ವ್ಯಾಲಿಡ್ ಗೇಟ್ ಸ್ಕೋರ್ ಮತ್ತು ಪದವಿ/ಸ್ನಾತಕೋತ್ತರ ಪದವಿಯಲ್ಲಿ ಗಳಿಸಿರುವ ಅಂಕಗಳ ಆಧರದ ಮೇರೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ ಮತ್ತು ಅಂತಹವರನ್ನು ವೆಬ್ ಆಧಾರಿತ ಆನ್‌ಲೈನ್ ಸಂದರ್ಶನಕ್ಕೆ ಆಹ್ವಾನಿಸಲಾಗುತ್ತದೆ. ಸಂದರ್ಶನದ ಸಮಯ/ದಿನಾಂಕ ಮತ್ತು ಪ್ರಕ್ರಿಯೆ ಕುರಿತಂತೆ ಇಮೇಲ್/ಎಸ್‌ಎಂಎಸ್ ಮುಖಾಂತರ ತಿಳಿಸಲಾಗುತ್ತದೆ. ಪ್ರಸ್ತುತ ಖಾಲಿಹುದ್ದೆಗಳಿಗೆ ಮತ್ತು ಭವಿಷ್ಯದ ಖಾಲಿ ಹುದ್ದೆಗಳಿಗೆ ಆಯ್ಕೆಗೊಂಡ ಯಶಸ್ವಿ ಅಭ್ಯರ್ಥಿಗಳ ಪಟ್ಟಿಯನ್ನು ಡಿಆರ್‌ಡಿಒ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ (www.drdo.gov.in).

ಅರ್ಜಿ ಸಲ್ಲಿಸುವ ವಿಧಾನ: ಈ ಕೆಳಗೆ ನೀಡಲಾಗಿರುವ ಅರ್ಜಿ ನಮೂನೆಯನ್ನು ಸಂಪೂರ್ಣ ಭರ್ತಿ ಮಾಡಿ jrf.rectt@cabs.drdo.in ವಿಳಾಸಕ್ಕೆ ರವಾನಿಸುವುದು ಕಡ್ಡಾಯ. ಅರ್ಜಿ ನಮೂನೆಯನ್ನು ಡಿಆರ್‌ಡಿಒ ವೆಬ್‌ಸೈಟ್‌ನ (www.drdo.gov.in) ವಾಟ್ಸ್ ನ್ಯೂ ಸೆಕ್ಷನ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ನಿಗದಿತ ಅರ್ಜಿ ನಮೂನೆಯನ್ನು ಸಂಪೂರ್ಣ ಭರ್ತಿ ಮಾಡಿ ಇಮೇಲ್ ಮುಖಾಂತರ ಸಲ್ಲಿಸುವುದು ಜೊತೆಗೆ ಸ್ವಯಂ ದೃಢೀಕೃತ ಅಗತ್ಯ ಪ್ರಮಾಣಪತ್ರಗಳು ಅಥವಾ ಪದವಿ ಪ್ರಮಾಣಪತ್ರಗಳ ಸ್ಕ್ಯಾನ್ಡ್ ಪ್ರತಿಗಳನ್ನು ಕೂಡ ಸಲ್ಲಿಸತಕ್ಕದ್ದು. ಸದರಿ ಜಾಹೀರಾತು ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ 21 ದಿನಗಳ ಅವಧಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವಾಗಿರುತ್ತದೆ. ಅಪೂರ್ಣವಾಗಿ ಭರ್ತಿ ಮಾಡಲಾಗಿರುವ ಅರ್ಜಿಗಳನ್ನು/ನಿಗದಿತ ದಿನಾಂಕದ ಬಳಿಕ ಸಂದಾಯ ಆಗುವ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.

ಸಾಮಾನ್ಯ ಸೂಚನೆಗಳು:

1. ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಹಾಗೂ ಪೂರಕ ದಾಖಲಾತಿಗಳನ್ನು ಸಿಂಗಲ್ ಪಿಡಿಎಫ್ ಫೈಲ್‌ಲ್ಲಿ ಸ್ಕ್ಯಾನ್ ಮಾಡಿರಬೇಕು ಮತ್ತು ಸದರಿ ಫೈಲ್ 10 ಎಂಬಿ ಗಾತ್ರಕ್ಕಿಂತ ಹೆಚ್ಚಿನದು ಆಗಿರಕೂಡದು.
2. ಸರ್ಕಾರಿ ಇಲಾಖೆಗಳಲ್ಲಿ/ಪಿಎಸ್‌ಯು'ಗಳಲ್ಲಿ/ಸ್ವಾಯುತ್ತ ಅಂಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು, ಕಡ್ಡಾಯವಾಗಿ ಸೂಕ್ತ ವಿಧಾನದಲ್ಲಿ ಅರ್ಜಿ ಸಲ್ಲಿಸತಕ್ಕದ್ದು. ಸಂದರ್ಶನಕ್ಕೆ ಆಯ್ಕೆಗೊಂಡ ಅಭ್ಯರ್ಥಿಗಳು, ಸಂದರ್ಶನ ದಿನಾಂಕಕ್ಕೆ ಮುಂಚಿತವಾಗಿ ಮೇಲ್ಕಾಣಿಸಿದ ಇಮೇಲ್ ವಿಳಾಸಕ್ಕೆ ತಮ್ಮ 'ಎನ್‌ಒಸಿ' ಪತ್ರವನ್ನು ಅಲೋಡ್ ಮಾಡುವುದು ಕಡ್ಡಾಯ.
3. ಅಭ್ಯರ್ಥಿಗಳು ಸ್ವಂತ ಜವಾಬ್ದಾರಿಯಲ್ಲಿ ಸಂದರ್ಶನಕ್ಕೆ ಹಾಜರಾಗಲು ಅಗತ್ಯವಿರುವ ಅಂತರ್ಜಾಲ ಸಂಪರ್ಕ, ತಂತ್ರಾಂಶಗಳು ಮತ್ತು ಇನ್ನಿತರ ಹಾರ್ಡ್‌ವೇರ್‌ಗಳ ಹೊಂದಿರುವಿಕೆಯನ್ನು ಖಚಿತಪಡಿಸತಕ್ಕದ್ದು. ಸಂದರ್ಶನದ ಸಮಯದಲ್ಲಿ ಉಂಟಾಗಬಹುದಾದ ಯಾವುದೇ ಕನೆಕ್ಟಿವಿಟಿ ವೈಫಲ್ಯತೆಗೆ ಸಿಎಬಿಎಸ್/ಡಿಆರ್‌ಡಿಒ ಹೊಣೆಯಾಗಿರುವುದಿಲ್ಲ.
4. ಸದರಿ ಫೆಲೋಶಿಪ್‌ಗೆ ಆಫರ್ ಲಭಿಸಿದ ಪಕ್ಷದಲ್ಲಿ, ಸದರಿ ಫೆಲೋಶಿಪ್ ಡಿಆರ್‌ಡಿಒ ಸಂಸ್ಥೆಯಲ್ಲಿ ವಿಲೀನಕರಣಕ್ಕೆ/ಉದ್ಯೋಗಕ್ಕೆ ಯಾವುದೇ ಹಕ್ಕು ನೀಡಿದಂತಾಗುವುದಿಲ್ಲ ಎಂಬುದು ಗಮನದಲ್ಲಿರಲಿ.
5. ಪ್ಯಾನಲ್ ಘೋಷಣೆಯಾದ ಮಾತ್ರಕ್ಕೆ ಜೆಆರ್‌ಎಫ್ ನೇಮಕಾತಿ ಲಭಿಸಿತೆಂದು ಭಾವಿಸುವಂತಿಲ್ಲ. ಮೆರಿಟ್ ಆಧಾರದ ಮೇರೆಗೆ, ಭವಿಷ್ಯದ ಖಾಲಿಹುದ್ದೆಗಳ ಪ್ರಕಾರ ಒಂದು ಔಪಚಾರಿಕ ಪತ್ರ ರವಾನಿಸಲಾಗುತ್ತದೆ.
6. ಅಭ್ಯರ್ಥಿಗಳಿಗೆ ಇ–ಮೇಲ್ ಮುಖಾಂತರ ಮಾಹಿತಿ ನೀಡಲಾಗುತ್ತದೆ, ಆದ್ದರಿಂದ ಅಭ್ಯರ್ಥಿಗಳು ನಿಯಮಿತವಾಗಿ ತಮ್ಮ ಇಮೇಲ್ ಐಡಿಗಳನ್ನು ಪರಿಶೀಲಿಸುತ್ತಿರಬೇಕೆಂದು ಸೂಚಿಸಲಾಗಿದೆ.

ಸಹಿ/– ಕೆ ವಿ ನಾರಾಯಣ ರಾವ್
ಜಂಟಿ ನಿರ್ದೇಶಕರು (ಆಡಳಿತ), ನಿರ್ದೇಶಕರು, ಸಿಎಬಿಎಸ್ ರವರ ಪರವಾಗಿ

ಸಿಎಬಿಎಸ್ (ಡಿಆರ್‌ಡಿಒ), ಬೆಂಗಳೂರು ಇವರಲ್ಲಿನ ಜೂನಿಯರ್ ರಿಸರ್ಚ್ ಫೆಲೋಶಿಪ್‌ಗಾಗಿ ಅರ್ಜಿ ನಮೂನೆ

(ಅಭ್ಯರ್ಥಿಯು ಅವನ/ಅವಳ ಕೈಬರಹದಲ್ಲಿ ಭರ್ತಿ ಮಾಡುವುದು)

ಫೆಲೋಶಿಪ್ ಹೆಸರು/ಮಾದರಿ .... ಜಾಹೀರಾತು ಸಂ. ....

ಇತ್ತೀಚಿನ ಬಣ್ಣದ ಪಾಸ್‌ಪೋರ್ಟ್ ಗಾತ್ರದ ಫೋಟೋ ಅಂಟಿಸಿ

01. ಪೂರ್ಣ ಹೆಸರು ದಪ್ಪ ಅಕ್ಷರಗಳಲ್ಲಿ :
02. (1) ತಂದೆಯ ಹೆಸರು :
(2) ತಾಯಿಯ ಹೆಸರು :
(3) ಸಂಗಾತಿಯ ಹೆಸರು (ಅನ್ವಯವಾದಲ್ಲಿ) :
(ದಪ್ಪ ಅಕ್ಷರಗಳಲ್ಲಿ)
03. (ಎ) ಲಿಂಗ: ಪುರುಷ/ಮಹಿಳೆ/ತೃತೀಯ ಲಿಂಗ 3(ಬಿ) ಪ್ರವರ್ಗ: ಸಾಮಾನ್ಯ ಎಸ್‌ಸಿ ಎಸ್‌ಟಿ ಒಬಿಸಿ
3(ಸಿ) ಜನ್ಮದಿನಾಂಕ: ದಿನ/ ತಿಂಗಳು/ ವರ್ಷ 3(ಡಿ) ವಯಸ್ಸು ವರ್ಷ ತಿಂಗಳು
04. ಪತ್ರ ವ್ಯವಹಾರದ ವಿಳಾಸ : ಪಿನ್ ಕ್ರಮಾಂಕ:
05. ಶಾಶ್ವತ ವಿಳಾಸ: ಪಿನ್ ಕ್ರಮಾಂಕ:
06. ಸಂಪರ್ಕ ವಿವರಗಳು: ಫೋನ್ (ಎಸ್‌ಟಿಡಿ ಕೋಡ್ ಸಮೇತ): ಮೊಬೈಲ್: +91
ಪರ್ಯಾಯ ಸಂಖ್ಯೆ ಯಾವುದಾದರೂ ಇದ್ದಲ್ಲಿ:
07. (1) ಇ–ಮೇಲ್ ಐಡಿ:
(2) ಪರ್ಯಾಯ ಇ–ಮೇಲ್ ಐಡಿ:
08. ಶೈಕ್ಷಣಿಕ ವಿದ್ಯಾರ್ಹತೆ (ಮ್ಯಾಟ್ರಿಕ್/10ನೇ/ಹೆಚ್‌ಎಸ್‌ಸಿ ಇಂದ ಮುಂದಿನವು, ಸ್ವಯಂ ದೃಢೀಕೃತ ಪ್ರಮಾಣಪತ್ರಗಳನ್ನು ಲಗತ್ತಿಸುವುದು)

ಉತ್ತೀರ್ಣ ಪರೀಕ್ಷೆ	ವಿಷಯಗಳು	ಮಂಡಳಿ/ವಿಶ್ವವಿದ್ಯಾಲಯ	ಉತ್ತೀರ್ಣಗೊಂಡ ತಿಂಗಳು ಮತ್ತು ವರ್ಷ	ದರ್ಜೆ/ವರ್ಗ/ಗ್ರೇಡ್	ಶೇಕಡವಾರು% ಅಂಕ/ಸಿಜಿಪಿಎ

09. ಅನುಭವ (ಯಾವುದಾದರು ಇದ್ದಲ್ಲಿ) ಸೂಚನೆ: ಸೇವೆಯ ಅವಧಿ ಹುದ್ದೆಯ ವಿವರ (ಸಂಕ್ಷಿಪ್ತವಾಗಿ) ನಮೂದಿಸಲು ಅಗತ್ಯವಾದಲ್ಲಿ ಹೆಚ್ಚುವರಿ ಪುಟಗಳನ್ನು ಲಗತ್ತಿಸಿರಿ.

ಹುದ್ದೆಯ ಹೆಸರು	ಸಂಸ್ಥೆ/ಇಲಾಖೆಯ ಹೆಸರು	ಇಂದ	ವರೆಗೆ

10. ಯುಜಿಸಿ/ಸಿಎಸ್‌ಐಆರ್/ಇನ್‌ಇಟಿ/ಗೇಟ್ ಪರೀಕ್ಷೆಗಳಲ್ಲಿ ಅರ್ಹತೆ ಪಡೆದಿದ್ದೀರಾ: ಹೌದು ಇಲ್ಲ
ಹೌದು ಎಂದಾದಲ್ಲಿ, ವಿವರಗಳನ್ನು ನಮೂದಿಸಿ (ಪುರಾವೆ ಲಗತ್ತಿಸತಕ್ಕದ್ದು) ನೊಂದಣಿ/ರೋಲ್ ನಂ....... ವರ್ಷ....... ಸ್ಕೋರ್...... ವ್ಯಾಲಿಡಿಟಿ
11. ಯಾವುದೇ ಸರ್ಕಾರಿ ಸಂಸ್ಥೆಯಲ್ಲಿನ ಪರೀಕ್ಷೆಯಿಂದ ನೀವು ಯಾವತ್ತಾದರೂ ಡಿಬಾರ್ ಆಗಿರುತ್ತೀರಾ: ಹೌದು ಇಲ್ಲ
ಹೌದು ಎಂದಾದಲ್ಲಿ ವಿವರಗಳನ್ನು ಸಲ್ಲಿಸಿ:
12. **ಘೋಷಣೆ:** ಈ ಮೂಲಕ ನಾನು ಘೋಷಿಸುವುದು ಏನೆಂದರೆ, ಮೇಲೆ ನೀಡಲಾಗಿರುವ ಎಲ್ಲಾ ವಿವರಗಳು ನನ್ನ ತಿಳುವಳಿಕೆಯ ಪ್ರಕಾರ ಸರಿಯಾಗಿರುತ್ತವೆ ಮತ್ತು ಯಾವುದೇ ಮಾಹಿತಿಯನ್ನು ಮರೆಮಾಚಲಾಗಿಲ್ಲ. ಯಾವುದೇ ಸಮಯದಲ್ಲಿಯೂ ನಾನು ಯಾವುದೇ ಮಾಹಿತಿಯನ್ನು ಮರೆಮಾಚಿದ್ದಾಗಿ/ತಪ್ಪಾಗಿ ನಮೂದಿಸಿದ್ದಾಗಿ ಕಂಡುಬಂದಲ್ಲಿ, ಯಾವುದೇ ಮುನ್ಸೂಚನೆ ಇಲ್ಲದೆಯೆ ನನ್ನ ಫೆಲೋಶಿಪ್ ರದ್ದಾಗುತ್ತದೆ ಎಂದು ನನಗೆ ತಿಳಿದಿರುತ್ತದೆ. ಅವಶ್ಯಕತೆಗೆ ಅನುಗುಣವಾಗಿ ಭಾರತದಾದ್ಯಂತ ಎಲ್ಲಿಯಾದರೂ ನನಗೆ ನೀಡಲಾಗುವ ಕರ್ತವ್ಯಗಳನ್ನು ಪಾಲಿಸಲು ಮತ್ತು ಅನುಷ್ಠಾನಗೊಳಿಸಲು ನಾನು ಸಿದ್ಧನಾಗಿರುತ್ತೇನೆ.

ಸ್ಥಳ:
ದಿನಾಂಕ:

ಅಭ್ಯರ್ಥಿಯ ಸಹಿ

DAVP 10301/11/0044/2122

ದಾಸೋಹ ದಿನ ಆಚರಿಸಲು ತೀರ್ಮಾನ

ಪ್ರಜಾವಾಣಿ ವಾರ್ತೆ



ಶಿವಕುಮಾರ ಸ್ವಾಮೀಜಿ

ಬೆಂಗಳೂರು: ತುಮಕೂರಿನ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಅವರು ಲಿಂಗೈಕ್ಯರಾದ ಜನವರಿ 21 ರಂದು ರಾಜ್ಯದಾದ್ಯಂತ 'ದಾಸೋಹ ದಿನ' ಆಚರಿಸಲು ನಿರ್ಧರಿಸಿರುವ ರಾಜ್ಯ ಸರ್ಕಾರ, ಈ ಸಂಬಂಧ ರೂಪುರೇಷೆ ಸಿದ್ಧಪಡಿಸಿಕೊಳ್ಳಲು ಆದೇಶ ಹೊರಡಿಸಿದೆ.

ದಾಸೋಹ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ಸಂಬಂಧಪಟ್ಟ ಇಲಾಖೆಗಳು ಸಿದ್ಧತೆ ಮಾಡಿಕೊಂಡು ಕಾರ್ಯಕ್ರಮ ಜಾರಿಗೊಳಿಸಲು ಅಗತ್ಯ ಕ್ರಮ ವಹಿಸುವಂತೆ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ನಗರದಲ್ಲಿ ಇಂದು

ಗುಡಿಹಳ್ಳಿ ನಾಗರಾಜ್ ಅವರಿಗೆ ನುಡಿನಮನ: ಪ್ರಾಸ್ತಾವಿಕ ನುಡಿ: ಬರಗೂರು ರಾಮಚಂದ್ರಪ್ಪ, ರಂಗಗೀತೆ: ಲಕ್ಷ್ಮಣ ದಾಸ್, ನುಡಿ ನಮನಕಾರರು:ಎಲ್. ಹನುಮಂತಯ್ಯ, ಆರ್.ಜಿ. ಹಳ್ಳಿ ನಾಗರಾಜ್, ಶರೀಫಾ ಕೆ., ಸಿದ್ದನಗೌಡ ಪಾಟೀಲ, ಭಕ್ತರಹಳ್ಳಿ ಕಾಮರಾಜ್, ಪಿ.ಆರ್. ವೆಂಕಟೇಶ್, ಆಯೋಜನೆ: ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

ರಂಗ ಕಾರ್ಯಾಗಾರದ ಸಮಾರೋಪ: 'ಗರಿ ಬಿಚ್ಚಿ ಹಾರೋಣ... ರಂಗಕ್ಕೆ ಸೇರೋಣ', ಅಧ್ಯಕ್ಷತೆ: ಪ್ರೊ.ಆರ್. ಭೀಮಸೇನ, ಮುಖ್ಯಅತಿಥಿ: ಎಸ್.ಎನ್. ಸೇತುರಾಂ, ಉಪಸ್ಥಿತಿ: ಬಿ.ವಿ. ರಾಜಾರಾಮ್, ಮಂಗಳಾ ಎನ್., ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ರಂಗ ಕಲಾವಿದರ ವಿವಿಧೋದ್ದೇಶ ಸಂಘ, ಸ್ಥಳ: ಸಿ. ಅಶ್ವತ್ಥ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 5.30



ರಾಮರಾಜ್‌ನ ನೂತನ ಮಳಿಗೆಯನ್ನು ಎಸ್.ಆರ್. ವಿಶ್ವನಾಥ್ ಉದ್ಘಾಟಿಸಿದರು

ರಾಮರಾಜ್ ನೂತನ ಮಳಿಗೆ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹತ್ತಿ ಬಟ್ಟೆಯ ಉಡುಪುಗಳ ತಯಾರಿಕಾ ಮತ್ತು ಮಾರಾಟ ಸಂಸ್ಥೆ 'ರಾಮರಾಜ್' ತನ್ನ ನೂತನ ಮಳಿಗೆಯನ್ನು ಯಲಹಂಕ ನ್ಯೂ ಟೌನ್‌ನ ಮದರ್ ಡೈರಿ ರಸ್ತೆಯಲ್ಲಿ ಶುಕ್ರವಾರ ಪ್ರಾರಂಭಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಹಾಗೂ ಯಲಹಂಕದ ಶಾಸಕ ಎಸ್.ಆರ್. ವಿಶ್ವನಾಥ್ ಅವರು ನೂತನ ಮಳಿಗೆಯನ್ನು ಉದ್ಘಾಟಿಸಿ, ಶುಭಹಾರೈಸಿದರು.

'ದಕ್ಷಿಣ ಭಾರತದಲ್ಲಿ ಜನಪ್ರಿಯವಾಗಿರುವ ಧೋತಿ, ಅಂಗಿ ಹಾಗೂ ಬನಿಯನ್‌ಗಳನ್ನು ಉತ್ತರ ಭಾರತ ಹಾಗೂ ವಿದೇಶಗಳಿಗೆ ಕೂಡ ರಫ್ತು ಮಾಡಲಾಗುತ್ತಿದೆ. ಮಳಿಗೆಯಲ್ಲಿ ವಿವಿಧ ವಿನ್ಯಾಸಗಳ ಧೋತಿಗಳು ದೊರೆಯಲಿವೆ. ಬಗೆಬಗೆಯ ಅಂಗಿಗಳು, ಟಿ–ಶರ್ಟ್‌ಗಳು, ಒಳ ಉಡುಪುಗಳು, ಮುಖಗವಸುಗಳು ಕೂಡ ಲಭ್ಯವಿವೆ. ಗುಣಮಟ್ಟದಲ್ಲಿ ಯಾವುದೇ ರೀತಿಯ ರಾಜಿ ಮಾಡಿಕೊಳ್ಳುವುದಿಲ್ಲ' ಎಂದು ಸಂಸ್ಥೆ ತಿಳಿಸಿದೆ.

'ರಾಜ್ಯದ ವಿವಿಧೆಡೆ ಮಳಿಗೆಯನ್ನು ಪ್ರಾರಂಭಿಸಲಾಗಿದೆ. ಶ್ರೀಲಂಕಾ, ಸಿಂಗಪುರ ಸೇರಿದಂತೆ ವಿವಿಧ ದೇಶಗಳಿಗೆ ಉಡುಪುಗಳನ್ನು ರಫ್ತು ಮಾಡಲಾಗುತ್ತಿದೆ. ದೇಶದಲ್ಲಿ www.ramrajcotton.in ಮೂಲಕ ಆನ್‌ಲೈನ್ ಸೇವೆ ನೀಡಲಾಗುತ್ತಿದೆ' ಎಂದು ಪ್ರಕಟಣೆ ತಿಳಿಸಿದೆ.

ಪತ್ರಿಕಾ ವಿತರಕರ ದಿನ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ವತಿಯಿಂದ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ರಾಜಾಜಿನಗರದ ಪಾರ್ವತಿ ಸಮಾವೇಶ ಸಭಾಂಗಣದಲ್ಲಿ ಶನಿವಾರ ನಡೆಯಲಿದೆ.

ಬೆಳಿಗ್ಗೆ 10 ಗಂಟೆಗೆ ನಡೆಯಲಿರುವ ಕಾರ್ಯಕ್ರಮವನ್ನು ವಸತಿ ಸಚಿವ ವಿ. ಸೋಮಣ್ಣ ಉದ್ಘಾಟಿಸುವರು. ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಮತ್ತು ಅಬಕಾರಿ ಸಚಿವ ಕೆ.ಗೋಪಾಲಯ್ಯ ಅವರು ಪತ್ರಿಕಾ ವಿತರಕರಿಗೆ ಸನ್ಮಾನ ಮಾಡುವರು. ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್ ಆಶಯ ನುಡಿ ನುಡಿಯಲಿದ್ದು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸುವರು.

ಶಾಸಕ ಎಸ್. ಸುರೇಶ್‌ಕುಮಾರ್, ವಾರ್ತಾ ಇಲಾಖೆ ಆಯುಕ್ತ ಪಿ.ಎಸ್. ಹರ್ಷ, ಮಾರುತಿ ಮೆಡಿಕಲ್ಸ್‌ನ ಮಹೇಂದ್ರ ಮುನೋಟ್ ಜೈನ್, ಮುದ್ರಣ ಮಾಧ್ಯಮದ ಎಲ್ಲ ಸಂಪಾದಕರನ್ನು ವಿಶೇಷವಾಗಿ ಆಹ್ವಾನಿಸಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಶಂಭುಲಿಂಗ ಕೆ. ತಿಳಿಸಿದರು.

ರಾಜ್ಯದಲ್ಲಿ 70 ಸಾವಿರಕ್ಕೂ ಹೆಚ್ಚು ಮಂದಿ ಪತ್ರಿಕಾ ವಿತರಕರಾಗಿ ಕೆಲಸ ಮಾಡುತ್ತಿದ್ದಾರೆ. ಅಸಂಘಟಿತ ಕಾರ್ಮಿಕ ವಲಯಕ್ಕೆ ಪತ್ರಿಕಾ ವಿತರಕರನ್ನೂ ಸೇರಿಸಬೇಕು ಎಂಬ ಒತ್ತಾಯವನ್ನು ಸರ್ಕಾರದ ಮುಂದೆ ಇಡಲಾಗುತ್ತಿದೆ ಎಂದು ಅವರು ಹೇಳಿದರು.

Ministry of Culture
Government of India

ಸಾಹಿತ್ಯ ಅಕಾಡೆಮಿ ನವದೆಹಲಿ

ಸಾಹಿತ್ಯ ಅಕಾಡೆಮಿಯು ಮೆಜೆಸ್ಟಿಕ್ ಮೆಟ್ರೋ (BMRCL) ನಿಲ್ದಾಣದಲ್ಲಿ 144 ಚದರ ಅಡಿ (12x12 ಅಡಿ) ವಿಸ್ತೀರ್ಣದ ಖಾಲಿ ಜಾಗದಲ್ಲಿ ತನ್ನ ಪುಸ್ತಕ ಮಳಿಗೆ ತೆರೆಯಲು ಪರಿಕಲ್ಪನೆ / ಒಳಾಂಗಣ ಮತ್ತು ಬಾಹ್ಯ ವಿನ್ಯಾಸ / ಕಟ್ಟುವಿಕೆ / ನಿರ್ಮಾಣ ಕಾರ್ಯಗಳಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತರಾಗಿರುವ ವ್ಯಾಪಾರಿಗಳು / ಗುತ್ತಿಗೆದಾರರು ತಮ್ಮ ಟೆಂಡರುಗಳನ್ನು 21 ದಿನಗಳ ಒಳಗೆ ಸಾಹಿತ್ಯ ಅಕಾಡೆಮಿಯ ವೆಬ್‌ಸೈಟ್ www.sahitya-akademi.gov.in ಇದರಲ್ಲಿ ನೀಡಲಾಗಿರುವ ವಿವರಣೆಗಳಂತೆ ಸಲ್ಲಿಸಲು ಕೋರಲಾಗಿದೆ.

davp09104/11/0012/2122

ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಪಿ.ಬಿ. ನಂ.2610, ಮೈಸೂರು ರಸ್ತೆ, ಬೆಂಗಳೂರು–560026.
ದೂರವಾಣಿ: 080–26749045, 26987200, 26748274

ಕವಿಕಾ/ಡಿಎಂ–ಪಿ/2021–22 ದಿನಾಂಕ: 03.09.2021

ಟೆಂಡರ್ ಪ್ರಕಟಣೆ

ಕೆಳಕಂಡ ವಸ್ತುಗಳ ಸರಬರಾಜಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೋಡ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.
(1) ಟ್ರಾನ್ಸ್‌ಫಾರ್ಮರ್ ಆಯಿಲ್ ಸರಬರಾಜು.
ವಿವರವಾದ ಪ್ರಕಟಣೆ/ವಿವರಣೆ ಹಾಗೂ ಭಾಗವಹಿಸುವ ಪ್ರಕ್ರಿಯೆ/ಇಎಂಡಿ/ಟೆಂಡರ್ ಶುಲ್ಕ ಇತ್ಯಾದಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://eproc.karnataka.gov.in** ನಿಂದ ದಿನಾಂಕ: **04.09.2021**ರಂದು ಅಥವಾ ನಂತರ ಲಾಗಿನ್ ಆಗಿ ಪಡೆಯಬಹುದು.

ಸಹಿ/– ಉಪ ವ್ಯವಸ್ಥಾಪಕರು – ಖರೀದಿ

ಐಎಸ್‌ಒ :- 9001-2008 ಸಂಸ್ಥೆ-ಸ್ಟಾರ್ ರೇಟೆಡ್ ಟ್ರಾನ್ಸ್‌ಫಾರ್ಮರ್‌ಗಳ ತಯಾರಕರು.

ಸಂವಿಧಾನವನ್ನು ಪಾಲಿಸುವುದು ಮತ್ತು ಆಶಯಗಳನ್ನು ಮತ್ತು ಸಂಸ್ಥೆಗಳನ್ನು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು

ತಿಂಗಳಲ್ಲಿ ಎರಡು ವಾರ್ಡ್ ಸಮಿತಿ ಸಭೆ ನಡೆಸಲು ಗೌರವ್ ಗುಪ್ತ ಸೂಚನೆ

ಪ್ರತಿ ವಾರ್ಡ್‌ಗೆ ₹60 ಲಕ್ಷ ಮೀಸಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿಯಲ್ಲಿ ಪ್ರತಿ ವಾರ್ಡ್ ಅಭಿವೃದ್ಧಿಗೆ ತಲಾ ₹60 ಲಕ್ಷ ಮೀಸಲಿಡಲಾಗಿದೆ. ತಿಂಗಳ ಮೊದಲ ಮತ್ತು ಮೂರನೇ ಶನಿವಾರದಂದು ನಡೆಯುವ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಿ, ಈ ಅನುದಾನದ ಸಮರ್ಪಕ ಬಳಕೆ ಮಾಡಿಕೊಳ್ಳಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ 198 ವಾರ್ಡ್‌ಗಳ ನೋಡಲ್ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಗೌರವ್ ಗುಪ್ತ

ನಗರದಲ್ಲಿ ಶುಕ್ರವಾರ ನೋಡಲ್ ಅಧಿಕಾರಿಗಳೊಂದಿಗೆ ಆನ್‌ಲೈನ್‌ನಲ್ಲಿ ಸಭೆ ನಡೆಸಿದ ಅವರು, '₹60 ಲಕ್ಷದ ಪೈಕಿ, ಆಯಾ ವಾರ್ಡ್‌ನಲ್ಲಿ ಪಾದಚಾರಿ ಮಾರ್ಗ ದುರಸ್ತಿಗೆ ₹20 ಲಕ್ಷ, ರಸ್ತೆ ಗುಂಡಿ ದುರಸ್ತಿಗೆ ₹20 ಲಕ್ಷ ಹಾಗೂ ಕೊಳವೆ ಬಾವಿಗಾಗಿ ₹20 ಲಕ್ಷ ಮೀಸಲಿಡಲಾಗಿದೆ. ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ಅನುದಾನವನ್ನು ಈ ಕಾರ್ಯಗಳಿಗೆ ವಿನಿಯೋಗಿಸಬೇಕು' ಎಂದರು.

'ವಾರ್ಡ್ ಸಮಿತಿ ಸಭೆಯಲ್ಲಿ ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಸಂಚಾರ ಪೊಲೀಸ್ ಅಧಿಕಾರಿಗಳು, ವಾರ್ಡ್ ಸಮಿತಿ ನೋಡಲ್ ಅಧಿಕಾರಿ ಹಾಗೂ ಸ್ಥಳೀಯರು ಪಾಲ್ಗೊಳ್ಳಬೇಕು. ಸಭೆಯಲ್ಲಿ ಪ್ರಸ್ತಾಪವಾದ ದೂರುಗಳು ಅಥವಾ ಸಮಸ್ಯೆಗಳನ್ನು ಪಟ್ಟಿ ಮಾಡಿ ಇತ್ಯರ್ಥಪಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿದರು.

ನಾಗರಿಕರ ಸಹಭಾಗಿತ್ವ: 'ನಗರದಲ್ಲಿ ಘನತ್ಯಾಜ್ಯ ವಿಲೇವಾರಿ ಪ್ರಕ್ರಿಯೆಯನ್ನು ಸಮರ್ಪಕವಾಗಿ ನಿರ್ವಹಿಸುವ ನಿಟ್ಟಿನಲ್ಲಿ 'ನಗರದ ಶುಚಿತ್ವಕ್ಕಾಗಿ ನಾಗರಿಕರ ಸಹಭಾಗಿತ್ವ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅದಕ್ಕಾಗಿ ವಲಯ, ವಿಭಾಗ, ವಾರ್ಡ್ ಮಟ್ಟದಲ್ಲಿ ಸಂಯೋಜಕರು, ಬ್ಲಾಕ್ ಮಟ್ಟದಲ್ಲಿ ಶುಚಿಮಿತ್ರ ಹಾಗೂ ಲೇನ್ ಮಟ್ಟದಲ್ಲಿ ಸ್ವಯಂಸೇವಕರನ್ನು ನಿಯೋಜನೆ ಮಾಡಲಾಗುತ್ತಿದೆ' ಎಂದು ಗೌರವ್ ಹೇಳಿದರು.

ಸಭೆಯಲ್ಲಿ ವಿಶೇಷ ಆಯುಕ್ತರು, ವಲಯ ಜಂಟಿ ಆಯುಕ್ತರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಜನಾಗ್ರಹ ತಂಡ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	22.03 ಕೋಟಿ ▲	3.29 ಕೋಟಿ
ಸಕ್ರಿಯ ಪ್ರಕರಣ	1.88 ಕೋಟಿ ▲	4.20 ಲಕ್ಷ ▲
ಗುಣಮುಖ	19.69 ಕೋಟಿ ▲	3.99 ಕೋಟಿ
ಸಾವು	45.62 ಲಕ್ಷ ▲	4.40 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	6.81 ಲಕ್ಷ ▲	42,319 ▼
ಗುಣಮುಖ	5.54 ಲಕ್ಷ ▼	35,681 ▲
ಸಾವು	10,658 ▲	327 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ಬ್ರೆಜಿಲ್
1.77 ಲಕ್ಷ ▼	33,113 ▼	38,154

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ಬ್ರೆಜಿಲ್
86.50 ▲	11.96 ▲	4.46

(* ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.37 ಲಕ್ಷ
ತಮಿಳುನಾಡು	34,980 ▲
ದೆಹಲಿ	25,082

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	64.77 ▲
ಕೇರಳ	41.51 ▼
ತಮಿಳುನಾಡು	26.19 ▲

ಪ್ರಜಾವಾಣಿ ಗ್ರಾಫಿಕ್ಸ್

ಮಕ್ಕಳ ಮೇಲಿನ ಪ್ರಯೋಗಕ್ಕೆ ಅನುಮೋದನೆ

ನವದೆಹಲಿ: ಹೈದರಾಬಾದ್ ಮೂಲದ ಬಯೊಲಾಜಿಕಲ್ ಇ ಕಂಪನಿಗೆ, 5 ವರ್ಷ ಮೇಲ್ಪಟ್ಟ ಮಕ್ಕಳಿಗೆ ತನ್ನ ಕೋವಿಡ್ ಲಸಿಕೆಯ ಮೂರನೇ ಹಂತದ ಪ್ರಯೋಗ ಆರಂಭಿಸಲು ಭಾರತೀಯ ಪ್ರಧಾನ ಔಷಧ ನಿಯಂತ್ರಕ ಸಂಸ್ಥೆ ಅನುಮೋದನೆ ನೀಡಿದೆ.

ಭಾರತದಲ್ಲಿ ಮಕ್ಕಳ ಮೇಲೆ ಪ್ರಯೋ ಗಕ್ಕೆ ಅನುಮತಿ ಪಡೆದಿರುವ ಮೂರನೇ ಕಂಪನಿ ಇದಾಗಿದೆ.

ಮಕ್ಕಳು, ಹದಿಹರೆಯ ದವರ ಮೇಲೆ ಕಾರ್ಬೆವಾಕ್ಸ್ ಲಸಿಕೆಯ ಸುರಕ್ಷತೆ, ಪ್ರತಿಕ್ರಿಯಾತ್ಮಕತೆ ಮತ್ತು ಪ್ರತಿಕಾಯ ವೃದ್ಧಿಗೆ ಸಂಬಂಧಿಸಿದಂತೆ ಮೌಲ್ಯಮಾಪನ ಮಾಡಲು 2/3ನೇ ಹಂತದ ಪ್ರಯೋಗವನ್ನು ಆರಂಭಿಸುವುದಕ್ಕೆ ಡಿಸಿಜಿಐ ಸೆಪ್ಟೆಂಬರ್ 1ರಂದು ಅನುಮತಿ ನೀಡಿದೆ.

ಹೊರಮಾವು: 34 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು ದೃಢ

ನರ್ಸಿಂಗ್ ಕಾಲೇಜು ತಾತ್ಕಾಲಿಕ ಸ್ಥಗಿತ

ಬೆಂಗಳೂರು: ನಗರದ ಹೊರಮಾವು ಕ್ರಿಸ್ಟಿಯನ್ ನರ್ಸಿಂಗ್ ಕಾಲೇಜಿನಲ್ಲಿ 300 ಮಂದಿ ಪೈಕಿ 34 ವಿದ್ಯಾರ್ಥಿಗಳಿಗೆ ಕೋವಿಡ್ ಸೋಂಕು ದೃಢಪಟ್ಟಿರುವುದರಿಂದ ಕಾಲೇಜನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಕಾಲೇಜಿನ ಸುತ್ತ–ಮುತ್ತ ಇರುವ ಸುಮಾರು 800 ಜನರಿಗೆ ಕೋವಿಡ್ ಪರೀಕ್ಷೆ ಮಾಡಲಾಗಿದೆ.

ಕಾಲೇಜಿಗೆ ಶುಕ್ರವಾರ ಭೇಟಿ ನೀಡಿದ ಆರೋಗ್ಯ ಸಚಿವ ಡಾ. ಕೆ. ಸುಧಾಕರ್, 'ಹೊರರಾಜ್ಯದಿಂದ ವಿದ್ಯಾರ್ಥಿಗಳು ಬರುವುದರಿಂದ ಶಿಕ್ಷಣ ಸಂಸ್ಥೆಗಳು ಎಚ್ಚರ ವಹಿಸಬೇಕೆಂದು ಸೂಚಿಸಲಾಗಿದೆ' ಎಂದರು.

'ಹೊರಮಾವು ಕಾಲೇಜಿನ ಎಲ್ಲ ವಿದ್ಯಾರ್ಥಿಗಳು ಕೇರಳ ಮತ್ತು ಪಶ್ಚಿಮ ಬಂಗಾಳದಿಂದ ಬಂದವರಾಗಿದ್ದಾರೆ. ಕೋವಿಡ್ ದೃಢಪಟ್ಟವರಲ್ಲಿ ಬಹುತೇಕರು ಕೊರೊನಾ ಸೋಂಕು ಲಕ್ಷಣರಹಿತರಾಗಿದ್ದಾರೆ. ಇವರ ಮಾದರಿಯನ್ನು ವೈರಾಣು ಅನುಕ್ರಮಣಿಕೆಗೆ ಕಳುಹಿಸಲಾಗುವುದು' ಎಂದರು.

'ಸೋಂಕಿತ ವಿದ್ಯಾರ್ಥಿಗಳನ್ನು ಕೋವಿಡ್ ಆರೈಕೆ ಕೇಂದ್ರ, ಹೋಟೆಲ್ ಮೊದಲಾದ ಕಡೆ ಪ್ರತ್ಯೇಕವಾಗಿರಿಸಲಾಗುವುದು. ಹಲವರನ್ನು ಸಂಸ್ಥೆಯಲ್ಲೇ ಸಾಂಸ್ಥಿಕ ಕ್ವಾರಂಟೈನ್ ಮಾಡಲಾಗುವುದು. ಒಂದು ವಾರ ಸಂಸ್ಥೆಯನ್ನು ಮುಚ್ಚಿ, ಬಳಿಕ ಮತ್ತೆ ಪರೀಕ್ಷೆ ಮಾಡಲಾಗುವುದು. ಈ ಕಾಲೇಜು ಇರುವ ಪ್ರದೇಶವನ್ನು ಸೂಕ್ಷ್ಮ ಕಂಟೈನ್‌ಮೆಂಟ್ ವಲಯ ಎಂದು ಘೋಷಿಸಲಾಗಿದೆ' ಎಂದರು.

ಮೇಲುಸ್ತುವಾರಿ: 'ಪಾಲಿಕೆಯ ಮಹದೇವಪುರ ಮತ್ತು ಪೂರ್ವ ವಲಯಗಳಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. ಹೊರಮಾವು ಕಾಲೇಜಿನ ವಿದ್ಯಾರ್ಥಿಗಳನ್ನು ಕೋವಿಡ್ ಆರೈಕೆ ಕೇಂದ್ರದಲ್ಲಿ ಕ್ವಾರಂಟೈನ್ ಮಾಡಲಾಗಿದ್ದು, ಕ್ವಾರಂಟೈನ್ ವ್ಯವಸ್ಥೆ ಮೇಲುಸ್ತುವಾರಿಯನ್ನು ಪಾಲಿಕೆಯಿಂದ ಮಾಡಲಾಗುತ್ತಿದೆ. ಅಧಿಕಾರಿಗಳಿಂದ ವರದಿ ತರಿಸಿಕೊಳ್ಳಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

ಬೆಂಗಳೂರುನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,38,834 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,718 ▲	12,15,103 ▲	16,012 ▲

ದಿನದ ಏರಿಕೆ

ಹೊಸ ಪ್ರಕರಣ	319
ಗುಣಮುಖ	202 ▼
ಸಾವು	8 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೇರಳ: 11ನೇ ತರಗತಿಗೆ ಭೌತಿಕ ಪರೀಕ್ಷೆ–'ಸುಪ್ರೀಂ' ತಡೆ

ನವದೆಹಲಿ (ಪಿಟಿಐ): 11ನೇ ತರಗತಿಗೆ ಭೌತಿಕವಾಗಿ ಪರೀಕ್ಷೆ ನಡೆಸುವ ಕೇರಳ ಸರ್ಕಾರದ ನಿರ್ಧಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ಒಂದು ವಾರದ ಮಟ್ಟಿಗೆ ತಡೆಯಾಜ್ಞೆ ನೀಡಿದೆ. ಪ್ರಕರಣದ ವಿಚಾರಣೆಯನ್ನು ಸೆಪ್ಟೆಂಬರ್ 13ಕ್ಕೆ ಮುಂದೂಡಿದೆ.

ರಾಜ್ಯದಲ್ಲಿ ಕೋವಿಡ್ ಪರಿಸ್ಥಿತಿ ಆತಂಕಕಾರಿಯಾಗಿದೆ. ದೇಶದ ಒಟ್ಟು ಪ್ರಕರಣಗಳಲ್ಲಿ ಶೇ 70ರಷ್ಟು ಕೇರಳದಲ್ಲಿಯೇ ಇವೆ. ಇಂಥ ಸ್ಥಿತಿಯಲ್ಲಿ ಮಕ್ಕಳನ್ನು ಅಪಾಯಕ್ಕೆ ದೂಡಲಾಗದು ಎಂದು ಕೋರ್ಟ್ ಹೇಳಿದೆ. ಈ ಹಿಂದೆ ಕೇರಳ ಹೈಕೋರ್ಟ್, ಪರೀಕ್ಷೆಯನ್ನು ನಡೆಸುವುದು ಸರ್ಕಾರದ ನೀತಿಗೆ ಬಿಟ್ಟಿದ್ದು, ಮಧ್ಯೆ ಪ್ರವೇಶಿಸಲಾಗದು ಅಭಿಪ್ರಾಯಪಟ್ಟಿತ್ತು.

12 ಜಿಲ್ಲೆ: 100ರೊಳಗೆ ಸಕ್ರಿಯ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ 1,220 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢ ಪಟ್ಟಿದೆ. 12 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ನೂರರ ಗಡಿಯೊಳಗೆ ಇವೆ.

ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.53 ಲಕ್ಷಕ್ಕೆ ಏರಿಕೆ ಕಂಡಿದೆ.

ಒಂದು ದಿನದ ಅವಧಿಯಲ್ಲಿ 1.79 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.68ರಷ್ಟು ವರದಿಯಾಗಿದೆ.

11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ವಿಜಯಪುರ, ರಾಯಚೂರು ಹಾಗೂ ಬೀದರ್‌ನಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 232, ಮೈಸೂರಿನಲ್ಲಿ 86 ಹಾಗೂ ಕೊಡಗಿನಲ್ಲಿ 64 ಪ್ರಕರಣಗಳು ಪತ್ತೆ ಯಾಗಿವೆ. ಬೆಂಗಳೂರಿನಲ್ಲಿ 319 ಮಂದಿ ಹಾಗೂ ಉಡುಪಿಯಲ್ಲಿ 150 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

1,175 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 28.97 ಲಕ್ಷ ದಾಟಿದೆ. ಸದ್ಯ 18,404 ಸಕ್ರಿಯ ಪ್ರಕರಣಗಳಿವೆ. ಬೀದರ್ ಜಿಲ್ಲೆ ಕೋವಿಡ್ ಮುಕ್ತವಾಗಿದೆ. ರಾಯಚೂರು ಸೇರಿದಂತೆ 7 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳು 50ರ ಒಳಗಡೆ ಇವೆ.

ಕೋವಿಡ್ ಪೀಡಿತರಲ್ಲಿ 19 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 8 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದ್ದಾರೆ. ಮರಣ ಪ್ರಮಾಣ ದರವು ಶೇ 1.55ರಷ್ಟು ವರದಿಯಾಗಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

ಒಟ್ಟು ಸೋಂಕಿತರು (29,51,844 ನಿನ್ನೆಯ ವಿವರ)	29,53,064 ▲
ಸಕ್ರಿಯ ಪ್ರಕರಣಗಳು	18,404 ▲
ಗುಣಮುಖರಾದವರು	28,97,254 ▲
ಒಟ್ಟು ಸಾವು	37,380 ▲

ದಿನದ ಏರಿಕೆ

ಹೊಸ ಪ್ರಕರಣ	1,220 ▼
ಗುಣಮುಖ	1,175 ▼
ಸಾವು	19 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯದ ಪ್ರಥಮ ಬಹುಶಿಸ್ತೀಯ ಪಠ್ಯಕ್ರಮದ ಕಾಲೇಜು ಆರಂಭ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿ ಅಡಿಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿರುವ ರಾಜ್ಯದ ಮೊದಲ ಬಹುಶಿಸ್ತೀಯ ಕಲಿಕೆಯ ಮಹಿಳಾ ಪದವಿ ಕಾಲೇಜು ಶುಕ್ರವಾರದಿಂದ ಆರಂಭವಾಯಿತು.

ಕಾಲೇಜು ಉದ್ಘಾಟಿಸಿದ ಉನ್ನತ ಶಿಕ್ಷಣ ಡಾ.ಸಿ.ಎನ್. ಅಶ್ವತ್ಥ ನಾರಾಯಣ, 'ಈ ವರ್ಷ ಪರೀಕ್ಷೆ ಇಲ್ಲದೆ ಪಿಯುಸಿಯ ಎಲ್ಲ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪದವಿ ಕಾಲೇಜುಗಳ ಪ್ರವೇಶಕ್ಕೆ ಬೇಡಿಕೆ ಹೆಚ್ಚಾಗಿರುವುದರಿಂದ ವಿಶ್ವವಿದ್ಯಾಲಯಗಳು ನೇರವಾಗಿ ಪದವಿ ಕಾಲೇಜು ನಡೆಸಬಾರದೇಕೇ ಎಂದು ಸರ್ಕಾರ ಚಿಂತನೆ ನಡೆಸಿತು. ಅದರ ಫಲವಾಗಿಯೇ ಈ ಹೊಸ ಕಾಲೇಜು ಆರಂಭವಾಗಿದೆ' ಎಂದರು.

'ಕಾಲೇಜಿಗೆ ಸರ್ಕಾರದಿಂದಲೇ ಕಟ್ಟಡ, ಇನ್ನಿತರೆ ಸೌಲಭ್ಯಗಳನ್ನು ಒದಗಿಸಲಾಗಿದೆ. ಅದನ್ನು ನಿರ್ವಹಿಸಬೇಕಾದ ಹೊಣೆ ವಿಶ್ವ-ವಿದ್ಯಾಲಯದ್ದು. ಶೀಘ್ರದಲ್ಲಿಯೇ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಲಿದ್ದು, ಯಾವ ಸಂಯೋಜನೆಗಳು ಇರಬೇಕು ಎಂಬುದನ್ನು ವಿಶ್ವವಿದ್ಯಾಲಯವೇ ತಿಳಿಸುತ್ತದೆ' ಎಂದರು.

'ಮಹಿಳೆಯರಿಗಾಗಿಯೇ ಮೀಸಲಾದ ಈ ಪದವಿ ಕಾಲೇಜಿನಲ್ಲಿ ಮುಂದಿನ ದಿನಗಳಲ್ಲಿ ಸ್ನಾತಕೋತ್ತರ ತರಗತಿಗಳನ್ನೂ ಆರಂಭ ಮಾಡಬಹುದು. ಅದಕ್ಕೆ ಬೇಕಾದ ಎಲ್ಲ ಸಹಕಾರವನ್ನು ಸರ್ಕಾರ ನೀಡುತ್ತದೆ' ಸಚಿವರು ಭರವಸೆ ನೀಡಿದರು.

ಇಂದು ಕೇಂದ್ರ ಅಧ್ಯಯನ ತಂಡ ರಾಜ್ಯಕ್ಕೆ: ಸಚಿವ ಅಶೋಕ

ಬೆಂಗಳೂರು: ಮಳೆ ಮತ್ತು ಪ್ರವಾಹದಿಂದ ಆಗಿರುವ ಹಾನಿ ಕುರಿತು ಅಧ್ಯಯನ ನಡೆಸಲು ಕೇಂದ್ರದ ಅಧಿಕಾರಿಗಳ ತಂಡ ಶನಿವಾರ ಬೆಂಗಳೂರಿಗೆ ಬರಲಿದೆ. ಮಂಗಳವಾರದವರೆಗೂ ಈ ತಂಡ ವಿವಿಧೆ ಪ್ರವಾಸ ಮಾಡಿ, ಅಧ್ಯಯನ ನಡೆಸಲಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಅತಿವೃಷ್ಟಿ ಹಾಗೂ ಪ್ರವಾಹದಿಂದ ₹ 5,690 ಕೋಟಿ ನಷ್ಟವಾಗಿದೆ ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಕೇಂದ್ರೀಯ ವಿಪತ್ತು ಪರಿಹಾರ ನಿಧಿಯಿಂದ ರಾಜ್ಯಕ್ಕೆ ₹ 765 ಕೋಟಿ ಪರಿಹಾರ ದೊರೆಯಬೇಕಿದೆ. ಅಧಿಕಾರಿಗಳ ತಂಡ ವರದಿ ಸಲ್ಲಿಸಿದ ಬಳಿಕ ಈ ಮೊತ್ತ ಬಿಡುಗಡೆಯಾಗಲಿದೆ ಎಂದರು.

ಭೂಮಾಪಕರ ನೇಮಕ: ರಾಜ್ಯದಲ್ಲಿ ಭೂಮಾಪನಕ್ಕೆ ಸಂಬಂಧಿಸಿದ ಎರಡು ಲಕ್ಷ ಕಡತಗಳು ಬಾಕಿ ಇವೆ. ಅವುಗಳ ತ್ವರಿತ ವಿಲೇವಾರಿಗಾಗಿ 820 ಭೂಮಾಪಕರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಡಿಸೆಂಬರ್ ಅಂತ್ಯದೊಳಗೆ ಇನ್ನೂ 600 ಭೂಮಾಪಕರನ್ನು ನೇಮಕ ಮಾಡಲಾಗುವುದು ಎಂದು ತಿಳಿಸಿದರು.

ಪಶ್ಚಿಮ ಬಂಗಾಳ: ಎರಡು ಆರೋಪ ಪಟ್ಟಿ ಸಲ್ಲಿಕೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ಚುನಾವಣೋತ್ತರ ಹಿಂಸಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿಬಿಐ ಎರಡು ಆರೋಪಪಟ್ಟಿಗಳನ್ನು ಸಲ್ಲಿಸಿದೆ ಎಂದು ಅಧಿಕಾರಿಗಳು ಶುಕ್ರವಾರ ಹೇಳಿದ್ದಾರೆ.

ಪ್ರಕರಣದ ತನಿಖೆ ಕೈಗೆತ್ತಿಕೊಂಡ ಒಂಬತ್ತು ದಿನಗಳಲ್ಲಿ ಒಂದು ದೋಷಾರೋಪ ಪಟ್ಟಿ ಸಲ್ಲಿಸಲಾಗಿದ್ದರೆ, ಇನ್ನೊಂದನ್ನು ಕೇವಲ ಆರು ದಿನಗಳಲ್ಲಿ ಸಲ್ಲಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಟುಂಟುನ್ ಚೌಧರಿ, ಚಂದನ್ ಸಿಂಗ್, ಲಲನ್ ಸಿಂಗ್ ಮತ್ತು ಅನಿಮೇಶ್ ಪಾಲ್ ಎಂಬ ನಾಲ್ಕು ಜನರನ್ನು ಸಿಬಿಐ ಶುಕ್ರವಾರ ಸಲ್ಲಿಸಿದ ಆರೋಪ ಪಟ್ಟಿಯಲ್ಲಿ ಹೆಸರಿಸಿದೆ. ಇವರು ಜೂನ್ 6ರಂದು ಉತ್ತರ 24 ಪರಗಣ ಜಿಲ್ಲೆಯ ಮನೆಯ ಮೇಲೆ ಬಾಂಬ್ ಎಸೆದ ಆರೋಪ ಎದುರಿಸುತ್ತಿದ್ದಾರೆ.

‘ಪ್ರತಿ ನಾಲ್ಕು ನಿಮಿಷಕ್ಕೆ ಒಂದು ಆತ್ಮಹತ್ಯೆ’

ಬೆಂಗಳೂರು: ‘ದೇಶದಲ್ಲಿ ಪ್ರತಿ ನಾಲ್ಕು ನಿಮಿಷಗಳಿಗೆ ಕನಿಷ್ಠ ಒಂದು ಆತ್ಮಹತ್ಯೆ ಪ್ರಕರಣ ವರದಿಯಾಗುತ್ತಿದೆ. ಕೋವಿಡ್ ಕಾಣಿಸಿಕೊಂಡ ಬಳಿಕ ಯುವಜನತೆ ಹೆಚ್ಚಾಗಿ ಮಾನಸಿಕ ಕಾಯಿಲೆಗಳಿಗೆ ಒಳಗಾಗುತ್ತಿದ್ದಾರೆ’ ಎಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ತಿಳಿಸಿದೆ.

ವಿಶ್ವ ಆತ್ಮಹತ್ಯೆ ತಡೆದಿನದ ಪ್ರಯುಕ್ತ ಸಂಸ್ಥೆಯು ಸೆಪ್ಟೆಂಬರ್ ತಿಂಗಳು ಪೂರ್ತಿ ಮಾನಸಿಕ ಆರೋಗ್ಯ ಮತ್ತು ಶಿಕ್ಷಣದ ಕುರಿತು ಜಾಗೃತಿ ಅಭಿಯಾನವನ್ನು ಹಮ್ಮಿಕೊಂಡಿದೆ.

‘ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ ಮೂರನೇ ಒಂದರಷ್ಟು ಮಂದಿ ಮಾತ್ರ ಮಾನಸಿಕ ಕಾಯಿಲೆಗಳಿಂದ ಬಳಲುತ್ತಿರುತ್ತಾರೆ. ಉಳಿದ ಎರಡು ಭಾಗದಷ್ಟು ಮಂದಿ ಆರ್ಥಿಕ ಸಮಸ್ಯೆ ಹಾಗೂ ಕುಟುಂಬದ ಬಾಂಧವ್ಯ ಕಡಿದುಕೊಳ್ಳುವಿಕೆಯಿಂದ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಪರಿಸರ ಮಾಲಿನ್ಯ, ಶಬ್ದ ಮಾಲಿನ್ಯ ಕೂಡಾ ಮಾನಸಿಕ ಸಮಸ್ಯೆಗೆ ಕಾರಣವಾಗುತ್ತಿದೆ. ಬಹುತೇಕ ಎಲ್ಲ ಮಾನಸಿಕ ಕಾಯಿಲೆಗಳನ್ನು ಗುಣಪಡಿಸಬಹುದಾಗಿದೆ. ಮನಸ್ಸಿನ ನಿಗ್ರಹವಿಟ್ಟುಕೊಂಡಲ್ಲಿ ಮಾನಸಿಕ ಅನಾರೋಗ್ಯ ಸಮಸ್ಯೆಗಳಿಂದ ಅಂತರ ಕಾಯ್ದುಕೊಳ್ಳಬಹುದು’ ಎಂದು ನಿಮ್ಹಾನ್ಸ್ ವೈದ್ಯರು ತಿಳಿಸಿದ್ದಾರೆ.

‘ಆತ್ಮಹತ್ಯೆಯ ಆಲೋಚನೆಯನ್ನು ಹೊಂದಿರುವವರಿಗೆ ಹೊಸ ಭರವಸೆ ಮೂಡಿಸಬೇಕು. ಕೋವಿಡ್ ಕಾಣಿಸಿಕೊಂಡ ಬಳಿಕ ಹಲವಾರು ಮಂದಿ ಉದ್ಯೋಗ ಕಳೆದುಕೊಂಡು, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದು ಕೂಡ ಮಾನಸಿಕ ಸಮಸ್ಯೆಗಳಿಗೆ ಕಾರಣವಾಗಿದೆ. ಅದೇ ರೀತಿ, ಕೌಟುಂಬಿಕ ಸಮಸ್ಯೆ, ವೃತ್ತಿ ಸ್ಥಳದಲ್ಲಿ ಮಾನಸಿಕ ಒತ್ತಡ ಸೇರಿದಂತೆ ವಿವಿಧ ಸಮಸ್ಯೆಗಳಿಂದಲೂ ಕೆಲವರು ಆತ್ಮಹತ್ಯೆಯ ಹಾದಿ ಹಿಡಿಯುವ ಸಾಧ್ಯತೆ ಇರುತ್ತದೆ’ ಎಂದು ಸಂಸ್ಥೆಯ ಮಾನಸಿಕ ಆರೋಗ್ಯ ಶಿಕ್ಷಣ ವಿಭಾಗದ ಮುಖ್ಯಸ್ಥೆ ಡಾ. ಮೀನಾ ಕೆ.ಎಸ್. ತಿಳಿಸಿದ್ದಾರೆ.

ನಿರ್ಲಕ್ಷ್ಯ ವಹಿಸಿದರೆ ಕ್ರಮ: ಮಂಜುನಾಥ್

ಬೆಂಗಳೂರು: ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ನಿರ್ಲಕ್ಷ್ಯ ತೋರುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಎಚ್ಚರಿಕೆ ನಿಡಿದರು.

ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುಷ್ಠಾನ ಕುರಿತು ಶುಕ್ರವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ‘ನಿಗದಿತ ಗಡುವಿನೊಳಗೆ ಅನುದಾನ ಬಳಕೆಗೆ ಎಲ್ಲರೂ ಕ್ರಮ ಕೈಗೊಳ್ಳಬೇಕು. ಯೋಜನೆಗಳ ಅನುಷ್ಠಾನದಲ್ಲಿ ವಿಳಂಬ ತೋರುವವರು ಮತ್ತು ನಿರ್ಲಕ್ಷ್ಯ ವಹಿಸುವವರ ವಿರುದ್ಧ ಕ್ರಮ ಜರುಗಿಸಲಾಗುವುದು’ ಎಂದರು.

ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಧಾನ್ಯ ಪೂರೈಕೆಯನ್ನು ಸ್ಥಗಿತಗಳಿಸುವ ಕುರಿತು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಆಯುಕ್ತರಿಗೆ ಪತ್ರ ಬರೆಯುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಅಕ್ಷರ ದಾಸೋಹ ಯೋಜನೆಯಡಿ ಪೂರೈಸುವ ಆಹಾರ ಧಾನ್ಯಗಳ ಗುಣಮಟ್ಟ ಪರೀಕ್ಷಿಸುವಂತೆಯೂ ನಿರ್ದೇಶನ ನೀಡಿದರು.

ಹೈಕೋರ್ಟ್: 68 ನ್ಯಾಯಮೂರ್ತಿಗಳ ನೇಮಕಕ್ಕೆ ಶಿಫಾರಸು

ನವದೆಹಲಿ (ಪಿಟಿಐ): ಕರ್ನಾಟಕ ಸಹಿತ 12 ಹೈಕೋರ್ಟ್‌ಗಳಲ್ಲಿನ ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನ ಕೊಲಿಜಿಯಂ 68 ಜನರ ಹೆಸರನ್ನು ಶಿಫಾರಸು ಮಾಡಿದೆ.

ಈ ಶಿಫಾರಸಿಗೆ ಕೇಂದ್ರ ಸರ್ಕಾರ ಅನುಮೋದನ ನೀಡಿದರೆ, ಕರ್ನಾಟಕ, ಅಲಹಾಬಾದ್, ರಾಜಸ್ಥಾನ, ಕಲ್ಕತ್ತ, ಜಾರ್ಖಂಡ್, ಜಮ್ಮು ಮತ್ತು ಕಾಶ್ಮೀರ, ಮದ್ರಾಸ್, ಮಧ್ಯ ಪ್ರದೇಶ, ಪಂಜಾಬ್ ಮತ್ತು ಹರಿಯಾಣ, ಕೇರಳ, ಛತ್ತೀಸಗಡ ,ಅಸ್ಸಾಂ ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳು ನೇಮಕಗೊಳ್ಳಲಿದ್ದಾರೆ.

ಪೊಲೀಸರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಸೂಚನೆ

ಬೆಂಗಳೂರು: ‘ಬೀದರ್‌ನ ಶಾಹೀನ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದಾಗ ಮಕ್ಕಳ ಹಕ್ಕುಗಳ ಉಲ್ಲಂಘನೆ ಆಗಿರುವ ಸಂಬಂಧ ಇಲಾಖಾ ವಿಚಾರಣೆ ನಡೆಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ತಿಳಿಸಲಾಗಿದೆ’ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ. ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ನಾಟಕ ಪ್ರದರ್ಶನ ಮಾಡಿದ್ದ ಮಕ್ಕಳನ್ನು ವಿಚಾರಣೆ ನಡೆಸುವ ವೇಳೆ ಪೊಲೀಸರು ಆಯುಧಗಳ ಸಹಿತ ಸಮವಸ್ತ್ರ ಧರಿಸಿದ್ದನ್ನು ಅರ್ಜಿದಾರರು ಪ್ರಶ್ನಿಸಿದ್ದರು.

‘1 ರಿಂದ 5ರವರೆಗೆ ಭೌತಿಕ ತರಗತಿ ಆರಂಭಿಸಿ’

ಬೆಂಗಳೂರು: ‘ಕೋವಿಡ್ ಕಡಿಮೆ ಇರುವ ಪ್ರದೇಶಗಳಲ್ಲಿ 1ರಿಂದ 5ರವರೆಗೆ ಭೌತಿಕ ತರಗತಿ ನಡೆಸಲು ಸರ್ಕಾರ ಮುಂದಾಗಬೇಕು’ ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘ (ರುಪ್ಸ) ಮನವಿ ಮಾಡಿದೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ರುಪ್ಸ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ‘ಶಾಲೆಗಳ ಆರಂಭಕ್ಕೆ ಮುಂದಾಗಿರುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. 1ರಿಂದ 5ನೇ ತರಗತಿಗಳನ್ನೂ ಆರಂಭಿಸಬೇಕೆಂದು ಗ್ರಾಮೀಣ ಭಾಗದ ಮಕ್ಕಳ ಪೋಷಕರು ಒತ್ತಾಯಿಸುತ್ತಿದ್ದಾರೆ. ಹಾಗಾಗಿ, ವಾರದಲ್ಲಿ ಎರಡು ದಿನವಾದರೂ ತರಗತಿಗಳನ್ನು ನಡೆಸಲು ಸರ್ಕಾರ ಅನುಮತಿ ನೀಡಬೇಕು’ ಎಂದರು.

ಮುಂಜಾನೆ ಮನೆಮನೆಗೆ ಪತ್ರಿಕೆ ತಲುಪಿಸುವ ಪತ್ರಿಕಾ ವಿತರಕರ ಹಕ್ಕೊತ್ತಾಯ

ಅಸಂಘಟಿತ ಕಾರ್ಮಿಕರ ಪಟ್ಟಿಗೆ ಸೇರಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಿಗ್ಗೆ ಬಾಗಿಲು ತೆರೆಯುವ ಮುನ್ನ ದಿನ ಪತ್ರಿಕೆಗಳು ಮನೆ ಬಾಗಿಲಿಗೆ ತಲುಪಿರುತ್ತವೆ. ಎಲ್ಲರೂ ನಿದ್ರೆಯಿಂದ ಎಚ್ಚರವಾಗುವ ವೇಳೆಗೆ ಅವರ ಕೈಗೆ ಪತ್ರಿಕೆ ಸೇರುವಂತೆ ಮಾಡುವುದರ ಹಿಂದಿನ ಶ್ರಮ ಪತ್ರಿಕೆ ವಿತರಕರದ್ದು.

ಮಧ್ಯರಾತ್ರಿ ವೇಳೆಗೆ ಬಂದಿಳಿಯುವ ಪತ್ರಿಕೆಗಳನ್ನು ಬೆಳಗಿನ ಜಾವದ ಹೊತ್ತಿಗೆ ಮನೆ–ಮನೆಗಳಿಗೆ ತಲುಪಿಸುವ ಕೆಲಸವನ್ನು ಪತ್ರಿಕಾ ವಿತರಕರು ಮಾಡುತ್ತಿದ್ದಾರೆ. ಬೈಸಿಕಲ್‌ನ ಎರಡೂ ಕಡೆಯ ಹ್ಯಾಂಡಲ್‌ಗಳಿಗೆ ಪತ್ರಿಕೆಗಳು ತುಂಬಿದ ಬ್ಯಾಗ್ ನೇತು ಹಾಕಿಕೊಂಡು ಹೊರಟರೆ ಗುರಿ ತಲುಪುವುದೊಂದೇ ತವಕ.

ಇಂದು ಪತ್ರಿಕಾ ವಿತರಕರ ದಿನ

ಕೊರೆವ ಚಳಿ ಇರಲಿ, ಸುರಿವ ಮಳೆಯಿರಲಿ ಲೆಕ್ಕಿಸದೆ ಮುನ್ನುಗುವ ಈ ಕಾಯಕ ನಿಷ್ಠರ ತೊಟ್ಟಿಕ್ಕುವ ಬೆವರ ಹನಿಗಳಿಗೆ ಲೆಕ್ಕವಿಲ್ಲ. ಮನೆ–ಮನೆಗೆ ಪತ್ರಿಕೆ ಹಂಚಿ ಮುಂದೆ ಸಾಗಿದಷ್ಟು ಸೈಕಲ್ ಮೇಲಿನ ಭಾರ ಮತ್ತು ಎದೆ ಭಾರ ಎರಡೂ ಇಳಿಯುತ್ತಾ ಸಾಗುತ್ತದೆ.

ದಾರಿಯಲ್ಲಿ ಸೈಕಲ್ ಚಕ್ರದ ಗಾಳಿ ಹೋಗಲಿ, ಚೈನು ತುಂಡಾಗಲಿ ಓದುಗ ನಿದ್ರೆಯಿಂದೇಳುವ ಹೊತ್ತಿಗೆ ಅವರ ಕೈಗೆ ಪತ್ರಿಕೆ ಮುಟ್ಟಿಸುವುದಷ್ಟೇ ವಿತರಕನ ಗುರಿ. ತನ್ನ ಗುರಿ ತುಲುಪುವ ತನಕ ಉಸಿರುಗಟ್ಟಿ ಸೈಕಲ್ ತುಳಿಯುವ ಈ ಪತ್ರಿಕಾ ವಿತರಕರ ಬದುಕಿಗೆ ಭದ್ರತೆಯೇ ಇಲ್ಲ.


ಈಗ ಕೆಲವರು ದ್ವಿಚಕ್ರ ವಾಹನಗಳನ್ನು ಬಳಸಿದರೂ ದುಡಿದ ಹಣದಲ್ಲಿ ಬಹುಪಾಲು ಪೆಟ್ರೋಲ್ ಖರ್ಚಿಗೆ ಸಮವಾಗುತ್ತಿದೆ.

ಬಹುತೇಕ ಬೆಳಗಾಗುವಷ್ಟರಲ್ಲಿ ಪತ್ರಿಕೆ ಹಂಚಿ ಮರೆಯಾಗುವ ಈ ಶ್ರಮ ಜೀವಿಗಳ ಬದುಕು ಮತ್ತು ಬವಣೆ ಸಮಾಜ ಮತ್ತು ಸರ್ಕಾರದ ಅರಿವಿಗೆ ಬರುವುದೇ ಇಲ್ಲ. ಅರಿವಿಗೆ ಬಂದರೂ ಕಿವಿಗೊಡುವ, ಜೊತೆಗೂಡುವ ಮನಗಳಿಲ್ಲ.

ಪತ್ರಿಕೆಗಳ ಆರಂಭವಾದ ದಿನದಿಂದ ಈ ವೃತ್ತಿ ನಿರ್ವಹಿಸುತ್ತಿದ್ದರೂ, ಈ ಕಾಯಕ ಯೋಗಿಗಳು ಈ ತನಕ ಅಸಂಘಟಿತ ಕಾರ್ಮಿಕರ ಪಟ್ಟಿಯಲ್ಲೂ ಸೇರಿಲ್ಲ. ಅಸಂಘಟಿತ ಕಾರ್ಮಿಕರ ಪಟ್ಟಿಗೆ ಸೇರಿಸಬೇಕು ಎಂಬ ಕೂಗು ಈ ವಲಯದಿಂದ ಆರಂಭವಾಗಿದೆ.



ಈ ಕೆಲಸವನ್ನೇ ನಂಬಿದ ಸಾಕಷ್ಟು ಜನರಿದ್ದಾರೆ. ಆಟೋ ರಿಕ್ಷಾದವರಿಗೆ ನೀಡಿದಂತೆ ಪತ್ರಿಕಾ ವಿತರಿಕರಿಗೂ ಪ್ರೋತ್ಸಾಹಧನ ನೀಡಿದ್ದರೆ ಅನುಕೂಲ ಆಗುತ್ತಿತ್ತು. ವಿಮಾ ಸೌಲಭ್ಯ ನೀಡಿದರೆ ಕುಟುಂಬಕ್ಕೆ ಅನುಕೂಲ ಆಗಲಿದೆ
ಎಂ.ಗೋಪಾಲಪ್ಪ, ಇಂದಿರಾನಗರ




1970ನೇ ಇಸವಿಯಿಂದ ಪತ್ರಿಕೆ ವಿತರಕನ ಕೆಲಸ ಮಾಡುತ್ತಿದ್ದೇನೆ. ಅಂದಿನಿಂದ ಈವರೆಗೆ ಸರ್ಕಾರದಿಂದ ಯಾವುದೇ ಸವಲತ್ತು ನಮಗೆ ದೊರೆತಿಲ್ಲ. ನಮ್ಮ ವೃತ್ತಿ ಮತ್ತು ಕಷ್ಟಗಳನ್ನೂ ಸರ್ಕಾರ ಗುರುತಿಸಬೇಕು
ಆರ್. ಮುದ್ದುವೀರಯ್ಯ, ಬಸವನಗುಡಿ



ಸರ್ಕಾರದ ಯಾವುದೇ ಸವಲತ್ತುಗಳು ನಮಗೆ ಸಿಕ್ಕಿಲ್ಲ. ಯಾರಿಗೆ ಕೇಳಬೇಕು ಎಂಬುದೂ ಗೊತ್ತಿಲ್ಲ. ಸರ್ಕಾರ ಅನುದಾನ ನಿಗದಿ ಮಾಡಿತ್ತು ಎಂಬುದು ಗೊತ್ತು. ಆದರೆ, ಅದರಿಂದ ನಮಗೆ ಯಾವುದೇ ಸವಲತ್ತು ಬಂದಿಲ್ಲ
ಪುಟ್ಟರಾಜು, ಪದ್ಮನಾಭನಗರ



ಪತ್ರಿಕಾ ವಿತರಕರ ಬಗ್ಗೆ ಸರ್ಕಾರಕ್ಕೆ ಕಿಂಚಿತ್ತು ಕಾಳಜಿ ಇಲ್ಲ. ಲಾಕ್‌ಡೌನ್ ಸಂದರ್ಭದಲ್ಲೂ ಯಾವ ಸಹಾಯ ದೊರಕಲಿಲ್ಲ. ಕೂಲಿ ಕಾರ್ಮಿಕರ ರೀತಿ ಕಾರ್ಡ್ ಕೊಟ್ಟರೆ ಸರ್ಕಾರದಿಂದ ಸೌಲಭ್ಯ ಪಡೆದುಕೊಳ್ಳಲು ಸಾಧ್ಯ
ಸಂತೋಷ್ ಶೆಟ್ಟಿ, ವಿದ್ಯಾರಣ್ಯಪುರ





ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಪತ್ರಿಕಾ ವಿತರಕರ ಕಲ್ಯಾಣ ಕಾರ್ಯಕ್ರಮಗಳಿಗೆ ಅನುದಾನ ನಿಗದಿ ಮಾಡಿದ್ದರು. ಆದರೆ, ಅದು ನಮ್ಮ ಸಮುದಾಯಕ್ಕೆ ತಲುಪಲೇ ಇಲ್ಲ. ನಮಗೂ ಸರ್ಕಾರ ಎಲ್ಲರಂತೆ ಸವಲತ್ತು ನೀಡಬೇಕು
ರಾಘವೇಂದ್ರ, ಪ್ಯಾಲೇಸ್ ಗುಟ್ಟಹಳ್ಳಿ



ಕೋವಿಡ್ ಸಂದರ್ಭದಲ್ಲಿ ಪತ್ರಿಕಾ ವಿತರಕರ ಆದಾಯಕ್ಕೆ ಹೊಡೆತ ಬಿದ್ದಿದೆ. ಎರಡು ವರ್ಷಗಳಿಂದ ಸಮಸ್ಯೆ ಹೇಳತೀರದಾಗಿದೆ. ಸರ್ಕಾರದಿಂದ ಯಾವುದೇ ಸಹಕಾರ ದೊರೆತಿಲ್ಲ. ಈಗಲಾದರೂ ಸರ್ಕಾರ ಪರಿಗಣಿಸಲಿ
ಬಸವರಾಜ ಪಾಟೀಲ, ರಾಜರಾಜೇಶ್ವರಿನಗರ



ಪತ್ರಿಕಾ ವಿತರಕರನ್ನು ಮುಖ್ಯವಾಹಿನಿಗೆ ತರುವ ಕೆಲಸ ಈವರೆಗೆ ಆಗಿಲ್ಲ. ಅವರ ಬದುಕು,ವೃತ್ತಿಗೆ ಯಾವುದೇ ಭದ್ರತೆ ಇಲ್ಲ. ಬೆಳಗಿನ ಜಾವ ನಾಯಿ ಕಚ್ಚಿದರೂ ವೈದ್ಯಕೀಯ ನೆರವು ದೊರೆಯುತ್ತಿಲ್ಲ. ಕನಿಷ್ಠ ವಿಮಾ ಸೌಲಭ್ಯವನ್ನಾದರೂ ಸರ್ಕಾರ ಕಲ್ಪಿಸಬೇಕು
ನಾಗೇಶ್, ವೈಟ್‌ಫೀಲ್ಡ್



ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿಯಾಗಿ ನೇಮಕಗೊಂಡಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್.ರಂಗಪ್ಪ ಅವರಿಗೆ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಅವರು ಶುಕ್ರವಾರ ಅಧಿಕಾರ ಹಸ್ತಾಂತರಿಸಿ ಶುಭಕೋರಿದರು.

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಂಡಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 4ರಿಂದ 12ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5ರ ತನಕ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಬಾಪೂಜಿ ನಗರ, ಪಂತರಪಾಳ್ಯ, ಇಂಡಸ್ಟ್ರಿಯಲ್ ಟವರ್, ಚಕ್ರನಗರ, ನೈಸ್ ರಸ್ತೆ, ಸಿದ್ದಿವಿನಾಯಕ ಬಡಾವಣೆ, ಐಟಿಐ ಬಡಾವಣೆ, ಕಾಮಾಕ್ಷಿಪಾಳ್ಯ ಕೈಗಾರಿಕಾ ಪ್ರದೇಶ, ಕೆ.ಸಿ.ಜಿ. ಎಸ್ಟೇಟ್, ಪೇಟೆಚನ್ನಪ್ಪ ಕೈಗಾರಿಕಾ ಪ್ರದೇಶ.

ಬ್ಯಾಡರಹಳ್ಳಿ, ಅಂಜನಾ ನಗರ, ಬಿಇಎಲ್ ಬಡಾವಣೆ, ಬಿಇಎಲ್ ಬಡಾವಣೆ ಎರಡನೇ ಹಂತ, ಗಿಡ್ಡದಕೋನೇನಹಳ್ಳಿ, ಮುದ್ದಿನ ಪಾಳ್ಯ, ಬಿಡಿಎ 8–9ನೇ ಹಂತ, ರೈಲ್ವೆ ಬಡಾವಣೆ, ಉಪಕಾರ್ ಬಡಾವಣೆ, ಭವಾನಿ ಬಡಾವಣೆ, ಬಾಲಾಜಿ ಬಡಾವಣೆ, ಗೊಲ್ಲರಹಟ್ಟಿ, ರತ್ನ ನಗರ, ಮಾಡ್ರನ್ ಬಡಾವಣೆ, ಬಿಎಂಟಿಸಿ ಡಿಪೊ, ಕೆಬ್ಬೆಹಳ್ಳ, ಮಹದೇಶ್ವರ ನಗರ, ಮುನೇಶ್ವರ ನಗರ, ಚನ್ನಪ್ಪ ಬಡಾವಣೆ, ಶ್ರೀನಿವಾಸ ನಗರ, ಹೆಗ್ಗನಹಳ್ಳಿ ಮುಖ್ಯರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶ.

ವಸಂತ ವಲ್ಲಭ ನಗರ, ಶಾರದಾ ನಗರ, ಮಾರುತಿ ಬಡಾವಣೆ, ಇಸ್ರೊ ಬಡಾವಣೆ, ಕುಮಾರಸ್ವಾಮಿ ಬಡಾವಣೆ, 50 ಅಡಿ ರಸ್ತೆ, ಟೀಚರ್ಸ್ ಕಾಲೊನಿ, ಜರಗನಹಳ್ಳಿ, ಎಂ.ಎಸ್. ಬಡಾವಣೆ, ಜಿ.ಕೆ.ಎಂ. ಕಾಲೇಜು ರಸ್ತೆ, ಚಿಕ್ಕಸ್ವಾಮಿ ಬಡಾವಣೆ, ರಾಜಮ್ಮ ಗಾರ್ಡನ್, ಗೋವಿಂದ ರೆಡ್ಡಿ, ರಾಜೀವ್ ಗಾಂಧಿ ರಸ್ತೆ, ಪದ್ಮನಾಭ ನಗರ, ಬನಗಿರಿ ನಗರ ಉದ್ಯಾನ ರಸ್ತೆ, ಪ್ರಾರ್ಥನಾ ಶಾಲೆ, ಬನಶಂಕರಿ ಎರಡನೇ ಹಂತ, ಜೆ.ಪಿ. ನಗರ ಎರಡನೇ ಹಂತ, ಡಾಲರ್ಸ್ ಬಡಾವಣೆ, ಚನ್ನಮ್ಮ ಅಚ್ಚುಕಟ್ಟು ಪ್ರದೇಶ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ.

ಲಾಲ್‌ಬಾಗ್ ರಸ್ತೆ, ಬಚ್ಚೇಗೌಡ ಕಾಂಪೌಂಡ್, ನಂದಿನಿ ಅಪಾರ್ಟ್‌ಮೆಂಟ್, ಲಕ್ಷ್ಮಿ ರಸ್ತೆ, ಕುಮಾರಸ್ವಾಮಿ ಬಡಾವಣೆ, ಪೈಪ್‌ಲೈನ್ ರಸ್ತೆ, ಸಮೃದ್ಧಿ ಬಡಾವಣೆ, ವಿಠ್ಠಲ ನಗರ, ಕಾರ್ಮೆಲ್ ಶಾಲೆ ಪ್ರದೇಶ, ಭವಾನಿ ನಗರ, ತ್ಯಾಗರಾಜ ನಗರ, ಬಿಬಿಎಂಪಿ ಈಜುಕೊಳ, ಜೆ.ಸಿ. ರಸ್ತೆ, ಪ್ರತಿಮಾ ಕೈಗಾರಿಕಾ ಬಡಾವಣೆ, ಕುವೆಂಪು ನಗರ, ರಾಜೀವ್ ಗಾಂಧಿ ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಿಸಿಬಿ ವಿಚಾರಣೆ ಎದುರಿಸಿದ್ದ ದಿಗಂತ್, ಐಂದ್ರಿತಾ ರೇ, ಅಕುಲ್

ಡ್ರಗ್ಸ್; ನಟ–ನಟಿ, ನಿರೂಪಕ ಸಾಕ್ಷಿ

• ಸಂತೋಷ ಜಿಗಳಿಕೊಪ್ಪ


ದಿಗಂತ್


ಐಂದ್ರಿತಾ ರೇ


ರಮೇಶ್


ಅಕುಲ್

ದೊಡ್ಡವರ 'ಡ್ರಗ್ಸ್' ನಶೆ

ಬೆಂಗಳೂರು: ತಮ್ಮದೇ ವ್ಯವಸ್ಥಿತ ಜಾಲ ರೂಪಿಸಿಕೊಂಡು ನಗರದ ಹಲವೆಡೆ ಡ್ರಗ್ಸ್ ಪಾರ್ಟಿಗಳನ್ನು ಆಯೋಜಿಸಿ ಅಕ್ರಮವಾಗಿ ಹಣ ಸಂಪಾದಿಸುತ್ತಿದ್ದ 25 ಆರೋಪಿಗಳ ಕೃತ್ಯಕ್ಕೆ, ಸಿನಿಮಾ ನಟ-ನಟಿ, ಕಾರ್ಯಕ್ರಮ ನಿರೂಪಕ, ನಿರ್ದೇಶಕ ಹಾಗೂ ಹಲವರು ಸಾಕ್ಷಿ ಆಗಿದ್ದಾರೆ.

ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿರುವ ಸಿಸಿಬಿ ಪೊಲೀಸರು, ಡ್ರಗ್ಸ್ ಮಾರಾಟ ಹಾಗೂ ಸೇವನೆಯನ್ನು ಕಣ್ಣಾರೆ ಕಂಡಿರುವ ಸಾಕ್ಷಿದಾರರ ವಿವರವನ್ನೂ ದಾಖಲಿಸಿದ್ದಾರೆ.

'ನಟ ದಿಗಂತ್ ಹಾಗೂ ಅವರ ಪತ್ನಿ, ನಟಿ ಐಂದ್ರಿತಾ ರೇ, ನಿರ್ದೇಶಕ ಇಂದ್ರಜಿತ್ ಲಂಕೇಶ್, ಕಾರ್ಯಕ್ರಮ ನಿರೂಪಕ ಅಕುಲ್ ಬಾಲಾಜಿ, ರೂಪದರ್ಶಿ ರಮೇಶ್ ಡಂಬ್ಲಾ ಸೇರಿದಂತೆ ಹಲವರ ಹೆಸರು ಸಾಕ್ಷಿದಾರರ ಪಟ್ಟಿಯಲ್ಲಿದೆ. ಅವರೆಲ್ಲರೂ ನ್ಯಾಯಾಲಯದಲ್ಲಿ ಸಿಆರ್‌ಪಿಸಿ 164ರಡಿ ಈಗಾಗಲೇ ಹೇಳಿಕೆ ದಾಖಲಿಸಿದ್ದಾರೆ' ಎಂಬುದಾಗಿ ಸಿಸಿಬಿ ಪೊಲೀಸರು ಆರೋಪ ಪಟ್ಟಿಯಲ್ಲಿ ಹೇಳಿದ್ದಾರೆ.

'ಪ್ರಕರಣದ ಆರೋಪಿಗಳು, 2016ರಿಂದಲೇ ಪಾರ್ಟಿಗಳನ್ನು ಆಯೋಜಿಸುತ್ತಿದ್ದರು. ಆರಂಭದಲ್ಲಿ ಮದ್ಯ ಹಾಗೂ ಮೋಜಿಗಷ್ಟೇ ಪಾರ್ಟಿ ಸೀಮಿತವಾಗಿತ್ತು. ಕ್ರಮೇಣ, ಗಾಂಜಾ ಸೇವನೆ ಹಾಗೂ ಮಾರಾಟ ಶುರುವಾಯಿತು. ನೈಜೀರಿಯಾ ಪ್ರಜೆಗಳ ಒಡನಾಟ ಬೆಳೆಸಿಕೊಂಡ ಆರೋಪಿಗಳು, ಕೊಕೇನ್ ಹಾಗೂ ಎಂಡಿಎಂಎ ಮಾತ್ರೆಗಳ ವ್ಯವಹಾರವೂ ಆರಂಭವಾಯಿತು. ಇಂಥ ಕೆಲ ಪಾರ್ಟಿಗಳಲ್ಲಿ ಸಾಕ್ಷಿದಾರರು ಪಾಲ್ಗೊಂಡಿದ್ದರು' ಎಂದು ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ.

'ಪ್ರಕರಣದ 10ನೇ ಆರೋಪಿ ಅಭಿಸ್ವಾಮಿ ಅಲಿಯಾಸ್ ಅಭಿಜಿತ್ ರಂಗಸ್ವಾಮಿ, ನೆಲಮಂಗಲ ರಸ್ತೆಯಲ್ಲಿರುವ ತನ್ನ ಮನೆಯಲ್ಲಿ ಡ್ರಗ್ಸ್ ಪಾರ್ಟಿ ಆಯೋಜಿಸಿದ್ದ. ಅವರೊಬ್ಬರ ಆಹ್ವಾನದಂತೆ ನಟ ದಿಗಂತ್ ಹಾಗೂ ನಟಿ ಐಂದ್ರಿತಾ ರೇ ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು' ಎಂಬ ಮಾಹಿತಿಯನ್ನು ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'ಪಾರ್ಟಿಗೆ ಮುನ್ನವೇ ಆರೋಪಿ ಅಭಿಸ್ವಾಮಿ, ಮತ್ತೊಬ್ಬ ಆರೋಪಿ ಬಿ.ಕೆ. ರವಿಶಂಕರ್‌ನಿಂದ ಕೊಕೇನ್ ಪುಡಿ ಹಾಗೂ ಎಕ್ಸ್‌ಸಿ ಮಾತ್ರೆಗಳನ್ನು ಖರೀದಿಸಿಟ್ಟುಕೊಂಡಿದ್ದ. ಪಾರ್ಟಿಯಲ್ಲಿ ಪಾಲ್ಗೊಂಡಿದ್ದವರಿಗೆ ಅವುಗಳನ್ನು ಮಾರಿದ್ದ. ಕೆಲವರು ಡ್ರಗ್ಸ್ ಸೇವನೆ ಮಾಡಿದ್ದರೆಂದು ಸಾಕ್ಷಿದಾರರು ಹೇಳಿಕೆಯಲ್ಲಿ ವಿವರಿಸಿದ್ದಾರೆ' ಎಂಬ ಅಂಶವೂ ಪಟ್ಟಿಯಲ್ಲಿದೆ.

'2019ರ ಅಕ್ಟೋಬರ್ 9ರಂದು ನ್ಯೂ ಬಿಇಎಲ್ ರಸ್ತೆಯಲ್ಲಿರುವ 'ಹಾಫ್ ವೇ ಹೌಸ್' ರೆಸ್ಟೋರೆಂಟ್‌ನಲ್ಲಿ ನಟಿ ಸಂಜನಾ ಗಲ್ರಾನಿ ಹುಟ್ಟುಹಬ್ಬದ ಪಾರ್ಟಿ ಇತ್ತು. ಸಾಕ್ಷಿದಾರ ರಮೇಶ್ ಡೆಂಬ್ಲಾ ಪಾಲ್ಗೊಂಡಿದ್ದರು. ಅವರನ್ನು ಮಾತನಾಡಿಸಿದ್ದ ಸಂಜನಾ, ಸ್ನಫ್ (ಕೊಕೇನ್) ತೆಗೆದುಕೊಳ್ಳುತ್ತೀರಾ ? ಎಂದು ಕೇಳಿದ್ದರು. 'ಬೇಡ' ಎಂದಿದ್ದ ರಮೇಶ್, ಅಲ್ಲಿಂದ ಹೊರಟು ಹೋಗಿದ್ದರು. ಈ ಸಂಗತಿಯನ್ನೂ ಸಾಕ್ಷಿದಾರ ಹೇಳಿಕೆಯಲ್ಲಿ ವಿವರಿಸಿದ್ದಾರೆ' ಎಂಬ ಮಾಹಿತಿಯೂ ಆರೋಪ ಪಟ್ಟಿಯಲ್ಲಿದೆ.

'2019ರ ಏಪ್ರಿಲ್ 28 ಹಾಗೂ 29ರಂದು ಹೊಸೂರು ರಸ್ತೆಯಲ್ಲಿರುವ 'ದವನಮ್ ಸರೋವರ್ ಪೋರ್ಟಿಕೊ' ಹೋಟೆಲ್‌ನಲ್ಲಿ ಫ್ಯಾಷನ್ ಷೋ ಆಯೋಜಿಸಲಾಗಿತ್ತು. ರೂಪದರ್ಶಿಯಾಗಿ ರಮೇಶ್ ಡಂಬ್ಲಾ ಪಾಲ್ಗೊಂಡಿದ್ದರು. ನಟಿ ರಾಗಿಣಿ ದ್ವಿವೇದಿ ಹಾಗೂ ಬಿ.ಕೆ. ರವಿಶಂಕರ್ ಕೊಠಡಿಯಲ್ಲಿ ಕೊಕೇನ್ ಸೇವಿಸಿದ್ದನ್ನು ರಮೇಶ್ ನೋಡಿದ್ದಾರೆ' ಎಂಬ ಅಂಶವನ್ನೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'ನ್ಯಾಯಾಲಯದಲ್ಲಿ ಸದ್ಯದಲ್ಲೇ ವಿಚಾರಣೆ ಆರಂಭ'

'ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣದ ತನಿಖೆ ನಡೆಸಿದ್ದ ಸಿಸಿಬಿ ಪೊಲೀಸರ ತಂಡ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ. ಸದ್ಯದಲ್ಲೇ ವಿಚಾರಣೆ ಆರಂಭವಾಗಲಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಪ್ರಕರಣದ ಆರೋಪಿಗಳು ಕೆಲ ದಿನ ಜೈಲುವಾಸ ಅನುಭವಿಸಿದ್ದರು. ಸದ್ಯ ಅವರೆಲ್ಲ ಜಾಮೀನು ಮೇಲೆ ಹೊರಗಿದ್ದಾರೆ' ಎಂದರು.

ಖಾತೆ ಬದಲಾವಣೆಗೆ ಲಂಚ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನದ ಖಾತೆ ಬದಲಾವಣೆ ಮಾಡಲು ₹ 13,000 ಲಂಚ ಪಡೆದ ಆರೋಪದ ಮೇಲೆ ಹೊಸಕೋಟೆ ತಾಲ್ಲೂಕಿನ ಬೋದನ ಹೊಸಹಳ್ಳಿ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ ಬಿ. ರಾಮಮೂರ್ತಿ ಮತ್ತು ಡಿ. ದರ್ಜೆ ನೌಕರ ಶಿವಕುಮಾರ್ ಎಸ್. ಎಂಬುವವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶುಕ್ರವಾರ ಬಂಧಿಸಿದೆ.

ಈ ಕುರಿತು ಅರ್ಜಿದಾರರು ಎಸಿಬಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕಕ್ಕೆ ದೂರು ನೀಡಿದ್ದರು ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

'ಶುಕ್ರವಾರ ಅರ್ಜಿದಾರರು ಗ್ರಾಮ ಪಂಚಾಯಿತಿ ಕಚೇರಿಗೆ ಭೇಟಿನೀಡಿ, ಕೆಲಸದ ಕುರಿತು ವಿಚಾರಿಸಿದರು. ರಾಮಮೂರ್ತಿ ಸೂಚನೆಯಂತೆ ಶಿವಕುಮಾರ್ ಲಂಚದ ಹಣವನ್ನು ಪಡೆದುಕೊಂಡರು. ತಕ್ಷಣ ದಾಳಿ ನಡೆಸಿದ ಎಸಿಬಿ ಅಧಿಕಾರಿಗಳ ತಂಡ ಇಬ್ಬರನ್ನೂ ಬಂಧಿಸಿದೆ' ಎಂದು ಮಾಹಿತಿ ನೀಡಿದ್ದಾರೆ.

'ದೇವಸ್ಥಾನದಲ್ಲಿ ಮಾತ್ರ ಮೂರ್ತಿ ಪ್ರತಿಷ್ಠಾಪನೆ'

ಬೆಂಗಳೂರು: 'ಸಾರ್ವಜನಿಕವಾಗಿ ನಗರದ ದೇವಸ್ಥಾನಗಳಲ್ಲಿ ಮಾತ್ರ ಗಣಪತಿ ಮೂರ್ತಿ ಪ್ರತಿಷ್ಠಾಪಿಸಲು ಅನುಮತಿ ಇದೆ. ರಸ್ತೆಯಲ್ಲಿ ಮೂರ್ತಿ ಪ್ರತಿಷ್ಠಾಪಿಸಲು ಸದ್ಯಕ್ಕೆ ಯಾವುದೇ ಅವಕಾಶವನ್ನು ಸರ್ಕಾರ ನೀಡಿಲ್ಲ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಪೊಲೀಸ್ ಸೇವಾ ಕವಾಯತು ವೀಕ್ಷಿಸಿದ ನಂತರ, ಸುದ್ದಿಗಾರರ ಜೊತೆ ಅವರು ಮಾತನಾಡಿದರು.

'ಗಣೇಶ ಹಬ್ಬ ಹತ್ತಿರವಾಗುತ್ತಿದ್ದು, ನಗರದಲ್ಲಿ ಭದ್ರತೆ ತಯಾರಿ ಶುರು ಮಾಡಲಾಗಿದೆ. ಹಬ್ಬ ಆಚರಣೆ ಬಗ್ಗೆ ರಾಜ್ಯ ಸರ್ಕಾರದಿಂದ ಹೊಸ ನಿಯಮಾವಳಿಗಳು ಜಾರಿಯಾದರೆ, ಅದರನ್ವಯ ಕ್ರಮ ಕೈಗೊಳ್ಳಲಾಗುವುದು' ಎಂದರು. 'ದೇವಸ್ಥಾನದಲ್ಲಿ ಮೂರ್ತಿ ಪ್ರತಿಷ್ಠಾಪನೆಗೂ ಮುನ್ನ ಬಿಬಿಎಂಪಿ ಹಾಗೂ ಪೊಲೀಸ್ ಇಲಾಖೆಯಿಂದ ಅನುಮತಿ ಪಡೆಯುವುದು ಕಡ್ಡಾಯ.' ಎಂದೂ ಹೇಳಿದರು.

ರವಿಕೃಷ್ಣಾರೆಡ್ಡಿ ವಿರುದ್ಧ ದೂರು

ನಂಜನಗೂಡು: ನಗರದ ತಾಲ್ಲೂಕು ಕಚೇರಿಯಲ್ಲಿ ಅಧಿಕಾರಿಗಳಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಬೆದರಿಕೆಯೊಡ್ಡಿರುವ ಆರೋಪದಡಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಅಧ್ಯಕ್ಷ ರವಿಕೃಷ್ಣಾರೆಡ್ಡಿ ಸೇರಿದಂತೆ ಹಲವರ ವಿರುದ್ಧ ತಹಶೀಲ್ದಾರ್ ಮೋಹನಕುಮಾರಿ ಅವರು ನಗರದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ರವಿಕೃಷ್ಣಾರೆಡ್ಡಿ, ಮರಳೂರುಹುಂಡಿ ಗ್ರಾಮದ ನೂರಾರು ಸೇರಿದಂತೆ ಜನರ ಗುಂಪು ಆ.31ರಂದು ಸಂಜೆ ತಾಲ್ಲೂಕು ಕಚೇರಿಗೆ ಲಗ್ಗೆ ಹಾಕಿ, ಕರ್ತವ್ಯದಲ್ಲಿದ್ದ ದ್ವಿತೀಯ ದರ್ಜೆ ಸಹಾಯಕ ಶ್ರೀನಿವಾಸ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ.' ಎಂದು ತಹಶೀಲ್ದಾರ್ ದೂರಿನಲ್ಲಿ ತಿಳಿಸಿದ್ದಾರೆ.

ಗೋವಿಂದಪುರ ಪೊಲೀಸರಿಂದ ಮತ್ತೊಬ್ಬ ಆರೋಪಿ ಬಂಧನ

ಆ್ಯಪ್ ಪ್ರತಿನಿಧಿ ಸೋಗಿನಲ್ಲಿ ಡ್ರಗ್ಸ್ ಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಪೂರೈಕೆ ಆ್ಯಪ್ ಪ್ರತಿನಿಧಿ ಸೋಗಿನಲ್ಲಿ ಡ್ರಗ್ಸ್ ಸಾಗಣೆ ಮಾಡುತ್ತಿದ್ದ ಜಾಲವನ್ನು ಗೋವಿಂದಪುರ ಠಾಣೆ ಪೊಲೀಸರು ಭೇದಿಸಿದ್ದು, ಈ ಸಂಬಂಧ ಆರೋಪಿ ಅಬ್ದುಲ್ ಖಾದರ್ ಎಂಬಾತನನ್ನು ಬಂಧಿಸಿದ್ದಾರೆ.


ಅಬ್ದುಲ್ ಖಾದರ್

ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ನೈಜೀರಿಯಾದ ಥಾಮಸ್ ಕಲ್ಲು ಎಂಬಾತನನ್ನು ಪೊಲೀಸರು ಇತ್ತೀಚೆಗಷ್ಟೇ ಬಂಧಿಸಿದ್ದರು. ತನಿಖೆ ಮುಂದುವರಿಸಿ, ಮಹಿಳಾ ಉದ್ಯಮಿ ಸೋನಿಯಾ ಅಗರವಾಲ್ ಹಾಗೂ ಆಕೆಯ ಸ್ನೇಹಿತ ಡಾ. ದಿಲೀಪ್‌ನನ್ನೂ ಸೆರೆಹಿಡಿದಿದ್ದರು.

'ಆ್ಯಪ್ ಪ್ರತಿನಿಧಿ ಮೂಲಕ ಡ್ರಗ್ಸ್ ತರಿಸುತ್ತಿದ್ದ ಬಗ್ಗೆ ಸೋನಿಯಾ ವಿಚಾರಣೆಯಲ್ಲಿ ಬಾಯ್ಬಿಟ್ಟಿದ್ದರು. ಅದೇ ಮಾಹಿತಿ ಆಧರಿಸಿ ಕೇರಳದ ಅಬ್ದುಲ್ ಖಾದರ್‌ನನ್ನು ಗುರುವಾರ ಬಂಧಿಸಲಾಗಿದೆ. ಆತನ ಬಳಿ ಇದ್ದ ಎಕ್ಸ್‌ಟೆಸಿ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ಪೊಲೀಸರು ಹೇಳಿದರು.

'ಬಿಟಿಎಂ ಬಡಾವಣೆಯಲ್ಲಿ ವಾಸವಿದ್ದ ಖಾದರ್, ನೈಜೀರಿಯಾ ಪ್ರಜೆಗಳ ಜೊತೆ ಒಡನಾಡವಿಟ್ಟುಕೊಂಡು ಕಡಿಮೆ ದರಕ್ಕೆ ಡ್ರಗ್ಸ್ ಖರೀದಿಸುತ್ತಿದ್ದ. ಸ್ವಿಗ್ಗಿ, ಡನ್ಜೊ ಹಾಗೂ ಇತರೆ ಆ್ಯಪ್‌ಗಳ ಪ್ರತಿನಿಧಿಗಳ ಸೋಗಿನಲ್ಲಿ ಸುತ್ತಾಡಿ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದ' ಎಂದೂ ತಿಳಿಸಿದರು.

ಡ್ರಗ್ಸ್ ಕಾಯ್ದಿರಿಸಲು 'ಸ್ಮೈಲಿ' ಎಮೋಜಿ: 'ಆಹಾರ ಪದಾರ್ಥಗಳ ಪೊಟ್ಟಣಗಳಲ್ಲಿ ಡ್ರಗ್ಸ್ ಬಚ್ಚಿಟ್ಟು ಗ್ರಾಹಕರಿಗಾಗಿ ಕಳುಹಿಸಲಾಗುತ್ತಿತ್ತು. ಇಂಥ ಪೊಟ್ಟಣವನ್ನೇ ಸೋನಿಯಾ ಹಾಗೂ ದಿಲೀಪ್ ಖರೀದಿಸಿದ್ದರು' ಎಂದು ಪೊಲೀಸರು ವಿವರಿಸಿದರು.

'ಆರೋಪಿ ಡ್ರಗ್ಸ್‌ಗೆ 'ಸ್ಮೈಲ್' ಎಮೋಜಿ ಸಂಕೇತ ನೀಡಿದ್ದ. ವಾಟ್ಸ್‌ಆ್ಯಪ್‌ನಲ್ಲಿ ಯಾರಾದರೂ 'ಸ್ಮೈಲ್' ಎಮೋಜಿ ಕಳುಹಿಸಿದರೆ ಅವರಿಗೆ ಗಾಂಜಾ, ಎಕ್ಸ್‌ಟೆಸಿ ಹಾಗೂ ಎಂಡಿಎಂಎ ಮಾತ್ರೆಗಳನ್ನು ತಲುಪಿಸುತ್ತಿದ್ದ. ಆ್ಯಪ್ ಪ್ರತಿನಿಧಿಗಳ ರೀತಿಯಲ್ಲೇ ಬಟ್ಟೆ ಧರಿಸಿ ಹಾಗೂ ದ್ವಿಚಕ್ರ ವಾಹನದಲ್ಲಿ ಸುತ್ತಾಡುತ್ತಿದ್ದ. ಈತನ ಜೊತೆ ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವ ಅನುಮಾನವಿದೆ' ಎಂದೂ ಪೊಲೀಸರು ಹೇಳಿದರು.

ಡ್ರಗ್ಸ್; ಯುವತಿ ಸೇರಿ ಇಬ್ಬರು ವಶಕ್ಕೆ

ಬೆಂಗಳೂರು: ಮಣಿಪುರದಿಂದ ಡ್ರಗ್ಸ್ ತಂದು ನಗರದಲ್ಲಿ ಮಾರುತ್ತಿದ್ದ ಆರೋಪದಡಿ ಯುವತಿ ಸೇರಿ ಇಬ್ಬರನ್ನು ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಖಾಲಿದಾ ಹಾಗೂ ಸುಹೇಲ್ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ. ಅವರಿಂದ ಸುಮಾರು ₹ 16 ಲಕ್ಷ ಮೌಲ್ಯದ ಹೆರಾಯಿನ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಣಿಪುರದಿಂದ ರೈಲಿನಲ್ಲಿ ನಗರಕ್ಕೆ ಬಂದಿದ್ದ ಆರೋಪಿಗಳು, ಅಗತ್ಯ ವಸ್ತುಗಳ ಬ್ಯಾಗ್‌ನಲ್ಲಿ ಬಚ್ಚಿಟ್ಟುಕೊಂಡು ಹೆರಾಯಿನ್ ತಂದಿದ್ದರು. ನಗರದಲ್ಲಿ ಪೆಡ್ಲರ್ ಮೂಲಕ ಗ್ರಾಹಕರಿಗೆ ಮಾಡಲು ಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದೂ ತಿಳಿಸಿವೆ.

ಗಾಂಜಾ ಮಾರಾಟ: ಬಂಧನ

ಬೆಂಗಳೂರು: ಕಲಾಸಿ ಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಬಂಧಿಸಿರುವ ಪೊಲೀಸರು, ಆತನಿಂದ 6 ಕೆಜಿ 263 ಗ್ರಾಂ ಗಾಂಜಾ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಿದ್ದಾರೆ.

ಲಿಯಾಕತ್ ಅಲಿ ಬಂಧಿತ ಆರೋಪಿ. ಈತ ನಗರದ ಮಾವಳ್ಳಿ ನಿವಾಸಿ ಎಂಬುದು ತನಿಖೆಯಿಂದ ಗೊತ್ತಾಗಿದೆ. ಈತನ ವಿರುದ್ಧ ಪ್ರಕರಣವನ್ನೂ ದಾಖಲಿಸಲಾಗಿದೆ.

'ಠಾಣಾ ವ್ಯಾಪ್ತಿಯಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಗಾಂಜಾ ಮಾರುತ್ತಿರುವ ಮಾಹಿತಿ ಆಧರಿಸಿ ಸ್ಥಳಕ್ಕೆ ಭೇಟಿ ನೀಡಿದ ಸಿಬ್ಬಂದಿ ಜನತಾ ಲಾಡ್ಜ್ ಬಳಿ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ. ಆತ ಆಂಧ್ರಪ್ರದೇಶದಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಎಂಬುದು ವಿಚಾರಣೆಯಿಂದ ತಿಳಿದುಬಂದಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಈತನ ಕಾರ್ಯಕ್ಕೆ ಮತ್ತೊಬ್ಬ ವ್ಯಕ್ತಿ ಸಹಕರಿಸುತ್ತಿದ್ದ ಎಂಬುದೂ ವಿಚಾರಣೆಯಿಂದ ಗೊತ್ತಾಗಿದೆ. ಆತನ ಪತ್ತೆ ಕಾರ್ಯ ಪ್ರಗತಿಯಲ್ಲಿದೆ. ಕಳೆದ ಒಂದು ವರ್ಷದಿಂದ ಈ ಕಾರ್ಯದಲ್ಲಿ ತೊಡಗಿಕೊಂಡಿರುವುದಾಗಿ ಆತ ಹೇಳಿದ್ದಾನೆ. ಆರೋಪಿಯಿಂದ ಇನ್ನಷ್ಟು ಮಾಹಿತಿಗಳನ್ನು ಕಲೆಹಾಕಿ ಅದರ ಆಧಾರದಲ್ಲಿ ತನಿಖೆ ಮುಂದುವರಿಸಲಾಗುತ್ತದೆ' ಎಂದೂ ತಿಳಿಸಿದ್ದಾರೆ.



ವಶಪಡಿಸಿಕೊಂಡಿರುವ ಸ್ಕೂಟರ್ ಹಾಗೂ ಗಾಂಜಾ

₹ 2 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

ರೈಲಿನಲ್ಲಿ ಸಾಗಿಸಿ ತರುತ್ತಿದ್ದ ಡ್ರಗ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್ ಠಾಣೆ ವ್ಯಾಪ್ತಿಯ ಮನೆಯೊಂದರ ಮೇಲೆ ಸಿಸಿಬಿ ಪೊಲೀಸರು ಗುರುವಾರ ದಾಳಿ ಮಾಡಿದ್ದು, ₹ 2 ಕೋಟಿ ಮೌಲ್ಯದ ಮಾದಕ ವಸ್ತು (ಡ್ರಗ್ಸ್) ಜಪ್ತಿ ಮಾಡಿದ್ದಾರೆ. ಡ್ರಗ್ಸ್ ಸಂಗ್ರಹಿಸಿಟ್ಟುಕೊಂಡು ಮಾರಾಟ ಮಾಡುತ್ತಿದ್ದ ಆರೋಪದಡಿ ವಿಕಾಸ್ ಸಿಂಗ್ ಮತ್ತು ಶಿವಂ ಸಿಂಗ್ ಎಂಬುವರನ್ನು ಬಂಧಿಸಿದ್ದಾರೆ.

'ಜಾರ್ಖಂಡ್‌ನ ಆರೋಪಿಗಳು, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ವೈಟ್‌ಫೀಲ್ಡ್‌ನ ಬಾಡಿಗೆ ಮನೆಯಲ್ಲಿ ವಾಸವಿದ್ದುಕೊಂಡು ಡ್ರಗ್ಸ್ ದಂಧೆ ನಡೆಸುತ್ತಿದ್ದರು. ಈ ಬಗ್ಗೆ ಭಾತ್ಮೀದಾರರೊಬ್ಬರಿಂದ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಲಾಯಿತು' ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'150 ಎಂಡಿಎಂಎ ಮಾತ್ರೆಗಳು, 400 ಗ್ರಾಂ ಚರಸ್, 180 ಎಲ್‌ಎಸ್‌ಡಿ ಕಾಗದ ಚೂರುಗಳು, 3,520 ಗ್ರಾಂ ಹಶೀಷ್, 50 ಹೈಡ್ರೊ ಗಾಂಜಾ ಹಾಗೂ 30 ಕೆ.ಜಿ ಗಾಂಜಾ ಆರೋಪಿಗಳ ಮನೆಯಲ್ಲಿ ಸಿಕ್ಕಿದೆ. ಕೃತ್ಯಕ್ಕಾಗಿ ಆರೋಪಿಗಳು ಬಳಸುತ್ತಿದ್ದ 2 ಮೊಬೈಲ್‌ಗಳು ಹಾಗೂ ಎರಡು ತೂಕದ ಯಂತ್ರಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.


ಸಿಸಿಬಿ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ಎಕ್ಸ್‌ಟೆಸಿ ಮಾತ್ರೆಗಳು

'ಡ್ರಗ್ಸ್ ಮಾರಾಟವನ್ನೇ ವಿಕಾಸ್ ಸಿಂಗ್ ಮತ್ತು ಶಿವಂ ಸಿಂಗ್ ವೃತ್ತಿ ಮಾಡಿಕೊಂಡಿದ್ದರು. ಕೆಲ ಸಾಫ್ಟ್‌ವೇರ್ ಎಂಜಿನಿಯರ್ ಹಾಗೂ ಕೆಲ ಕಾಲೇಜು ವಿದ್ಯಾರ್ಥಿಗಳಿಗೆ ಡ್ರಗ್ಸ್ ಮಾರುತ್ತಿದ್ದರು' ಎಂದೂ ಹೇಳಿದರು.

ದೆಹಲಿ ಕೇಂದ್ರ ಸ್ಥಾನ: 'ಡ್ರಗ್ಸ್ ದಂಧೆಯ ಪ್ರಮುಖ ಆರೋಪಿ ತಲೆಮರೆಸಿಕೊಂಡಿದ್ದಾನೆ. ದೆಹಲಿಯನ್ನು ಕೇಂದ್ರ ಸ್ಥಾನ ಮಾಡಿಕೊಂಡಿದ್ದ ಆತ, ಅಲ್ಲಿಂದಲೇ ಡ್ರಗ್ಸ್ ಮಾರುತ್ತಿದ್ದ. ಈ ಬಗ್ಗೆ ಬಂಧಿತ ಆರೋಪಿಗಳು ಹೇಳಿಕೆ ನೀಡಿದ್ದಾರೆ' ಎಂದೂ ಹೇಳಿದರು.

'ಡಾರ್ಕ್ ನೆಟ್ ಜಾಲತಾಣಗಳನ್ನು ಬಳಸುತ್ತಿದ್ದ ಪ್ರಮುಖ ಆರೋಪಿ, ವಿದೇಶಿಗರಿಂದ ಡ್ರಗ್ಸ್ ಖರೀದಿಸುತ್ತಿದ್ದ. ಕೊರಿಯರ್ ಮೂಲಕ ದೇಶಕ್ಕೆ ಡ್ರಗ್ಸ್ ತರಿಸಿಕೊಳ್ಳುತ್ತಿದ್ದ. ನಂತರ, ಅಗತ್ಯ ವಸ್ತುಗಳ ಪೊಟ್ಟಣದಲ್ಲಿ ಡ್ರಗ್ಸ್ ಬಚ್ಚಿಟ್ಟು ದೇಶದ ವಿವಿಧ ರಾಜ್ಯಗಳಿಗೆ ರೈಲಿನಲ್ಲಿ ಅಕ್ರಮವಾಗಿ ಕಳುಹಿಸುತ್ತಿದ್ದ. ಬೆಂಗಳೂರು ಸೇರಿದಂತೆ ಹಲವು ನಗರಗಳಲ್ಲಿರುವ ಪೆಡ್ಲರ್‌ಗಳು, ಡ್ರಗ್ಸ್ ಪಾರ್ಸೆಲ್ ಪಡೆದು ಗ್ರಾಹಕರಿಗೆ ಮಾರುತ್ತಿದ್ದರು. ' ಎಂದೂ ತಿಳಿಸಿದರು.

ಭಯೋತ್ಪಾದನಾ ಕೃತ್ಯ; ಹೆಚ್ಚುವರಿ ಆರೋಪ ಪಟ್ಟಿ

ಬೆಂಗಳೂರು: ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರ ಸಂಘಟನೆ ಜೊತೆ ನಂಟು ಹೊಂದಿ ತಮಿಳುನಾಡು ಹಾಗೂ ಕರ್ನಾಟಕದಲ್ಲಿ ಭಯೋತ್ಪಾದನಾ ಕೃತ್ಯ ಎಸಗಲು ಸಂಚು ರೂಪಿಸಿದ್ದ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿ ಸಿರಾಜುದ್ದೀನ್ ಅಲಿಯಾಸ್ ರಾಜೇಶ್ ಎಂಬಾತನ ವಿರುದ್ಧ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು, ನಗರದ ವಿಶೇಷ ನ್ಯಾಯಾಲಯಕ್ಕೆ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

'ಅಲ್ ಹಿಂದ್' ಹೆಸರಿನಲ್ಲಿ ಸಂಘಟಿತರಾಗಿದ್ದ ಶಂಕಿತರು, ಭಯೋತ್ಪಾದನಾ ಕೃತ್ಯ ಎಸಗಲು 2019ರಿಂದಲೇ ಸಂಚು ರೂಪಿಸುತ್ತಿದ್ದರು. ತಮಿಳುನಾಡಿನ ಹಿಂದೂ ಸಂಘಟನೆ ಮುಖಂಡ ಸುರೇಶ್ ಮತ್ತು ಎಎಸ್‌ಐ ವಿಲ್ಸನ್ ಹತ್ಯೆ ಪ್ರಕರಣದಲ್ಲೂ ಭಾಗಿಯಾಗಿದ್ದರು. ಶಂಕಿತರ ಕಾನೂನು ಬಾಹಿರ ಚಟುವಟಿಕೆಗಳ ಮಾಹಿತಿ ಬರುತ್ತಿದ್ದಂತೆ, ಕಾರ್ಯಾಚರಣೆ ನಡೆಸಿ ಹಲವರನ್ನು ಬಂಧಿಸಲಾಗಿತ್ತು' ಎಂದು ಎನ್‌ಐಎ ಮೂಲಗಳು ಹೇಳಿವೆ.

'ಬೆಂಗಳೂರಿನ ಸುದ್ದಗುಂಟೆಪಾಳ್ಯ ಠಾಣೆ ವ್ಯಾಪ್ತಿಯಲ್ಲೂ ಕಾರ್ಯಾಚರಣೆ ನಡೆಸಲಾಗಿತ್ತು. ಮೆಹಬೂಬ್ ಪಾಷಾ ಅಲಿಯಾಸ್ ಅಬ್ದುಲ್ ಸೇರಿದಂತೆ 17 ಆರೋಪಿಗಳನ್ನು ಬಂಧಿಸಲಾಗಿತ್ತು. ಸ್ಫೋಟಕ ತಯಾರಿಕೆ ವಸ್ತುಗಳನ್ನೂ ಜಪ್ತಿ ಮಾಡಲಾಗಿತ್ತು.'

'ದೇಶದಲ್ಲಿ ಭಯೋತ್ಪಾದನಾ ಕೃತ್ಯ ಎಸಗಲು ಹಾಗೂ ಹಿಂದೂ ಮುಖಂಡರ ಹತ್ಯೆ ಮಾಡಲು ಸಂಚು ರೂಪಿಸುತ್ತಿದ್ದ ಪ್ರಮುಖ ಆರೋಪಿ ಖಾಜಾ ಮೊಹಿನುದ್ದಿನ್ ಅಲಿಯಾಸ್ ಜಲಾಲ್ ಜೊತೆ ಬೆಂಗಳೂರಿನ ಮೆಹಬೂಬ್ ಪಾಷಾ ನಂಟು ಹೊಂದಿದ್ದ. ಇವರಿಬ್ಬರ ಜೊತೆ ಕೈ ಜೋಡಿಸಿದ್ದ ಸಿರಾಜುದ್ದೀನ್, ಹಲವು ಅಪರಾಧ ಕೃತ್ಯಗಳಲ್ಲಿ ತೊಡಗಿಸಿಕೊಂಡಿದ್ದ. ಭಯೋತ್ಪಾದನೆ ಚಟುವಟಿಕೆಗಳಿಗಾಗಿ ಯುವಕರನ್ನು ನೇಮಿಸಿಕೊಳ್ಳುತ್ತಿದ್ದ' ಎಂದೂ ಮೂಲಗಳು ತಿಳಿಸಿವೆ.

'ಆರೋಪಿಗಳ ವಿಚಾರಣೆಯಿಂದ ಸಿಕ್ಕ ಸುಳಿವು ಆಧರಿಸಿ ಸಿರಾಜುದ್ದೀನ್‌ನನ್ನು ಬಂಧಿಸಲಾಗಿತ್ತು. ಆತನ ವಿರುದ್ಧ ಇದೀಗ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ' ಎಂದೂ ಎನ್‌ಐಎ ಮೂಲಗಳು ಹೇಳಿವೆ.

ಅತ್ಯಾಚಾರ; ನೈಜೀರಿಯಾದ ಇಬ್ಬರ ಬಂಧನ

ಬೆಂಗಳೂರು: ಸಾಫ್ಟ್‌ವೇರ್ ಕಂಪನಿಯೊಂದರ ಮಹಿಳಾ ಎಂಜಿನಿಯರೊಬ್ಬರಿಗೆ ಮತ್ತು ಬರುವ ಔಷಧ ನೀಡಿ, ಅವರ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ನೈಜೀರಿಯಾದ ಇಬ್ಬರು ಪ್ರಜೆಗಳನ್ನು ಬಾಣಸವಾಡಿ ಠಾಣೆ ಪೊಲೀಸರು ಇತ್ತೀಚೆಗೆ ಬಂಧಿಸಿದ್ದಾರೆ.

'ಟೋನಿ (35) ಹಾಗೂ ಅಬುಜಿ ಉಬಾಕಾ (36) ಬಂಧಿತರು. ಮಹಿಳಾ ಟೆಕಿಯೊಬ್ಬರು ನೀಡಿದ್ದ ದೂರು ಆಧರಿಸಿ ಅವರಿಬ್ಬರನ್ನು ಬಂಧಿಸಲಾಗಿದೆ. ಆರೋಪಿಗಳು ಹೊರದೇಶದ ಪ್ರಜೆಗಳಾಗಿದ್ದರಿಂದ, ಅವರ ಬಂಧನದ ಬಗ್ಗೆ ಶಾಂತಿನಗರದಲ್ಲಿರುವ ಪ್ರಾದೇಶಿಕ ವಿದೇಶಿ ನೋಂದಣಿ ಕೇಂದ್ರದ (ಎಫ್‌ಆರ್‌ಆರ್‌ಒ) ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ' ಎಂದು ಪೊಲೀಸರು ಹೇಳಿದರು.

ಅಂತರರಾಜ್ಯ ವಾಹನ ಕಳ್ಳರ ಬಂಧನ


ಬಂಧಿತರಿಂದ ಜಪ್ತಿ ಮಾಡಿರುವ ಮಿನಿ ಲಾರಿಗಳು ಹಾಗೂ ಕಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ರಾಜ್ಯಗಳಲ್ಲಿ ವಾಹನಗಳನ್ನು ಕದ್ದು ಬಳಿಕ ಅವುಗಳ ದಾಖಲೆ ತಿರುಚಿ ಬೇರೆಯವರಿಗೆ ಮಾರಾಟ ಮಾಡುತ್ತಿದ್ದ ಕಳ್ಳರನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

'ಭಾಸ್ಕರ್, ಶಾಹೀದ್, ಇದಾಯತ್ ಹಾಗೂ ಇರ್ಫಾನ್ ಯಾನೆ ನಿಹಾಲ್ ಬಂಧಿತರು. ಇವರಿಂದ ₹1.05 ಕೋಟಿ ಮೌಲ್ಯದ 9 ಮಿನಿ ಲಾರಿಗಳು ಹಾಗೂ ಹುಂಡೈ ಕ್ರೆಡಾಯ್ ಕಾರನ್ನು ಜಪ್ತಿ ಮಾಡಲಾಗಿದೆ. ಶಾಹೀದ್ ಮತ್ತು ಇದಾಯತ್ ಹಾಸನ ಜೈಲಿನಲ್ಲಿದ್ದುಕೊಂಡೆ ಕೃತ್ಯಕ್ಕೆ ಸಹಕರಿಸುತ್ತಿದ್ದರು. ಅವರ ವಿಚಾರಣೆ ನಡೆಸಿ ಮತ್ತೆ ಜೈಲಿಗೆ ಕಳುಹಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕಂಪನಿಯೊಂದಕ್ಕೆ ಸೇರಿದ್ದ ಅಶೋಕ ಲೇಲ್ಯಾಂಡ್ ಲಾರಿಯನ್ನು ಕಂಪನಿಯ ನಿಲುಗಡೆ ಸ್ಥಳದಿಂದಲೇ ಕದ್ದೊಯ್ಯಲಾಗಿತ್ತು. ಈ ಸಂಬಂಧ ಜುಲೈ 10ರಂದು ದಾಖಲಾಗಿದ್ದ ದೂರನ್ನು ಆಧರಿಸಿ ತನಿಖೆ ಕೈಗೊಂಡಿದ್ದ ಪೊಲೀಸರು ಮಂಗಳೂರಿನಲ್ಲಿ ಲಾರಿಯನ್ನು ಪತ್ತೆ ಮಾಡಿದ್ದರು. ಆರೋಪಿಯೊಬ್ಬನನ್ನು ವಿಚಾರಿಸಿದಾಗ ಆತ ಇತರ ಮೂವರ ಹೆಸರು ಬಾಯಿ ಬಿಟ್ಟಿದ್ದ' ಎಂದರು.

'ನಿಹಾಲ್ ಅಂತರರಾಜ್ಯ ವಾಹನ ಕಳ್ಳ. ತನ್ನ ಸಹಚರರ ಮೂಲಕ ವಾಹನಗಳನ್ನು ಕಳವು ಮಾಡಿಸುತ್ತಿದ್ದ ಆತ ಅವುಗಳ ದಾಖಲೆಗಳನ್ನು ತಿರುಚುತ್ತಿದ್ದ. ವಾಹನಗಳ ರೂಪವನ್ನೇ ಬದಲಿಸಿ ಇತರರಿಗೆ ಮಾರಾಟ ಮಾಡುತ್ತಿದ್ದ. ಹತ್ತು ವರ್ಷಗಳ ಹಿಂದೆ ಸಿಸಿಬಿ ಪೊಲೀಸರಿಂದ ತಪ್ಪಿಸಿಕೊಂಡಿದ್ದ ಈತ ಬಳಿಕ ತಲೆ ಮರೆಸಿಕೊಂಡಿದ್ದ. ಈತನ ವಿರುದ್ಧ ವಿವಿಧ ಠಾಣೆಗಳಲ್ಲಿ ಪ್ರಕರಣ ದಾಖಲಾಗಿವೆ. ಕೊಲೆ ಪ್ರಕರಣವೂ ಈತನ ಮೇಲಿದೆ' ಎಂದು ಮಾಹಿತಿ ನೀಡಿದರು.

'ಕಾಮಾಕ್ಷಿಪಾಳ್ಯ, ಜಿಗಣಿ, ಮಾಗಡಿ, ಹಿರಿಸಾವೆ, ಸವಣೂರು, ಶಿಕಾರಿಪುರ, ಹಾಸನ ನಗರ, ಹಳೆಬೀಡು, ರಾಣೆಬೆನ್ನೂರು ಠಾಣೆ ವ್ಯಾಪ್ತಿಯಲ್ಲಿ ಲಾರಿಗಳನ್ನು ಕದ್ದಿರುವುದು ವಿಚಾರಣೆಯಿಂದ ಗೊತ್ತಾಗಿದೆ. ಹುಂಡೈ ಕಾರನ್ನು ನವದೆಹಲಿಯಿಂದ ಕದ್ದು ತಂದಿರುವುದಾಗಿ ಆರೋಪಿಗಳು ಒಪ್ಪಿಕೊಂಡಿದ್ದಾರೆ' ಎಂದೂ ಹೇಳಿದರು.

ಕ್ಯಾಸಿನೋ ವಿರುದ್ಧ ಕ್ರಮಕ್ಕೆ ಜಾರ್ಜ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾವು ಪ್ರತಿನಿಧಿಸುವ ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಎಚ್‌ಆರ್‌ಬಿಆರ್ ಬಡಾವಣೆಯ ಸರ್ವಿಸ್ ರಸ್ತೆ ಮತ್ತು ಕಮ್ಮನಹಳ್ಳಿಯಲ್ಲಿ ಇತ್ತೀಚೆಗೆ 2 ಕ್ಯಾಸಿನೋ ಜೂಜು ಅಡ್ಡೆಗಳು ಆರಂಭವಾಗಿದ್ದು, ಅವುಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಸ್ಥಳೀಯ ಶಾಸಕ ಕೆ.ಜೆ. ಜಾರ್ಜ್ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಮತ್ತು ನಗರ ಪೊಲೀಸ್ ಕಮಿಷನರ್‌ಗೆ ಪತ್ರ ಬರೆದಿದ್ದಾರೆ.

ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಮತ್ತು ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಗುರುವಾರ ಪತ್ರ ಬರೆದಿರುವ ಜಾರ್ಜ್, 'ಕಾನೂನು ಬಾಹಿರವಾಗಿ ಎರಡು ಕ್ಯಾಸಿನೋಗಳು ತಲೆ ಎತ್ತಿವೆ. ಇದರಿಂದ ಕ್ಷೇತ್ರದ ಜನರು ಆತಂಕಕ್ಕೊಳಗಾಗಿದ್ದಾರೆ. ಈ ಜೂಜು ಕೇಂದ್ರಗಳಿಂದ ಹಲವು ಕುಟುಂಬಗಳು ಆರ್ಥಿಕವಾಗಿ ದಿವಾಳಿಯಾಗುತ್ತಿದ್ದು, ಅಪರಾಧ ಕೃತ್ಯಗಳೂ ಹೆಚ್ಚುತ್ತಿವೆ' ಎಂದು ದೂರಿದ್ದಾರೆ.

ಹೆಲ್ಮೆಟ್‌ನಿಂದ ಹೊಡೆದು ವ್ಯಕ್ತಿಯ ಕೊಲೆ: ಆರೋಪಿಗಳ ಬಂಧನ

ಬೆಂಗಳೂರು: ಹೆಲ್ಮೆಟ್‌ನಿಂದ ವ್ಯಕ್ತಿಯೊಬ್ಬರ ತಲೆಗೆ ಹೊಡೆದು ಕೊಲೆ ಮಾಡಿದ್ದ ಮಹೇಶ್ ಮತ್ತು ನಾಗರಾಜ್ ಅವರನ್ನು ಬಸವೇಶ್ವರನಗರ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

'ಬಾಲಾಜಿ (49) ಮೃತ ವ್ಯಕ್ತಿ. ಬೆಮೆಲ್ ಬಡಾವಣೆ ನಿವಾಸಿಯಾಗಿರುವ ಇವರು ಸಿವಿಲ್ ಗುತ್ತಿಗೆದಾರರಾಗಿ ಕೆಲಸ ಮಾಡುತ್ತಿದ್ದರು. ಆರೋಪಿಗಳು ಕಾಮಾಕ್ಷಿಪಾಳ್ಯದ ಸಣ್ಣಕ್ಕಿ ಬಯಲು ಪ್ರದೇಶದವರು' ಎಂದು ಪೊಲೀಸರು ತಿಳಿಸಿದರು.

'ಇವರೆಲ್ಲಾ ಗುರುವಾರ ರಾತ್ರಿ ಬಾರ್‌ವೊಂದರಲ್ಲಿ ವಿಪರೀತ ಕುಡಿದಿದ್ದರು. ಕ್ಷುಲ್ಲಕ ಕಾರಣಕ್ಕೆ ಗಲಾಟೆ ಮಾಡಿಕೊಂಡು ಕೈ ಕೈ ಮಿಲಾಯಿಸಿದ್ದರು. ಅಲ್ಲಿದ್ದವರು ಜಗಳ ಬಿಡಿಸಿ ಎರಡೂ ಕಡೆಯವರನ್ನು ಹೊರಗೆ ಕಳಿಸಿದ್ದರು.


ನಾಗರಾಜ್


ಮಹೇಶ್

ಮಳೆ ಸುರಿಯುತ್ತಿದ್ದ ಕಾರಣ ಬಾಲಾಜಿ ಅವರು ಬಾರ್‌ನಿಂದ ಸ್ವಲ್ಪ ದೂರ ಹೋಗಿ ನಿಂತಿದ್ದರು. ಅಲ್ಲಿಗೆ ಹೋಗಿದ್ದ ಮಹೇಶ್ ಮತ್ತು ನಾಗರಾಜ್ ಮತ್ತೆ ಜಗಳ ತೆಗೆದಿದ್ದರು. ಮಾತಿಗೆ ಮಾತು ಬೆಳೆದಿತ್ತು. ಸಿಟ್ಟಿಗೆದ್ದ ಮಹೇಶ್ ಹೆಲ್ಮೆಟ್‌ನಿಂದ ಬಾಲಾಜಿ ತಲೆಗೆ ಬಲವಾಗಿ ಹೊಡೆದಿದ್ದರು. ಪ್ರಜ್ಞೆ ತಪ್ಪಿದ್ದ ಅವರನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಷ್ಟರಲ್ಲೇ ಅವರ ಉಸಿರು ನಿಂತಿತ್ತು' ಎಂದು ವಿವರಿಸಿದರು.

ದ್ವಿಚಕ್ರ ವಾಹನ ಕಳ್ಳರ ಬಂಧನ

ಬೆಂಗಳೂರು: ರಸ್ತೆಯಲ್ಲಿ ಓಡಾಡುವವರನ್ನು ಹೆದರಿಸಿ ಅವರಿಂದ ಹಣ ಹಾಗೂ ಮೊಬೈಲ್ ಸುಲಿಗೆ ಮಾಡುತ್ತಿದ್ದವರನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಬಾಲಕ ಸೇರಿ ಮೂವರನ್ನು ಬಂಧಿಸಲಾಗಿದೆ. ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ.' ಎಂದು ಪೊಲೀಸರು ತಿಳಿಸಿದ್ದಾರೆ.



ಸುಭಾಷಿತ

ಕೆಲವೊಮ್ಮೆ ಜನ ಬದಲಾಗಿರುವುದಿಲ್ಲ, ಅವರ ಮುಖವಾಡ ಕಳಚಿ ಬಿದ್ದಿರುತ್ತದೆ ಅಷ್ಟೆ. -ಹರುಕಿ ಮುರಾಕಮಿ

ಜಿಡಿಪಿ: ಸಮಾಧಾನಕರ ಹೌದು ಸಂಭ್ರಮಿಸಬೇಕಾದ ಸಂದರ್ಭ ಅಲ್ಲ

ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿನ ಒಟ್ಟು ಆಂತರಿಕ ಉತ್ಪಾದನೆಗೆ (ಜಿಡಿಪಿ) ಹೋಲಿಸಿದರೆ, ಈ ವರ್ಷದ ಜೂನ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಶೇಕಡ 20.1ರಷ್ಟು ಬೆಳವಣಿಗೆ ದಾಖಲಿಸಿದೆ. ಹಿಂದಿನ ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ದೇಶದಲ್ಲಿ ಅತ್ಯಂತ ಕಠಿಣ ಸ್ವರೂಪದ ಲಾಕ್‌ಡೌನ್ ಜಾರಿಯಲ್ಲಿ ಇತ್ತು. ಆ ತ್ರೈಮಾಸಿಕದಲ್ಲಿ ಆರ್ಥಿಕ ಚಟುವಟಿಕೆಗಳು ನಡೆದಿದ್ದು ತೀರಾ ಕಡಿಮೆ ಪ್ರಮಾಣದಲ್ಲಿ. 2020ರ ಜೂನ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿಯು ದಾಖಲೆಯ ಶೇಕಡ (–)24.4ರಷ್ಟು ಕುಸಿತ ಕಂಡಿತ್ತು. ಅಂದಿನ ಜಿಡಿಪಿಗೆ ಹೋಲಿಕೆ ಮಾಡಿ ನೋಡಿದಾಗ, 2021ರ ಜೂನ್ ತ್ರೈಮಾಸಿಕದ ಜಿಡಿಪಿಯು ಶೇಕಡ 20.1ರಷ್ಟು ಏರಿಕೆ ಕಂಡಿದೆ. ದೇಶದ ಜಿಡಿಪಿ ಯಾವುದೇ ತ್ರೈಮಾಸಿಕದಲ್ಲಿ ಕಂಡ ದಾಖಲೆಯ ಬೆಳವಣಿಗೆ ಇದು ಎಂಬುದು ನಿಜ. ಆದರೆ, ಹೋಲಿಕೆ ಮಾಡಿ ನೋಡುವ ತ್ರೈಮಾಸಿಕದ ಮಟ್ಟ ಬಹಳ ಕಡಿಮೆ ಇತ್ತು, ಹಾಗಾಗಿ ಈ ಬಾರಿಯ ಜಿಡಿಪಿಯ ಬೆಳವಣಿಗೆಯು ಶೇಕಡಾವಾರು ಲೆಕ್ಕಾಚಾರದಲ್ಲಿ ದೊಡ್ಡದಾಗಿ ಕಾಣಿಸುತ್ತಿದೆ ಎಂಬುದನ್ನು ಮರೆಯುವಂತೆ ಇಲ್ಲ. 2019ರ ಜೂನ್ ತ್ರೈಮಾಸಿಕದಲ್ಲಿನ ದೇಶದ ಜಿಡಿಪಿ ಮಟ್ಟಕ್ಕೆ ಹೋಲಿಸಿದರೆ, ಜಿಡಿಪಿಯು ಈಗಲೂ ಕೆಳಮಟ್ಟದಲ್ಲಿಯೇ ಇದೆ. ಈಗ ದೇಶವು ಸಾಧಿಸಿರುವ ಜಿಡಿಪಿ ಬೆಳವಣಿಗೆಯು ಈ ಹಿಂದೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಾಡಿದ್ದ ಅಂದಾಜಿಗಿಂತ ಕಡಿಮೆ ಮಟ್ಟದಲ್ಲಿಯೇ ಇದೆ. ಬೆಳವಣಿಗೆಯು ಶೇಕಡ 21.4ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜು ಮಾಡಿತ್ತು. ಇಷ್ಟು ಹೇಳಿದ ಮಾತ್ರಕ್ಕೆ, ಈ ಬಾರಿಯ ಜಿಡಿಪಿ ಅಂಕಿ–ಅಂಶಗಳಲ್ಲಿ ಒಳ್ಳೆಯ ಸಂಗತಿಗಳೇ ಇಲ್ಲವೆಂದು ಭಾವಿಸಬೇಕಿಲ್ಲ. ಈ ಅಂಕಿ–ಅಂಶಗಳು ಒಂದಿಷ್ಟು ಸಮಾಧಾನವನ್ನು ಖಂಡಿತ ಮೂಡಿಸುತ್ತವೆ; ಆದರೆ ದೊಡ್ಡ ಮಟ್ಟದಲ್ಲಿ ಸಂಭ್ರಮಪಡುವ ಸಂದರ್ಭ ಇದಲ್ಲ.



ಈ ಬಾರಿಯ ಜಿಡಿಪಿ ಅಂಕಿ–ಅಂಶಗಳ ಆಧಾರದಲ್ಲಿ, ಅರ್ಥ ವ್ಯವಸ್ಥೆಯು ಮುಂದೆ ಯಾವ ಹಾದಿಯನ್ನು ಹಿಡಿಯಲಿದೆ ಎಂಬುದನ್ನು ಖಚಿತವಾಗಿ ಹೇಳಲು ಆಗದು

ಈ ಬಾರಿ ಏಪ್ರಿಲ್‌ನಿಂದ ಜೂನ್ ಅಂತ್ಯದವರೆಗಿನ ಅವಧಿಯಲ್ಲಿ ದೇಶವು ಕೋವಿಡ್‌ನ ಎರಡನೆಯ ಅಲೆಗೆ ಸಾಕ್ಷಿಯಾಗಿತ್ತು. ಎರಡನೆಯ ಅಲೆಯ ಸಂದರ್ಭದಲ್ಲಿ ವರದಿಯಾಗುತ್ತಿದ್ದ ಕೋವಿಡ್ ಪ್ರಕರಣಗಳು ಹಾಗೂ ಸಾವಿನ ಸಂಖ್ಯೆಯು ಮನುಷ್ಯರ ಆತ್ಮಸ್ಥೈರ್ಯ ಕುಂದಿಸುವಂತೆ ಇದ್ದವು. ಇಡೀ ದೇಶಕ್ಕೆ ಅನ್ವಯ ಆಗುವಂತಹ ಲಾಕ್‌ಡೌನ್ ಜಾರಿಗೆ ಬಂದಿರಲಿಲ್ಲವಾದರೂ, ದೇಶದ ಹಲವೆಡೆ ಸ್ಥಳೀಯ ಮಟ್ಟದ ಲಾಕ್‌ಡೌನ್ ಇತ್ತು. ಇಷ್ಟೆಲ್ಲ ಇದ್ದರೂ ಆರ್ಥಿಕ ಚಟುವಟಿಕೆಗಳು ಕಳೆದ ಬಾರಿಗಿಂತ ಚೆನ್ನಾಗಿ ಆಗಿವೆ ಎಂಬುದು ಸಮಾಧಾನಕರ. ಆರ್ಥಿಕ ಆರೋಗ್ಯವನ್ನು ಹೇಳುವ ಕೆಲವು ವಲಯಗಳು ಒಳ್ಳೆಯ ಬೆಳವಣಿಗೆಯನ್ನು ಕಂಡಿವೆ. ಆರ್ಥಿಕತೆಯ ಬೇರೆ ಬೇರೆ ವಲಯಗಳ ಬೆಳವಣಿಗೆ ಭಿನ್ನವಾಗಿ ಇದೆ. ಈ ಬಾರಿ ಮುಂಗಾರು ಮಳೆಯು ಒಂದೇ ರೀತಿಯಲ್ಲಿ ಇಲ್ಲವಾಗಿದ್ದ ಕಾರಣ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ವಲಯಗಳು ಹಿನ್ನಡೆ ಅನುಭವಿಸಬಹುದು ಎಂಬ ಆತಂಕ ಇತ್ತು. ಆದರೆ, ಹಾಗೆ ಆಗಿಲ್ಲ. ಕೃಷಿ ವಲಯವು ಶೇಕಡ 4.52ರಷ್ಟು ಬೆಳವಣಿಗೆ ಸಾಧಿಸಿದೆ. ಸೇವಾ ವಲಯದಲ್ಲಿ ಕೂಡ ನಿರೀಕ್ಷೆಗಿಂತ ಹೆಚ್ಚಿನ ಸಾಧನೆ ಕಂಡುಬಂದಿದೆ. ನಿರ್ಮಾಣ ವಲಯದಲ್ಲಿನ ಚಟುವಟಿಕೆಗಳು ಶೇಕಡ 69ರಷ್ಟು, ತಯಾರಿಕಾ ವಲಯವು ಶೇಕಡ 50ರಷ್ಟು, ಗಣಿಗಾರಿಕೆ ವಲಯವು ಶೇಕಡ 19ರಷ್ಟು ಬೆಳವಣಿಗೆ ದಾಖಲಿಸಿವೆ. ಖಾಸಗಿ ವಲಯದಿಂದ ಬಂದಿರುವ ಬೇಡಿಕೆಯು ಆರ್ಥಿಕ ಆರೋಗ್ಯದ ಸೂಚಕಗಳಲ್ಲಿ ಮುಖ್ಯವಾದುದು. ಇದು ಕೂಡ ಏರಿಕೆ ಕಂಡಿದೆ. ಆದರೆ, ಕೋವಿಡ್ ಪೂರ್ವದ ಮಟ್ಟಕ್ಕಿಂತ ಕಡಿಮೆ ಇದೆ. ರಫ್ತು ಪ್ರಮಾಣದಲ್ಲಿ ಏರಿಕೆ ಆಗಿದೆ. ಹೀಗಿದ್ದರೂ, ರಫ್ತಿನಲ್ಲಿ ನಮಗೆ ಕೋವಿಡ್ ಪೂರ್ವದ ಸ್ಥಿತಿಯನ್ನು ತಲುಪಲು ಆಗಿಲ್ಲ.

ಈ ಬಾರಿಯ ಜಿಡಿಪಿ ಅಂಕಿ–ಅಂಶಗಳ ಆಧಾರದಲ್ಲಿ, ಅರ್ಥ ವ್ಯವಸ್ಥೆಯು ಮುಂದೆ ಯಾವ ಹಾದಿಯನ್ನು ಹಿಡಿಯಲಿದೆ ಎಂಬುದನ್ನು ಖಚಿತವಾಗಿ ಹೇಳಲು ಆಗದು. ಕೋವಿಡ್‌ನ ಮೂರನೆಯ ಅಲೆಯ ಭೀತಿಯಂತೂ ಇದ್ದೇ ಇದೆ. ಎರಡನೆಯ ಅಲೆಯೇ ಇನ್ನೂ ಪೂರ್ಣಗೊಂಡಿಲ್ಲ ಎಂದು ತಜ್ಞರು ಹೇಳಿದ್ದಾರೆ. ಹೀಗಿದ್ದರೂ, ಅರ್ಥ ವ್ಯವಸ್ಥೆಯಲ್ಲಿ ಒಂದಿಷ್ಟು ಚೈತನ್ಯ ಮರಳಿದೆ. ಆದರೆ ಇದು ಎಷ್ಟು ಕಾಲ ಉಳಿದುಕೊಳ್ಳಲಿದೆ, ಯಾವ ಪ್ರಮಾಣದಲ್ಲಿ ಏರಿಕೆ ಕಾಣಲಿದೆ ಎಂಬುದನ್ನು ಈಗಲೇ ಹೇಳಲು ಆಗದು. ಮುಂಗಾರು ಮಳೆಯ ಪರಿಣಾಮ ಪೂರ್ತಿಯಾಗಿ ಇನ್ನೂ ಕಾಣಿಸಿಲ್ಲ. ಕೋವಿಡ್‌ನ ಮೂರನೆಯ ಅಲೆಯು ದೇಶದ ಆರ್ಥಿಕ ಚಟುವಟಿಕೆಗಳಿಗೆ ಅತಿಹೆಚ್ಚಿನ ಕೊಡುಗೆ ನೀಡುವ ರಾಜ್ಯಗಳಲ್ಲಿ ಜೋರಾಗಿ ಕಾಣಿಸಿಕೊಂಡರೆ ಜಿಡಿಪಿ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುವುದರಲ್ಲಿ ಅನುಮಾನವೇ ಇಲ್ಲ. ಅರ್ಥಶಾಸ್ತ್ರಜ್ಞರು ಹಲವು ಬಾರಿ ಹೇಳಿದ್ದರೂ, ಜನರ ಕೈಗೆ ನೇರವಾಗಿ ಹಣ ವರ್ಗಾವಣೆ ಮಾಡಿ ಅವರಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳ ಆಗುವಂತಹ ಕ್ರಮಗಳನ್ನು ಸರ್ಕಾರಗಳು ಕೈಗೊಂಡಿಲ್ಲ. ಜನರು ಆರ್ಥಿಕವಾಗಿ ಬಲಗೊಳ್ಳದೆ ಯಾವ ಅರ್ಥ ವ್ಯವಸ್ಥೆಯೂ ಗಟ್ಟಿಗೊಳ್ಳುವುದಿಲ್ಲ. ಹೀಗಿರುವಾಗ ಅರ್ಥ ವ್ಯವಸ್ಥೆಯು ಕೋವಿಡ್ ಪೂರ್ವದ ಸ್ಥಿತಿಗೆ ತಕ್ಷಣಕ್ಕೆ ಬರುವ ಸಾಧ್ಯತೆ ಇಲ್ಲ. ಈ ಹಿನ್ನೆಲೆಯಲ್ಲಿ, ಈಗಿನ ಅಂಕಿ–ಅಂಶಗಳು ಒಂದಿಷ್ಟು ಸಮಾಧಾನವನ್ನೂ ಒಂದಿಷ್ಟು ಎಚ್ಚರವನ್ನೂ ಮೂಡಿಸಲು ಸಾಕು.

ದಿನದ ಟ್ವೀಟ್



ಇದೆಂಥಾ ನಡವಳಿಕೆ?

ನಾವು ವಾಸಿಸುವ ನಾಲ್ಕು ಗೋಡೆಗಳಷ್ಟೇ ನಮ್ಮ ಮನೆಯಲ್ಲ. ಇಡೀ ದೇಶವೇ ನಮ್ಮ ಮನೆಯಿದ್ದಂತೆ. ಗೋಡೆಗಳ ಮೇಲೆ ಪೆನ್ನು, ಬಣ್ಣ, ಇಂಕು, ಚೂಪಾದ ವಸ್ತುಗಳನ್ನು ಬಳಸುವುದು ಮತ್ತು ಗೀಚುವುದು ನಮ್ಮ ಸಾರ್ವಜನಿಕ ಆಸ್ತಿ, ಪುರಾತನ ಸ್ಮಾರಕಗಳು, ಧಾರ್ಮಿಕ ಸ್ಥಳಗಳು ಹಾಗೂ ಪಾರಂಪರಿಕ ತಾಣಗಳನ್ನು ರಕ್ಷಿಸುವ ವಿಧಾನವಲ್ಲ.

ಡಾ. ಪಿ.ಎಂ.ಧಕಾಟೆ, ಅರಣ್ಯಾಧಿಕಾರಿ, ಉತ್ತರಾಖಂಡ

ಕಿಡಿನುಡಿ

ಲಿಂಗಾಯತ ಧರ್ಮದ ಬೇಡಿಕೆಯ ಹೋರಾಟಕ್ಕೂ ಕಾಂಗ್ರೆಸ್ ಪಕ್ಷಕ್ಕೂ ಹಿಂದೆಯೂ ಸಂಬಂಧ ಇರಲಿಲ್ಲ, ಮುಂದೆಯೂ ಇರುವುದಿಲ್ಲ. ಈ ವಿಷಯದಲ್ಲಿ ಭಿನ್ನಾಭಿಪ್ರಾಯ ಬರುವ ಪ್ರಶ್ನೆಯೇ ಇಲ್ಲ...



ಎಂ.ಬಿ. ಪಾಟೀಲ, ಕಾಂಗ್ರೆಸ್ ಶಾಸಕ

25 ವರ್ಷಗಳ ಹಿಂದೆ
ಬುಧವಾರ, 4-9-1996

• ಅಮೆರಿಕ- ಇರಾಕ್ ಯುದ್ಧ ಆರಂಭ

ಬಾಗ್ದಾದ್, ಸೆ. 3 (ಪಿಟಿಐ)- ಅಮೆರಿಕ ಸೇನೆ ಇಂದು ಇರಾಕ್‌ನ ಪ್ರಮುಖ ಮಿಲಿಟರಿ ನೆಲೆಗಳ ಮೇಲೆ ಕ್ಷಿಪಣಿ ನೆಲೆಗಳ ಮೇಲೆ ಕ್ಷಿಪ್ರ ಕ್ಷಿಪಣಿ ದಾಳಿ ನಡೆಸಿ ಬಾಗ್ದಾದಿನ ಹಲವು ಪ್ರಮುಖ ಸೇನಾ ನೆಲೆಗಳನ್ನು ಧ್ವಂಸಗೊಳಿಸಿದೆ.

ಅಮೆರಿಕದ ಮಾನವರಹಿತ ಮತ್ತು ಅತಿ ನಿಖರವಾದ ಕ್ಷಿಪಣಿಗಳು ಇರಾಕ್‌ನ ಮಿಲಿಟರಿ ನಿಯಂತ್ರಣ ಕೇಂದ್ರಗಳನ್ನು ನುಚ್ಚುನೂರು ಗೊಳಿಸಿವೆ ಎಂದು ಅಮೆರಿಕದ ರಕ್ಷಣಾ ಮೂಲಗಳು ತಿಳಿಸಿವೆ.

ಈ ಮಧ್ಯೆ ಇರಾಕ್‌ನ ವಾಯು ಪ್ರದೇಶದಲ್ಲಿ ಸಂಚರಿಸುವ ವಿದೇಶಿ ಯುದ್ಧ ವಿಮಾನಗಳನ್ನು ಹೊಡೆದು ಉರುಳಿಸುವಂತೆ ಸೇನೆಗೆ ಅಧ್ಯಕ್ಷ ಸದ್ದಾಂ ಹುಸೇನ್ ಆದೇಶಿಸಿದ್ದಾರೆ. 'ಪ್ರತೀಕಾರದ ಕ್ರಮಕ್ಕೆ ನಾವು ಸಿದ್ಧರಿದ್ದೇವೆ' ಎಂದು ಸದ್ದಾಂ, ಇರಾಕಿ ರೇಡಿಯೊ ಮತ್ತು ದೂರದರ್ಶನದ ಮೂಲಕ ಸವಾಲು ಹಾಕುವುದರೊಂದಿಗೆ ದಾಳಿಯ ಪರಿಣಾಮ ತೀವ್ರಗೊಳ್ಳುವ ನಿರೀಕ್ಷೆ ಇದ್ದು, ಯುದ್ಧ ಆರಂಭವಾಗಿದೆ.

• ತೀವ್ರ ಬಿಕ್ಕಟ್ಟಿನಲ್ಲಿ ಗುಜರಾತ್ ಸರ್ಕಾರ

ಗಾಂಧಿನಗರ, ಸೆ. 3 (ಪಿಟಿಐ, ಯುಎನ್‌ಐ)- ಗುಜರಾತ್ ಮುಖ್ಯಮಂತ್ರಿ ಸುರೇಶ್ ಮೆಹ್ತಾ ಅವರ ಸರ್ಕಾರದ ವಿಶ್ವಾಸಮತ ಸಾಬೀತಿಗಾಗಿ ಇಂದು ಕರೆಯಲಾಗಿದ್ದ ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ವಿಶ್ವಾಸಮತ ನಿರ್ಣಯದ ವಿಷಯ ಪ್ರಸ್ತಾಪಕ್ಕೆ ಬರಲಿಲ್ಲ.

ಆಡಳಿತ ಬಿಜೆಪಿಯಿಂದ ಬೇರೆಯಾದ ಗುಂಪಿಗೆ ಉಪಸಭಾಧ್ಯಕ್ಷರು ಮಾನ್ಯತೆ ನೀಡುವುದರೊಂದಿಗೆ ವಿಧಾನಸಭೆಯಲ್ಲಿ ಬಿಜೆಪಿ ಬಲ 74ಕ್ಕೆ ಕುಸಿದಿದ್ದು, ಸರ್ಕಾರ ಪತನದ ಅಂಚಿನಲ್ಲಿದೆ.

50 ವರ್ಷಗಳ ಹಿಂದೆ
ಶನಿವಾರ, 4-9-1971

• ದೆಹಲಿಯಲ್ಲಿ ಮತ್ತೊಬ್ಬ ಪಾಕ್ ನೌಕರನಿಂದ ನಿಷ್ಠೆ ಬದಲಾವಣೆ

ನವದೆಹಲಿ, ಸೆ. 3- ಇಲ್ಲಿನ ಪಾಕಿಸ್ತಾನ ಹೈಕಮಿಷನ್ ನೌಕರರಲ್ಲಿ ಬಂಗಾಳಿ ಸದಸ್ಯ, ಎಲೆಕ್ಟ್ರೀಷಿಯನ್ ಮೊಹಮ್ಮದ್ ಅಲಿ ಅವರು ಇಂದು ಪತ್ನಿ ಮತ್ತು ಮೂರು ತಿಂಗಳ ಪುತ್ರಿ ಸಮೇತ ಹೈಕಮಿಷನ್ ಕಚೇರಿ ಆವರಣದಿಂದ ಪರಾರಿಯಾದರಲ್ಲದೆ ಭಾರತದಲ್ಲಿ ಆಶ್ರಯ ಕೋರಿದರು.

ಬಾಂಗ್ಲಾ ದೇಶಕ್ಕೆ ತಮ್ಮ ನಿಷ್ಠೆ ಬದಲಾಯಿಸಿದ ಪಾಕ್ ಹೈಕಮಿಷನ್ ನೌಕರರ ಸಂಖ್ಯೆಯು ಇದರಿಂದ ಐದಕ್ಕೆ ಏರಿತು.

ಬಂಗಾಳಿ ನೌಕರರು ಕಚೇರಿ ಆವರಣ ಬಿಟ್ಟು ಹೊರಗಡೆ ಹೋಗುವುದಕ್ಕೆ ಇದುವರೆಗೆ ನಿರ್ಬಂಧ ಇತ್ತು. ಆದರೆ ಪತಿ-ಪತ್ನಿ-ಪುತ್ರಿ ಜತೆ ಪೋಲೀಸ ತೆಗೆದುಕೊಂಡು ಹೊರಬಂದ ಅಮ್ಮದ್ ಅಲಿ. ಭದ್ರತಾ ಅಧಿಕಾರಿಗಳು ದಂಗಾಗಿದ್ದನ್ನು ಹಿಂಬಾಲಿಸಿದರು.

• ಸವಾಲು ಎದುರಿಸಲು ಸಕಲ ಸಜ್ಜು: ವಿಮಾನ ಪಡೆಗೆ ಇಂದಿರಾ ಕರೆ

ನವದೆಹಲಿ, ಸೆ. 3- ಅಂತರಿಕದಿಂದ ಕೇವಲ ನಿರೂಪಣೆ ಮತ್ತು ಪಾರ ಪತ್ರಿಕೆ ಸಮೇತ ಹೈಕಮಿಷನ್ ಸೇರಿದಂತೆ ರಾಷ್ಟ್ರವು ಈಗ ತೀವ್ರ ರೀತಿಯ ಸವಾಲುಗಳನ್ನು ಎದುರಿಸುತ್ತಿರುವುದರಿಂದ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ವಾಯುಪಡೆ ಕಮಾಂಡರುಗಳಿಗೆ ತಿಳಿಸಿದರು.

'ಈ ಸವಾಲುಗಳು ಹೆಚ್ಚು ಎಚ್ಚರಿಕೆಯಿಂದಿರಬೇಕೆಂಬ ಮುನ್ಸೂಚನೆ ನೀಡಿವೆ' ಎಂದು ಅವರು ದ್ವೈವಾರ್ಷಿಕ ಸಮ್ಮೇಳನದಲ್ಲಿ ಕಮಾಂಡರುಗಳನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ತಿಳಿಸಿದರು.

'ನಾವೆಲ್ಲ ಒಂದು' ಎಂಬ ಕಲ್ಪನೆ ಅಫ್ಗನ್ನರಲ್ಲಿ ಗರಿಗಟ್ಟಲು ಬಿಡಲೇ ಇಲ್ಲ ಶಕ್ತಿಕೂಟಗಳ ಮೇಲಾಟ

ದೇಶ ಕಟ್ಟುವಿಕೆ: ಎಡವಿದ್ದೆಲ್ಲಿ?



ವಿಶ್ಲೇಷಣೆ

ವಸಂತ ಶೆಟ್ಟಿ

ಅಫ್ಗಾನಿಸ್ತಾನ ಮತ್ತೆ ತಾಲಿಬಾನೀಯರ ಕೈವಶವಾಗಿದೆ. ಇತಿಹಾಸದ ಬಹುಪಾಲು ಅವಧಿಯನ್ನು ಯುದ್ಧ, ರಕ್ತಪಾತದಲ್ಲೇ ಕಳೆದಿರುವ ಈ ದೇಶದಲ್ಲಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಹಾಗೂ ಹೀಗೂ ಒಂದು ಮಟ್ಟಿಗೆ ಶಾಂತಿ ನೆಲೆಸಿ, ಈ ಕಾಲದಲ್ಲಿ ಕಲ್ಪಿಸಿಕೊಳ್ಳುವಂತಹ ಒಂದು ದೇಶ ಹುಟ್ಟುತ್ತಿದೆ ಅನ್ನುವ ನಂಬಿಕೆಯನ್ನು ಅಮೆರಿಕ ಮತ್ತು ಅದರ ಗೆಳೆಯರು ಸೇರಿ ಪ್ರಪಂಚಕ್ಕೆ ಕೊಟ್ಟಿದ್ದರು. ಆದರೆ ಆಳವಾಗಿ ಒಡೆದುಕೊಂಡಿರುವ ಆ ನೆಲದಲ್ಲಿ ಹೊರಗಿನವರು ಹೊರಗಿನಿಂದ ಹಣ ಸುರಿದು, ವ್ಯವಸ್ಥೆಯನ್ನು ಹೇರಿ, ಅದರಿಂದ ತಾನೇ ತಾನಾಗಿ ದೇಶವೊಂದು ತಲೆ ಎತ್ತಿ ನಿಲ್ಲುತ್ತದೆ ಎಂದು ಭಾವಿಸಿದ್ದು ಎಷ್ಟು ದೊಡ್ಡ ಭ್ರಮೆ ಎಂಬುದೀಗ ಜಗತ್ತಿಗೆ ಅರಿವಾಗುತ್ತಿದೆ.

ಅಫ್ಗಾನಿಸ್ತಾನ ಅನ್ನುವುದು ಇತಿಹಾಸದ ಉದ್ದಕ್ಕೂ ಒಂದು ಕದನ ಕಣದಂತೆಯೇ ಇತ್ತು. ಅಲೆಕ್ಸಾಂಡರ್, ಘಜ್ನಿ, ಚೆಂಗೀಸ್ ಖಾನ್ ಹೀಗೆ ಹಲವರು ಈ ಪ್ರದೇಶವನ್ನು ಆಕ್ರಮಿಸಿಕೊಂಡರೂ 17ನೇ ಶತಮಾನದವರೆಗೂ ಅದೊಂದು ದೇಶ ಅನ್ನುವ ರೂಪವನ್ನಂತೂ ತಳೆದಿರಲಿಲ್ಲ. ಹಾಗೆ ನೋಡಿದರೆ ದೇಶ ಎಂಬ ಪರಿಕಲ್ಪನೆಯೇ 18ನೇ ಶತಮಾನದ್ದು. ಬ್ರಿಟಿಷರು ಭಾರತದ ಭೂಪ್ರದೇಶವನ್ನು ಆಳುವಾಗ ರಷ್ಯಾದಿಂದ ಆಗಬಹುದಾದ ದಾಳಿ ತಡೆಯಲು ಅಫ್ಗಾನಿಸ್ತಾನದಲ್ಲಿ ಎಂಬತ್ತು ವರ್ಷಗಳಲ್ಲಿ ಮೂರು ಬಾರಿ ಯುದ್ಧಕ್ಕೆ ಹೋಗಿ, ಕೊನೆಯಲ್ಲಿ ಮೊದಲ ವಿಶ್ವಯುದ್ಧದ ಆಸುಪಾಸಿನಲ್ಲಿ ಸೋಲುವುದರೊಂದಿಗೆ ಅಫ್ಗಾನಿಸ್ತಾನ ಒಂದು ಸ್ವತಂತ್ರ ದೇಶವಾಯಿತು. ಅಲ್ಲಿಂದೀಚೆಗೆ ಹಲವು ನಾಯಕರು ಆ ದೇಶದಲ್ಲಿ ಶಾಂತಿ, ಸ್ಥಿರತೆ ತರಲು, ವ್ಯವಸ್ಥೆಗಳನ್ನು ರೂಪಿಸಲು, ಹೆಣ್ಣುಮಕ್ಕಳಿಗೆ ಹಕ್ಕುಗಳನ್ನು ಕೊಡಲು ಪ್ರಯತ್ನವನ್ನೇನೋ ಮಾಡಿದರು. ಆದರೆ ಹೊರಗಿನ ಶಕ್ತಿಗಳಿಗೆ ಸದಾ ತಮ್ಮ ರಾಜಕೀಯ ಹಿತಾಸಕ್ತಿಗಳ ಆಟದ ಬಯಲಂತಿದ್ದ ಅಫ್ಗನ್‌ನಲ್ಲಿ ದೇಶ ಕಟ್ಟುವಿಕೆ ಅನ್ನುವುದು ನಿಜವಾದ ಅರ್ಥದಲ್ಲಿ ಎಂದಿಗೂ ಸಾಧ್ಯವಾಗಲಿಲ್ಲ.

ಐವತ್ತರಿಂದ ತೊಂಬತ್ತರ ದಶಕದವರೆಗೆ ಕಮ್ಯುನಿಸ್ಟ್ ರಷ್ಯಾದ ಪ್ರಭಾವದಲ್ಲಿ ಆಳಿದವರೆಲ್ಲ, ಅಫ್ಗನ್ ಸಮಾಜ ಒಪ್ಪುತ್ತದೋ ಬಿಡುತ್ತದೋ ಎಂದು ಗಮನಿಸದೆ ಕಮ್ಯುನಿಸ್ಟ್ ಚಿಂತನೆಯಂತೆ ದೇಶ ಮತ್ತು ವ್ಯವಸ್ಥೆಯನ್ನು ಮೇಲಿನಿಂದ ಕಟ್ಟಲು ಹೋಗಿದ್ದು ವಿಫಲವಾಯಿತು.

ತನ್ನ ಕೈಗೊಂಬೆ ಸರ್ಕಾರಗಳು ಜನರ ಬೆಂಬಲ ಕಳೆದುಕೊಳ್ಳುತ್ತಿರುವುದನ್ನು ಕಂಡು ರಷ್ಯಾ ಖುದ್ದಾಗಿ 1979ರಲ್ಲಿ ದಾಳಿ ಮಾಡಿ ಅಫ್ಗಾನಿಸ್ತಾನವನ್ನು ವಶಕ್ಕೆ ಪಡೆದು ಹತ್ತು ವರ್ಷಗಳ ಕಾಲ ಅದನ್ನು ನಿಯಂತ್ರಿಸಲು ಪ್ರಯತ್ನಿಸಿ ಸೋತಿತು. ಈಗ ಅಮೆರಿಕ ನಡುನೀರಿನಲ್ಲಿ ಕೈಬಿಟ್ಟು ಕೈತೊಳೆದುಕೊಂಡು ಹೋದಂತೆ ಆಗ ರಷ್ಯಾ ಎದ್ದು ಹೋಗಿತ್ತು. ಹಾಗೆ ರಷ್ಯಾವನ್ನು ಅಫ್ಗಾನಿಸ್ತಾನದಲ್ಲಿ ಕಟ್ಟಿ ಹಾಕಲು ಅಫ್ಗನ್ ಮುಜಾಹಿದ್ದೀನ್ ಬಂಡುಕೋರರನ್ನು ಎತ್ತಿ ಆಡಿಸಿ ಮದ್ದುಗುಂಡು ಕೊಟ್ಟು ಪೊರೆದದ್ದು ಅಮೆರಿಕ ಮತ್ತು ಚೀನಾ ಆಗಿದ್ದವು. ಎಂದಿನಂತೆ ಈ ಕೆಲಸಗಳಿಗೆ ಮಧ್ಯಸ್ಥಿಕೆ ಪಾಕಿಸ್ತಾನದ್ದಾಗಿತ್ತು. ಅಫ್ಗಾನಿಸ್ತಾನ ಅನ್ನುವುದು ತಮ್ಮ ಗುಂಪುಗಳಿಗೆ ಮಾತ್ರ ನಿಯತ್ತು ಹೊಂದಿದ್ದ ಹಲವು ಪಂಗಡಗಳ ಒಂದು ಬಿಡಿಯಾದ ಸಂತೆಯಂತೆಯೇ ಯಾವತ್ತಿಗೂ ಇತ್ತು. ಹೀಗಾಗಿ ಅಲ್ಲಿ ರಷ್ಯನ್ನರ ಕಮ್ಯುನಿಸಂ ಜೊತೆಗಾಗಲಿ, ಅಮೆರಿಕನ್ನರ ಕ್ಯಾಪಿಟಲಿಸಂ ಜೊತೆಗಾಗಲಿ ಒಂದು ನಿಜ ಅರ್ಥದ ಹೊಂದಿಕೊಳ್ಳುವಿಕೆ ಅನ್ನುವುದು ಸಾಧ್ಯವಾಗಲೇ ಇಲ್ಲ. ಹೀಗಾಗಿ ಅಮೆರಿಕ ಅಲ್ಲಿಂದ ತೆರಳುತ್ತಿದ್ದಂತೆಯೇ ಅಲ್ಲಿ ಮತ್ತೆ ಅರಾಜಕತೆ ಉಂಟಾಗಿರುವುದರಲ್ಲಿ ಅಚ್ಚರಿಯೇನೂ ಇಲ್ಲ.

ದೇಶ ಅನ್ನುವುದು ಒಂದು ಕಲ್ಪಿತ ಸಮುದಾಯ ಎಂಬುದು ಬೆನೆಡಿಕ್ಟ್ ಆ್ಯಂಡರ್ಸನ್ ಅನ್ನುವ ಸಮಾಜಶಾಸ್ತ್ರಜ್ಞನ ವಾದ. ದೇಶದ ಪ್ರತಿಯೊಬ್ಬರಿಗೂ ತನ್ನ ದೇಶದ ಇನ್ನೊಬ್ಬರ ವೈಯಕ್ತಿಕ ಪರಿಚಯವಿರಲು ಸಾಧ್ಯವಿಲ್ಲ. ಹೀಗಿದ್ದಾಗಲೂ ತಾವೆಲ್ಲ ಒಂದು ದೇಶದ ಭಾಗ ಅನ್ನಿಸುವ ಹಾಗೆ ಆಗಬೇಕು ಅಂದರೆ, ಅದು ಅಂತಹದ್ದೊಂದು ಕಲ್ಪನೆಯನ್ನು ಜನಮಾನಸದಲ್ಲಿ ನೆಲೆಗೊಳಿಸಿದಾಗಲಷ್ಟೇ ಸಾಧ್ಯ ಅನ್ನುವುದು ಅವರ ವಾದದ ತಿರುಳು. ತಮ್ಮ ಪಂಗಡಗಳಾಚೆ ಅಫ್ಗನ್ನರೆಲ್ಲರಲ್ಲಿ 'ನಾವೆಲ್ಲ ಒಂದು' ಎಂದು ಜೋಡಿಸುವ ಕಲ್ಪನೆಯೊಂದನ್ನು ಕಟ್ಟಲು ಸಾಧ್ಯವಾಗದೆ ಇದ್ದದ್ದೇ ಅಲ್ಲಿ ದೇಶ ಕಟ್ಟುವುದು ವಿಫಲವಾಗಲು ಇರುವ ಮುಖ್ಯ ಕಾರಣ. ರಷ್ಯಾ, ಅಮೆರಿಕ, ಚೀನಾ ಮತ್ತು ಪಾಕಿಸ್ತಾನದ ರಾಜಕೀಯ ಮೇಲಾಟ ಅಂತಹದ್ದೊಂದು ಕಲ್ಪನೆ ಎಂದಿಗೂ ಗಟ್ಟಿಗೊಳ್ಳದಂತೆ ನೋಡಿಕೊಂಡಿದೆ ಕೂಡ. ಅಂತಹ ಕಲ್ಪನೆಯನ್ನು ಭಾವನಾತ್ಮಕ ನೆಲೆಯಲ್ಲಿ ಹಾಗೂ ಹೀಗೂ ಕಟ್ಟಬಹುದೇನೊ. ಆದರೆ ಅದು ಗಟ್ಟಿಗೊಳ್ಳಲು ಈ ಕಲ್ಪನೆಯಲ್ಲಿ ತನಗೂ ಪಾಲಿದೆ, ಅದು ತನ್ನ ಹಿತಾಸಕ್ತಿಗಳಿಗೂ ಪೂರಕ ಎಂದು ಬಹುತೇಕ ಪ್ರಜೆಗಳಲ್ಲಿ ನಂಬಿಕೆ ಬರಬೇಕು.

ಭಾರತದಲ್ಲಿ ಬ್ರಿಟಿಷರ ವಿರುದ್ಧ ಒಂದು ಭಾವನಾತ್ಮಕ ನೆಲೆಯಲ್ಲಿ ಸ್ವಾತಂತ್ರ್ಯ ಹೋರಾಟ ನಡೆದಿದ್ದು, ಭಾರತದಲ್ಲಿನ ವೈವಿಧ್ಯವನ್ನು ಪೊರೆಯಲು ಒಕ್ಕೂಟ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದು ಮತ್ತು ಆ ಮೂಲಕ ಇದರಲ್ಲಿ ಎಲ್ಲರ ಪಾಲುದಾರಿಕೆ ಇದೆ ಅನ್ನುವಂತೆ ನಡೆದುಕೊಂಡಿದ್ದು ಹೀಗೆ ಹಲವು ಕಾರಣಗಳಿಂದಾಗಿ, ಹಲವು ಕೊರತೆಗಳ ನಡುವೆಯೂ ದೇಶ ಅನ್ನುವ ಪರಿಕಲ್ಪನೆ ಭಾರತದಲ್ಲಿ ಗಟ್ಟಿಯಾಗಿ ನೆಲೆಯೂರಿತು.



2001ರಲ್ಲಿ ನ್ಯೂಯಾರ್ಕಿನ ಅವಳಿ ಗೋಪುರಗಳಿಗೆ ವಿಮಾನ ಗುದ್ದಿಸಿದ ಒಸಾಮಾ ಬಿನ್ ಲಾಡೆನ್ ಅಫ್ಗಾನಿಸ್ತಾನದಲ್ಲಿ ಬಚ್ಚಿಟ್ಟುಕೊಂಡಿದ್ದಾನೆ ಅನ್ನುವ ಕಾರಣ ಕೊಟ್ಟು ಅಮೆರಿಕ ತನ್ನ ಗೆಳೆಯರೊಡನೆ ಅಲ್ಲಿ ದಾಳಿಗೆ ಮುಂದಾಯಿತು. ತಾತ್ಕಾಲಿಕವಾಗಿ ತಾಲಿಬಾನ್ ಅನ್ನು ಹಿಮ್ಮೆಟ್ಟಿಸಿ ತನ್ನ ಕೈಗೊಂಬೆಯಂತಹ ಸರ್ಕಾರವೊಂದನ್ನು ಸ್ಥಾಪಿಸಿ, ಸರ್ಕಾರ, ಸಂಸ್ಥೆಗಳು, ಮಿಲಿಟರಿ ಇತ್ಯಾದಿಗಳನ್ನು ಮೇಲಿನಿಂದ ಕೆಳಗೆ ಕಟ್ಟುವ ಕೆಲಸ ಮಾಡಿದರೆ ಅಲ್ಲಿ ಶಾಂತಿ, ಸ್ಥಿರತೆ ಬರುತ್ತದೆ ಅನ್ನುವ ಲೆಕ್ಕಾಚಾರ ಹೊಂದಿತ್ತು. ಆದರೆ ಮೂರು ಲಕ್ಷ ಸೈನಿಕರ ಅಫ್ಗನ್ ಪಡೆಯು 75,000 ತಾಲಿಬಾನ್ ಉಗ್ರರನ್ನು ಎದುರಿಸದೆ ಶರಣಾದದ್ದು ಏನನ್ನು ತೋರಿಸುತ್ತದೆ? ಮಿಲಿಟರಿಯೂ ಸೇರಿದಂತೆ ಬಹುತೇಕ ಪ್ರಜೆಗಳ ಬೆಂಬಲ ಅಮೆರಿಕ ಸ್ಥಾಪಿಸಿದ್ದ ಸರ್ಕಾರಕ್ಕಿರಲಿಲ್ಲ ಎಂದು ತೋರುತ್ತದೆ. ಸರ್ಕಾರ ದಲ್ಲಿದ್ದವರ ಭ್ರಷ್ಟಾಚಾರವೂ ಜನರ ಸಿಟ್ಟಿಗೆ ಕಾರಣವಾಗಿತ್ತು.

ಎರಡು ದಶಕಗಳಲ್ಲಿ ಅಲ್ಲಿನ ಸ್ಥಳೀಯ ಗುಂಪುಗಳನ್ನು ತೆಕ್ಕೆಗೆ ತೆಗೆದುಕೊಂಡು ದೇಶ ಕಟ್ಟುವಿಕೆಯಲ್ಲಿ ಅವರಿಗೂ ಪಾಲಿದೆ ಅನ್ನುವಂತಹ ಒಳಗೊಳ್ಳುವ ನಡೆಯ ಮಹತ್ವವನ್ನು ಅಮೆರಿಕ ಅರಿಯದೇ ಹೋಯಿತು. ಅಮೆರಿಕನ್ನರು ಹೊರಗಿನ ದಾಳಿಕೋರರು ಅನ್ನುವ ಅನಿಸಿಕೆ ಅಲ್ಲಿನ ಪ್ರಜೆಗಳಲ್ಲಿದ್ದಾಗ ಅಲ್ಲಿ ಅದು ಎಣಿಸಿದಂತೆ ದೇಶ ಕಟ್ಟುವ ಯೋಜನೆ ಯಶಸ್ವಿಯಾಗಲು ಹೇಗೆ ಸಾಧ್ಯ ಅನ್ನುವ ಪ್ರಶ್ನೆಯನ್ನು ಈಗ ಹಲವು ವಿಶ್ಲೇಷಕರು ಎತ್ತುತ್ತಾರೆ. ಏನೇ ಆದರೂ ಕೊನೆಯಲ್ಲಿ ಈ ಶಕ್ತಿಕೂಟಗಳ ಮೇಲಾಟದಲ್ಲಿ ಸಾಮಾನ್ಯ ಅಫ್ಗನ್ನರು ಮನೆ, ಮಠ, ಬಂಧು, ಬಳಗ ಎಲ್ಲವನ್ನೂ ಕಳೆದುಕೊಂಡು ದೇಶಾಂತರ ಹೋಗುವ ದುರಂತವೊಂದು ನಮ್ಮೆದುರು ತೆರೆದುಕೊಳ್ಳುತ್ತಿರುವುದಂತೂ ಸತ್ಯ.

ಅನಿಶ್ಚಿತತೆ ಎದುರಾದಾಗ ಮನುಷ್ಯನ ನಡವಳಿಕೆ ಹೇಗಿರುತ್ತದೆ ಅನ್ನುವುದನ್ನು ಅಧ್ಯಯನ ಮಾಡಿ 'ದಿ ಪವರ್ ಆಫ್ ನಥಿಂಗ್ ಟು ಲೂಸ್' ಅನ್ನುವ ಪುಸ್ತಕ ಬರೆದಿರುವ ನ್ಯೂಯಾರ್ಕ್ ವಿಶ್ವವಿದ್ಯಾಲಯದ ಅಧ್ಯಾಪಕ ವಿಲಿಯಂ ಸಿಲ್ಬರ್ ಅವರ ಪ್ರಕಾರ, 'ಕಳೆದುಕೊಳ್ಳಲು ಏನೂ ಇಲ್ಲ' ಅನ್ನುವ ಮನಃಸ್ಥಿತಿಗೆ ಯಾರಾದರೂ ತಲಪಿದಾಗ ಅವರು ರಿಸ್ಕ್ ತೆಗೆದುಕೊಳ್ಳುವ ಇಲ್ಲವೇ ಯುದ್ಧದಂತಹ ನಡೆಯತ್ತ ಹೋಗುವುದು ಹೆಚ್ಚು ಸಹಜ. ಮಧ್ಯಪ್ರಾಚ್ಯದಲ್ಲಿ ಸತತವಾಗಿ ಬಡಿದಾಡಿಕೊಳ್ಳುವ ಸ್ಥಿತಿ ಇರುವುದಕ್ಕೆ ಇಂತಹ ಮನಃಸ್ಥಿತಿಯೇ ಕಾರಣ. ಇದನ್ನು ಅಫ್ಗನ್ ಸ್ಥಿತಿಯ ಜೊತೆ ಇಟ್ಟು ನೋಡುವುದಾದರೆ, ಎಲ್ಲಿಯವರೆಗೆ ಅಲ್ಲಿನ ಪಂಗಡಗಳು ದೇಶದ ಕಟ್ಟುವಿಕೆಯಲ್ಲಿ ತಮಗೂ ಪಾಲಿದೆ, ದೇಶದ ಅರಾಜಕತೆಯಿಂದ ತಮಗೇ ನಷ್ಟ ಅನ್ನುವ ಸ್ಥಿತಿಗೆ ತಲುಪುವುದಿಲ್ಲವೋ ಅಲ್ಲಿಯವರೆಗೂ ಅಲ್ಲಿ ಶಾಂತಿ ನೆಲೆಸುವುದು ಕಷ್ಟ.

ಜಾಗತೀಕರಣದ ಮಿತಿಗಳು ಈಗ ಹೆಚ್ಚು ಪ್ರಶ್ನೆಗೊಳಗಾಗುತ್ತಿವೆ, ಪರಿಸರದ ವಿನಾಶ ತರುತ್ತಿರುವ ನಿಸರ್ಗದ ಆಪತ್ತುಗಳನ್ನು ಈಗ ಯಾರೂ ಅಲ್ಲಗಳೆಯಲಾಗದು. ಇವುಗಳ ನಡುವೆಯೇ ದೇಶ ದೇಶಗಳ ನಡುವೆ, ದೇಶದ ಒಳಗಡೆಯೂ ಸಹಕಾರ ಸಾಧ್ಯವಾಗಬೇಕು ಅಂದರೆ ಅದರಲ್ಲಿ ಎಲ್ಲರಿಗೂ ಪಾಲಿದೆ, ಸಹಕರಿಸದೇ ಇದ್ದರೆ ಕಳೆದುಕೊಳ್ಳುವುದು ಬಹಳ ಇದೆ ಅನ್ನುವುದನ್ನು ಮನವರಿಕೆ ಮಾಡಿಕೊಡುವಂತಹ ತಳಹದಿಯ ಮೇಲೆ ದೇಶ ಕಟ್ಟುವಿಕೆಯನ್ನು ನೋಡಬೇಕಿದೆ. ಇದು ಎಲ್ಲ ದೇಶಗಳಿಗೂ ಅನ್ವಯಿಸುತ್ತದೆ.

ಚುರುಮುರಿ



ಬುಡಕ್ಕೇ ಸಂಚಕಾರ!

• ಎಸ್.ಬಿ.ರಂಗನಾಥ್

'ಡ್ರಗ್ಸ್ ಅಂದ್ರ ಔಷಧಿ ಅಲ್ವೇನ್ರಿ?' ಎಂದಳು ಶ್ರೀಮತಿ. 'ಹೌದು, ಬೆಳ್ಳಂಬೆಳಗ್ಗೆ ಆ ವಿಷ್ಯ ಯಾಕೆ?' ಎಂದು ಕೇಳಿದೆ.

'ದೊಡ್ಡವರ ಡ್ರಗ್ಸ್ ದಂಧೆ ಅಂತ ಪೇಪರಲ್ಲಿ ಬರ್ತಿದೆಯಲ್ಲಾ?'

'ಅದು ಸಾಮಾನ್ಯ ಔಷಧಿಯಲ್ಲ. ಹೊಟ್ಟೆ ತುಂಬಿದೋರು ನಶೆ ಏರಿಸಿಕೊಳ್ಳೋಕೆ ತಗೊಳ್ಳೋ ನಿಷೇಧಿತ ವಸ್ತು'.

'ಒಲಿಂಪಿಕ್ಸ್‌ನಲ್ಲಿ ಡ್ರಗ್ಸ್ ತಗೊಂಡಿದ್ದಾಂತ ಕೆನಡಾದ ಅಥ್ಲೀಟ್‌ನನ್ನು ಹೊರಹಾಕಿದ್ರಲ್ಲಾ'.

'ಹೌದು, ಇದು ಕೋಟ್ಯಂತರ ರೂಪಾಯಿಯ ಕಾಳಸಂತೆ ವ್ಯಾಪಾರ. ಬೆಂಗಳೂರಲ್ಲೂ ಎಗ್ಗಿಲ್ಲದೆ ನಡೀತಿದೆ. ಯುವಕರೊಡನೆ ಹೋಗುವ ಯುವತಿಯರಿಗೆ ಆ ಪಾರ್ಟಿಗಳಲ್ಲಿ ಉಚಿತ ಪ್ರವೇಶವಂತೆ, ನಾವೂ ಒಂದು ಕೈ ನೋಡೋಣ್ವೇ?'

ಹೆಂಡತಿ ನನ್ನತ್ತ ಬೀಸಿ ಎಸೆದ ವ್ಯಾನಿಟಿ ಬ್ಯಾಗಿನ ಗುರಿ ತಪ್ಪಿಸಿಕೊಂಡು ಹೇಳಿದೆ, 'ತಮಾಷೆಗೆ ಹಾಗಂದೆ ಮಾರಾಯ್ತಿ... ಆದ್ರೆ ಆ ಅದ್ರಲ್ಲಿ ಮಹಿಳಾ ಮಣಿಯರ ಪಾತ್ರವೇ ಹೆಚ್ಚಂತೆ. ಜೈಲಿನಲ್ಲಿದ್ದ ಸಿನಿಮಾ ನಟಿಯರು ಜಾಮೀನಿನ ಮೇಲೆ ಹೊರಗೆ ಬಂದಿದಾರೆ!'

'ಹೌದ್ಹೌದು, ಇದ್ರಲ್ಲಿ ಮೀಸೆ ಹೊತ್ತೋರು ಯಾರೂ ಇಲ್ಲವೇ ಇಲ್ಲ ಅಲ್ವೆ? ಮಾಜಿ ಮಂತ್ರಿಗಳ ಮಗ, ರಿಯಲ್ ಎಸ್ಟೇಟ್ ಉದ್ಯಮಿ ಡ್ರಗ್ಸ್ ಪಾರ್ಟಿ, ಆಫ್ಟರ್ ಪಾರ್ಟಿ ನಡೆಸುತ್ತಿದ್ರಂತಲ್ಲಾ. ಇವ್ರಲ್ಲದೆ ಪೊಲೀಸ್ ಆತಿಥ್ಯ ಪಡೆದು ಈಗ ಹೊರಬಂದಿರೋರು 18-20 ಜನ ಯಾರು?'

ಬುಡಕ್ಕೇ ಸಂಚಕಾರ ಬಂದದ್ದರಿಂದ ವಿಷಯಾಂತರಿಸಿದೆ, 'ತಪ್ಪಾಯ್ತು ಮೇಡಮ್, ನೀವು ದೊಡ್ಡೋರು. ಪ್ಯಾರಾಲಿಂಪಿಕ್ಸ್ ಶೂಟಿಂಗ್‌ನಲ್ಲಿ ನಮ್ಮ ಅವನಿ ಲೇಖರ ಮೊದಲ ಚಿನ್ನದ ಪದಕ ಗೆದ್ದು ದೇಶಕ್ಕೆ ಕೀರ್ತಿ ತಂದರಲ್ಲಾ! ಕಾರು ಅಪಘಾತದಲ್ಲಿ ದೇಹದ ಅರ್ಧಭಾಗ ನಿಷ್ಕ್ರಿಯವಾಗಿದ್ದರೂ ಛಲದಿಂದ ಸಾಧನೆ ಮಾಡಿದ ದಿಟ್ಟಗಾತಿ'.

'ಆಕೆಯ ಕೋಚ್ ಕನ್ನಡತಿ, ಮಾಜಿ ಶೂಟರ್ ಸುಮಾ ಶಿರೂರು, ಗೊತ್ತಾ? ಮಹಿಳಾ ಪಟುಗಳಾದ ಪಲಕ್ ಕೊಹ್ಲಿ ಮತ್ತು ಪ್ರಾಚಿ ಯಾದವ್ ಅವ್ರಿಗೂ ಪದಕ ಗ್ಯಾರಂಟಿ. ಹೇಗಿದೆ ಮಹಿಳಾಮಣಿಯರ ಮಹತ್ವ?' ಎಂದಳು ನನ್ನಾಕೆ. ನಾನು ಮೂಗಿನ ಮೇಲೆ ಬೆರಳಿಟ್ಟೆ.

ಸಂಗತ

ಹೆಲಿಕಾಪ್ಟರ್ ಉದ್ಯಮ: ಬೇಕಿದೆ ಕಾಯಕಲ್ಪ

ಹೆಲಿಕಾಪ್ಟರ್ ವಲಯದಲ್ಲಿ ಭಾರತ ಸಕಾರಾತ್ಮಕವಾದ ಪ್ರವೃತ್ತಿಯನ್ನು ತೋರುತ್ತಿದೆಯಾದರೂ ಮೂಲಸೌಕರ್ಯಗಳ ಕೊರತೆ ಎದ್ದು ಕಾಣುವಂತಿದೆ

• ಗಿರೀಶ್ ಲಿಂಗಣ್ಣ

ದೇಶದಲ್ಲಿ ನಾಗರಿಕ ವಿಮಾನಯಾನ ಮಾರುಕಟ್ಟೆಯು ಶರವೇಗದಲ್ಲಿ ಬೆಳೆಯುವ ಅವಕಾಶಗಳನ್ನು ಹೊಂದಿದೆ. ವಾಯುಯಾನ ಕ್ಷೇತ್ರದ ದಿಗ್ಗಜರು ಭಾರತದತ್ತ ಆಕರ್ಷಿತ ಆಗುತ್ತಿದ್ದಾರೆ. ಆದರೆ, ಹಲವು ಅನುಕೂಲಗಳು ಇರುವುದರ ಹೊರತಾಗಿಯೂ ಹೆಲಿಕಾಪ್ಟರ್ ಉದ್ಯಮ ಹಿಂದೆ ಬೀಳುವಂತೆ ಆಗಿದೆ.


'ರೆಕ್ಕೆಗಳು ರೂಪುಗೊಳ್ಳುತ್ತವೆ' ಎಂಬ ಪದವು ಇಂದು ಭಾರತದ ನಾಗರಿಕ ವಿಮಾನಯಾನ ಮಾರುಕಟ್ಟೆಗೆ ಚೆನ್ನಾಗಿ ಅನ್ವಯವಾಗುತ್ತದೆ. ಏಕೆಂದರೆ, ಸ್ಥಿರ ರೆಕ್ಕೆಯ ಅಂದರೆ ವಿಂಗ್ ವಿಮಾನಗಳ ವಹಿವಾಟು ಬೆಳವಣಿಗೆ ಉತ್ತಮವಾಗಿದೆ. ಆದರೆ, ಭಾರತದಲ್ಲಿ ನಾಗರಿಕ ಹೆಲಿಕಾಪ್ಟರ್ ವ್ಯವಹಾರವು ಬೆಳವಣಿಗೆಯನ್ನು ದೊಡ್ಡ ಪ್ರಮಾಣದಲ್ಲಿ ಕಂಡಿಲ್ಲ. 1953ರ ನವೆಂಬರ್‌ನಲ್ಲಿ ಭಾರತದಲ್ಲಿ ಮೊದಲ ನಾಗರಿಕ ಹೆಲಿಕಾಪ್ಟರ್ ಹಾರಾಟ ಆರಂಭವಾದಾಗಿನಿಂದ ವಾಣಿಜ್ಯ ಬಳಕೆಯ ಹೆಲಿಕಾಪ್ಟರ್ ಹಾರಾಟ ಸೀಮಿತವಾಗಿದೆ.

1986ರಲ್ಲಿ ಹೆಲಿಕಾಪ್ಟರ್ ಕಾರ್ಪೊರೇಷನ್ ಆಫ್ ಇಂಡಿಯಾವನ್ನು (ನಂತರ ಪವನ್ ಹನ್ಸ್ ಹೆಲಿಕಾಪ್ಟರ್ ಲಿಮಿಟೆಡ್) ರಚನೆ ಮಾಡಿದ ನಂತರ ಭಾರತದಲ್ಲಿ ನಾಗರಿಕ ಹೆಲಿಕಾಪ್ಟರ್ ಉದ್ಯಮಕ್ಕೆ ಒಂದು ಹೊಸ ತಿರುವು ಸಿಕ್ಕಿತು. ಪವನ್ ಹನ್ಸ್ ಈಗ ದೇಶದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಹೆಲಿಕಾಪ್ಟರ್ ನಿರ್ವಹಣೆ ಮತ್ತು ಕಾರ್ಯಾಚರಣೆಯನ್ನು ನಡೆಸುತ್ತಿದೆ. ಕಾರ್ಯಾಚರಣೆ ವೆಚ್ಚದಲ್ಲಿ ಹೆಚ್ಚಳ ಮತ್ತು ನಿಯಂತ್ರಣ ಮಾರ್ಗಸೂಚಿಗಳು ಬಂದದ್ದರಿಂದ ಕಂಪನಿಗೆ ಕಠಿಣ ಸಮಯ ಎದುರಾಯಿತು. ಭಾರತ ಪ್ರಸ್ತುತ 266 ನೋಂದಾಯಿತ ನಾಗರಿಕ ಹೆಲಿಕಾಪ್ಟರ್‌ಗಳನ್ನು ಹೊಂದಿದ್ದು, ನಾನ್-ಶೆಡ್ಯೂಲ್ಡ್ ಆಪರೇಟರ್‌ಗಳು, ಖಾಸಗಿ ವಿಭಾಗ, ಸರ್ಕಾರಿ (ಕೇಂದ್ರ ಮತ್ತು ರಾಜ್ಯ) ಹಾಗೂ ಪಿಎಸ್‌ಯುಗಳೊಂದಿಗೆ (ಸರ್ಕಾರಿ ಸ್ವಾಮ್ಯದ ಕಂಪನಿಗಳು) ಕಾರ್ಯನಿರ್ವಹಣೆ ಮಾಡಲಾಗುತ್ತಿದೆ.

ನಾನ್-ಶೆಡ್ಯೂಲ್ಡ್ ಆಪರೇಟರ್‌ಗಳು ಅತಿ ಹೆಚ್ಚು ಹೆಲಿಕಾಪ್ಟರ್‌ಗಳನ್ನು (200ಕ್ಕೂ ಹೆಚ್ಚು) ಹೊಂದಿದ್ದಾರೆ. ಉಳಿದ ಹೆಲಿಕಾಪ್ಟರ್‌ಗಳನ್ನು ಖಾಸಗಿ ಸಂಸ್ಥೆಗಳು ಮತ್ತು ಪಿಎಸ್‌ಯುಗಳು ಬಳಕೆ ಮಾಡುತ್ತಿವೆ. ಆಶ್ಚರ್ಯವೆಂದರೆ, ಜಾಗತಿಕ ಅಂಕಿ–ಅಂಶಗಳಿಗೆ ಹೋಲಿಸಿದರೆ ಇದು ಅತ್ಯಂತ ಕಡಿಮೆ. ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ, ವಿಶ್ವದಾದ್ಯಂತ 34 ಸಾವಿರಕ್ಕೂ ಅಧಿಕ ನಾಗರಿಕ ಹೆಲಿಕಾಪ್ಟರ್‌ಗಳು ಕಾರ್ಯಾಚರಣೆ ಮಾಡುತ್ತಿವೆ ಮತ್ತು ಇದರಲ್ಲಿ ಶೇಕಡ 1ಕ್ಕಿಂತ ಕಡಿಮೆ ಪ್ರಮಾಣದ ಹೆಲಿಕಾಪ್ಟರ್‌ಗಳು ಭಾರತದಲ್ಲಿವೆ.

ಸ್ವಿಟ್ಜರ್ಲೆಂಡ್‌ನಂತಹ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ ಪ್ರಸ್ತುತ ಭಾರತವು ಅತ್ಯಂತ ಕಡಿಮೆ ನಾಗರಿಕ ಹೆಲಿಕಾಪ್ಟರ್‌ಗಳನ್ನು ಹೊಂದಿದೆ. ಈ ವಿಚಾರದಲ್ಲಿ ಬ್ರೆಜಿಲ್ ದೇಶವೂ ಮುಂದೆ ಸಾಗಿದೆ. ಬ್ರೆಜಿಲ್‌ನ ಸಾಪೋಲೊ ನಗರವೊಂದರಿಂದಲೇ 750ಕ್ಕೂ ಹೆಚ್ಚು ಹೆಲಿಕಾಪ್ಟರ್‌ಗಳು ಹಾರಾಟ ನಡೆಸುತ್ತವೆ.

ಆದರೆ, ಹಲವು ಸಮಸ್ಯೆಗಳು ಇದ್ದರೂ ಭಾರತದಲ್ಲಿ ನಾಗರಿಕ ಹೆಲಿಕಾಪ್ಟರ್ ಉದ್ಯಮ ಕ್ಷೇತ್ರದಲ್ಲಿ ಆಶಾದಾಯಕ ವಾತಾವರಣ ಇದೆ. ಅಗಸ್ಟಾ ವೆಸ್ಟ್‌ಲ್ಯಾಂಡ್, ಸಿಕೋರ್ಸ್ಕಿ ಮತ್ತು ಯೂರೋಕಾಪ್ಟರ್‌ನಂತಹ ಹೆಲಿಕಾಪ್ಟರ್ ತಯಾರಕಾ ಕಂಪನಿಗಳು ಜಂಟಿ ಸಹಭಾಗಿತ್ವವನ್ನು ಹೊಂದಿರುವುದು ಭಾರತದಲ್ಲಿನ ನಾಗರಿಕ ಹೆಲಿಕಾಪ್ಟರ್ ಉದ್ಯಮದ ಪ್ರಗತಿ ಆಶಾದಾಯಕವಾಗಿದೆ ಎಂಬುದನ್ನು ತೋರಿಸಿಕೊಡುತ್ತದೆ.



ಜಗತ್ತಿನಾದ್ಯಂತ ಸುಮಾರು ಶೇಕಡ 40ರಷ್ಟು ನಾಗರಿಕ ಹೆಲಿಕಾಪ್ಟರ್‌ಗಳನ್ನು ಕಾರ್ಪೊರೇಟ್ ಬ್ಯುಸಿನೆಸ್ ವಲಯವು ಬಳಸುತ್ತಿದೆ. ಶೇ 29ರಷ್ಟು ತುರ್ತು ವೈದ್ಯಕೀಯ ಸೇವೆಗಳಿಗೆ ಮತ್ತು ಕಾನೂನು ಸುವ್ಯವಸ್ಥೆ ಜಾರಿಗೆ, ಶೇ 16ರಷ್ಟು ಆಫ್‌ಶೋರ್ ಆಪರೇಷನ್ ಮತ್ತು ಇನ್ನುಳಿದ ಹೆಲಿಕಾಪ್ಟರ್‌ಗಳನ್ನು ಪ್ರವಾಸೋದ್ಯಮ, ಸಾಹಸ ಕ್ರೀಡೆಗಳು, ವೈಮಾನಿಕ ಸಮೀಕ್ಷೆಯಂತಹ ಚಟುವಟಿಕೆಗಳಿಗೆ ಬಳಸಲಾಗುತ್ತಿದೆ. ಭಾರತದಲ್ಲಿ ಬಹುತೇಕ ಹೆಲಿಕಾಪ್ಟರ್‌ಗಳನ್ನು ಇಂಧನ ಕ್ಷೇತ್ರ, ಆನ್‌ಶೋರ್ ಮತ್ತು ಆಫ್‌ಶೋರ್‌ಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಉಳಿದವನ್ನು ಸಂವಹನ, ವೈದ್ಯಕೀಯ ನೆರವಿಗೆ (ಏರ್ ಟ್ಯಾಕ್ಸಿ/ ಆಂಬುಲೆನ್ಸ್), ಹೆಲಿಟೂರಿಸಂ ಮತ್ತು ಇತರ ಸೇವೆಗಳಿಗೆ ಬಳಸಿಕೊಳ್ಳಲಾಗುತ್ತಿದೆ.

ಹೆಲಿಕಾಪ್ಟರ್‌ಗಳನ್ನು ಅವುಗಳ ಕಾರ್ಯದಕ್ಷತೆಯ ಆಧಾರದಲ್ಲಿ ಮಾಪನ ಮಾಡಲಾಗುತ್ತದೆ. ಅಂದರೆ, ಅವುಗಳ ವೇಗ, ಸುರಕ್ಷತೆ, ವಿಶ್ವಾಸಾರ್ಹತೆ ಹೀಗೆ ಹಲವು ದೃಷ್ಟಿಕೋನಗಳಲ್ಲಿ ಅವುಗಳ ಕಾರ್ಯದಕ್ಷತೆಯನ್ನು ತುಲನೆ ಮಾಡಲಾಗುತ್ತದೆ. ಬಹು ಎಂಜಿನ್ ಹೆಲಿಕಾಪ್ಟರ್‌ಗಳನ್ನು ರಕ್ಷಣಾ ಕ್ಷೇತ್ರದಲ್ಲಿ ಹೆಚ್ಚು ಬಳಸಲಾಗುತ್ತದೆ. ಇವುಗಳ ಕಾರ್ಯಾಚರಣೆ ವೆಚ್ಚ ಹೆಚ್ಚಿರುತ್ತದೆ ಮತ್ತು ಹಲವು ವೈಶಿಷ್ಟ್ಯಗಳನ್ನು ಹೊಂದಿರುತ್ತವೆ.

ಬೆಳೆಯುತ್ತಿರುವ ಹೆಲಿಕಾಪ್ಟರ್ ವಲಯದಲ್ಲಿ ಭಾರತವು ಸಕಾರಾತ್ಮಕವಾದ ಪ್ರವೃತ್ತಿಯನ್ನು ತೋರಿಸಿದರೂ ಕಾರ್ಯಾಚರಣೆಯ ಹೆಚ್ಚಿನ ವೆಚ್ಚ, ಹೆಚ್ಚುತ್ತಿರುವ ವಾಯುಯಾನ ಟರ್ಬೈನ್ ಇಂಧನ ವೆಚ್ಚ, ಹೆಲಿಕಾಪ್ಟರ್‌ಗಳ ಆಮದಿಗೆ ಇರುವ ದುಬಾರಿ ಸುಂಕ, ಬಿಡಿ ಭಾಗಗಳು, ವಿಂಗ್ ಏರ್ ಟ್ರಾಫಿಕ್ ನಿಯಮಗಳ ಜಾರಿ ಮತ್ತು ಹೆಲಿಪೋರ್ಟ್, ಹೆಲಿಪ್ಯಾಡ್‌ನಂತಹ ಮೂಲಸೌಕರ್ಯಗಳ ಕೊರತೆ ಎದ್ದು ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಗಳು ಮತ್ತು ಅಧಿಕಾರಿಗಳು ಈ ಸಮಸ್ಯೆಗಳನ್ನು ತಕ್ಷಣ ಪರಿಹರಿಸಬೇಕಾಗಿದೆ.

ಲೇಖಕ: ನಿರ್ದೇಶಕ, ಎಡಿಡಿ ಎಂಜಿನಿಯರಿಂಗ್

ವಾಚಕರ ವಾಣಿ

ಅತಿರೇಕದ ಅಭಿಮಾನ: ಕಠಿಣ ಶಿಕ್ಷೆಯಾಗಲಿ

ನಾಯಕನಟ ಸುದೀಪ್ ಅವರ 50ನೇ ವರ್ಷದ ಹುಟ್ಟುಹಬ್ಬದ ಸಲುವಾಗಿ, ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಬಂಡ್ರಿ ಎಂಬ ಗ್ರಾಮದಲ್ಲಿ ಅಭಿಮಾನಿಗಳು ಸುದೀಪ್ ಅವರ ಕಟೌಟ್ ಮುಂದೆ ಕೋಣವೊಂದನ್ನು ಬಲಿ ನೀಡಿದ್ದಲ್ಲದೆ, ರಕ್ತವನ್ನು ಕೈಯಲ್ಲಿ ಹಿಡಿದು ಕಟೌಟ್‌ಗೆ ಎರಚಿರುವುದು ಅಮಾನವೀಯ ನಡವಳಿಕೆ. ಕೋಣ ಬಲಿ ನೀಡುವುದು ಅಪರಾಧ ಎಂದು ಗೊತ್ತಿದ್ದರೂ ಅಭಿಮಾನಿಗಳು ಹೀಗೆ ಅತಿರೇಕದಿಂದ ವರ್ತಿಸಿದ್ದು ಸರಿಯಲ್ಲ.

ಯಾವುದೇ ಒಬ್ಬ ನಟ ತನ್ನ ಹುಟ್ಟುಹಬ್ಬದ ದಿನದಂದು ಅಭಿಮಾನಿಗಳ ಇಂತಹ ಹುಚ್ಚು ವರ್ತನೆಯನ್ನು ಸಹಿಸುವುದಿಲ್ಲ. ಅಭಿಮಾನಿಗಳ ಇಂತಹ ಹುಚ್ಚುತನದ ಪರಮಾವಧಿ ಪರೋಕ್ಷವಾಗಿ ನಟರಿಗೆ ಮಾಡಿದ ಅವಮಾನದಂತೆ ಎಂಬುದನ್ನು ಮರೆಯಬಾರದು. ಸಾಮಾಜಿಕ ಕಳಕಳಿ ಹೊಂದಿರುವ ನಟರು ಕೂಡ, ಅಭಿಮಾನಿಗಳ ಅತಿರೇಕದ ವರ್ತನೆಗಳಿಗೆ ಅವಕಾಶ ನೀಡದಂತೆ ಮನವಿ ಮಾಡಿ ಜವಾಬ್ದಾರಿ ಮೆರೆಯಬೇಕಾಗಿದೆ. ಏನೇ ಆಗಲಿ ಕೋಣ ಬಲಿ ನೀಡಿದ ಅಭಿಮಾನಿಗಳನ್ನು ಬಂಧಿಸಿ, ಕಠಿಣ ಶಿಕ್ಷೆ ನೀಡುವ ಮೂಲಕ ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕಾಗಿದೆ.

ಮುರುಗೇಶ ಡಿ., ದಾವಣಗೆರೆ

ಬೇಡಿ ಪಡೆಯುವ ಪ್ರಶಸ್ತಿಗೆ ಬೀಳಲಿ ಕಡಿವಾಣ

ರಾಜ್ಯೋತ್ಸವ ಪ್ರಶಸ್ತಿಗಾಗಿ ಅರ್ಜಿ ಹಾಕದಿದ್ದರೂ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುವುದೆಂದು ಕನ್ನಡ ಮತ್ತು ಸಂಸ್ಕೃತಿ ಸಚಿವರು ಹೇಳಿದ್ದಾರೆ. ಇದೊಂದು ಉತ್ತಮ ಬೆಳವಣಿಗೆ. ಇದೇ ರೀತಿ, ಸರ್ಕಾರದ ವತಿಯಿಂದ ನೀಡಲಾಗುವ ಎಲ್ಲ ಪ್ರಶಸ್ತಿಗಳಿಗೂ ಅರ್ಜಿ ಹಾಕುವ ಚಾಳಿ ನಿಲ್ಲಬೇಕು. ಎಲೆ ಮರೆಯ ಕಾಯಿಯಂತೆ ಅನೇಕರು ಉತ್ತಮ ಸಾಧನೆ ಮಾಡಿದ್ದಾರೆ. ಇವರು ಯಾವ ಪ್ರಶಸ್ತಿಗೂ ಅರ್ಜಿ ಹಾಕುವ ಮನಸ್ಸು ಮಾಡುವುದಿಲ್ಲ. ಇಂತಹವರನ್ನು ಗುರುತಿಸಿ ಪ್ರಶಸ್ತಿ ನೀಡುವ ಕಾರ್ಯವಾಗಬೇಕು. ಪ್ರಶಸ್ತಿಗಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಅವರಿವರನ್ನು ಕಾಡಿ ಬೇಡಿ ಪ್ರಶಸ್ತಿ ಪಡೆಯುವವರಿಗೆ ಕಡಿವಾಣ ಹಾಕಬೇಕು.

ಸಾ.ಮ.ಶಿವಮಲ್ಲಯ್ಯ, ಸಾಸಲಾಪುರ, ಕನಕಪುರ

ಶೈಕ್ಷಣಿಕ ಕಳಕಳಿ, ಅಭಿನಂದನಾರ್ಹ ನಡೆ

ಕಲಬುರ್ಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಶಂಕರನಾಯಕ ತಾಂಡಾದ ಸರ್ಕಾರಿ ಶಾಲೆಯ ಶಿಕ್ಷಕ ಶಂಕರಲಿಂಗ ಬ. ಹಿಪ್ಪರಗಿ ಅವರು ಶಾಲಾ ಮಕ್ಕಳಿಗಾಗಿ ಮಾಡುತ್ತಿರುವ ಕೈಂಕರ್ಯದ ಬಗ್ಗೆ ತಿಳಿದು (ಪ್ರ.ವಾ., ಸೆ. 3) ಶಿಕ್ಷಕ ಸಮುದಾಯದ ಬಗ್ಗೆ ಹೆಮ್ಮೆ ಹಾಗೂ ಅಭಿಮಾನಗಳೆರಡೂ ಏಕಕಾಲಕ್ಕೆ ಮೂಡಿದಂತಾಯಿತು. 45 ಮಕ್ಕಳಿರುವ, 5 ತರಗತಿಗಳನ್ನು ಹೊಂದಿದ ಶಾಲೆಯಲ್ಲಿ ಒಬ್ಬರೇ ಶಿಕ್ಷಕರಿದ್ದರೂ ತಮ್ಮ ಅಭೂತಪೂರ್ವ ಶ್ರದ್ಧೆಯಿಂದ ಅಲ್ಲಿನ ಗ್ರಾಮಸ್ಥರು ಹಾಗೂ ಎಸ್‌ಡಿಎಂಸಿಯವರ ಸಹಕಾರದೊಂದಿಗೆ ಶಾಲೆಯನ್ನು ಅಭಿವೃದ್ಧಿಪಥದತ್ತ ಮುನ್ನಡೆಸಲು ಅವರು ಪಡುತ್ತಿರುವ ಪರಿಶ್ರಮ ಬಹುಕಾಲ ನೆನಪಿನಲ್ಲಿ ಉಳಿಯುವಂಥದ್ದು.

ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇಂಥ ಶಿಕ್ಷಕರ ಲಭ್ಯತೆ ಅಪರೂಪದಲ್ಲಿ ಅಪರೂಪವೆಂದರೂ ಅತಿಶಯೋಕ್ತಿಯಲ್ಲ. ಹಾಗೆಯೇ, ಸ್ವಂತ ಬಂಡವಾಳದಲ್ಲಿ ಶಿಕ್ಷಕರಿಗೆ ದ್ವಿಚಕ್ರ ವಾಹನವನ್ನು ಕಾಣಿಕೆಯಾಗಿ ನೀಡಿದ ಪಾಲಕ ಅರುಣಕುಮಾರ ರಾಠೋಡ ಅವರ ಶೈಕ್ಷಣಿಕ ಕಳಕಳಿಯೂ ತಿಳಿಯುತ್ತದೆ. ಇಲ್ಲಿ ಶಿಕ್ಷಕರೊಂದಿಗೆ ಅವರು ಕೂಡ ಪ್ರಶಂಸನಾರ್ಹರು.

ಸಂಗಮೇಶ್ ಯಡ್ರಾಮಿ, ಅರಕೇರಾ, ದೇವದುರ್ಗ

ಇನ್ನೊಂದು ಇತಿಹಾಸ ಬರೆಯುವ ಕಾರ್ಯ?

ಬಿಹಾರದ ಚಾಪ್ರಾದಲ್ಲಿರುವ ಜಯಪ್ರಕಾಶ ನಾರಾಯಣ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರದ ಪಠ್ಯದಲ್ಲಿರುವ ಸಮಾಜವಾದಿ ನಾಯಕರಾದ ಜಯಪ್ರಕಾಶ ನಾರಾಯಣ ಮತ್ತು ರಾಮ ಮನೋಹರ ಲೋಹಿಯಾ ಅವರ ಬಗೆಗಿನ ಪುಟಗಳನ್ನು ತೆಗೆದು, ಅದರ ಬದಲಿಗೆ ದೀನದಯಾಳ್ ಉಪಾಧ್ಯಾಯ ಮತ್ತು ನೇತಾಜಿ ಸುಭಾಷ್‌ಚಂದ್ರ ಬೋಸರ ಹೆಸರುಗಳನ್ನು ಸೇರಿಸುವ ಪ್ರಯತ್ನ ನಡೆದಿದ್ದು, ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಕಟು ವಿರೋಧದಿಂದ ತಡೆಹಿಡಿಯಲಾಗಿದೆಯಂತೆ. ಬಹುಶಃ ಇತಿಹಾಸವನ್ನು ಅಳಿಸಿ ಇನ್ನೊಂದು ಇತಿಹಾಸವನ್ನು ಬರೆಯವ ಕಾರ್ಯ ನಡೆದಂತಿದೆ. ವಿಪರ್ಯಾಸವೆಂದರೆ, ದೇಶದಲ್ಲಿ ನೆಹರೂ ಕುಟುಂಬದವರ ಹೆಸರನ್ನು ಸುಮಾರು 400ಕ್ಕೂ ಹೆಚ್ಚು ಸ್ಮಾರಕಗಳಿಗೆ, ರಸ್ತೆಗಳಿಗೆ, ಕಟ್ಟಡಗಳಿಗೆ, ಸೇತುವೆ, ಸ್ಟೇಡಿಯಂ ಮತ್ತು ಸಂಸ್ಥೆಗಳಿಗೆ ಇರಿಸಲಾಗಿದೆ ಎಂದು ದಶಕಗಳ ಕಾಲ ಮುಗಿಲೆತ್ತರಕ್ಕೆ ಆರೋಪಿಸಿ ಟೀಕಿಸಿದವರೇ ಈ ಬದಲಾವಣೆಯ ಹಿಂದೆ ಇರುವುದು. ಈ ಮೊದಲು ದೇಶದ ಪ್ರತಿಯೊಂದು ನಗರ, ಪಟ್ಟಣಗಳಲ್ಲಿ ಮಹಾತ್ಮ ಗಾಂಧಿ ಹೆಸರಿನ ರಸ್ತೆ ಇರುತ್ತಿತ್ತು. ಈಗ ಸಾವರ್ಕರ್, ಭಗತ್ ಸಿಂಗ್ ಹೆಸರುಗಳು ಮಿನುಗುತ್ತವೆ.

ರಮಾನಂದ ಶರ್ಮಾ, ಬೆಂಗಳೂರು

ಘೋಲ್ ಮೀನು: ಸಂತತಿ ವೃದ್ಧಿಗೆ ಸಿಗಲಿ ಆದ್ಯತೆ

ಮಹಾರಾಷ್ಟ್ರ– ಗುಜರಾತ್ ಕರಾವಳಿಯ ಸಮೀಪ ಮೀನುಗಾರರೊಬ್ಬರಿಗೆ ಸಿಕ್ಕ ಘೋಲ್ ಮೀನುಗಳು ಕೋಟಿ ರೂಪಾಯಿ ಆದಾಯ ತಂದುಕೊಟ್ಟಿವೆ (ಪ್ರ.ವಾ., ಸೆ. 2). ಶಸ್ತ್ರಚಿಕಿತ್ಸೆಯ ಬಳಿಕ ಹಾಕುವ ಹೊಲಿಗೆಯ ದಾರವನ್ನು ಈ ಮೀನಿನಿಂದ ತಯಾರಿಸುತ್ತಾರೆ. ಈ ದಾರದ ಹೊಲಿಗೆಯು ಕೆಲ ದಿನಗಳಲ್ಲಿ ಕರಗಿ ಹೋಗುವುದೆಂದರೆ ಎಷ್ಟೊಂದು ಸಂತೋಷದ ಸಂಗತಿಯಲ್ಲವೇ? ಇಂತಹ ವಿಶಿಷ್ಟ ಗುಣ ಹೊಂದಿರುವ ಅದ್ಭುತ ಜಾತಿಯ ಮೀನಿನ ಸಂತತಿ ವೃದ್ಧಿಗೆ ಅನುಕೂಲ ಕಲ್ಪಿಸಿ ಅಭಿವೃದ್ಧಿಪಡಿಸಿದರೆ ರುಚಿಕರವಾದ ಖಾದ್ಯಕ್ಕೆ ಮಾತ್ರವಲ್ಲದೆ ವೈದ್ಯಲೋಕಕ್ಕೂ ಹೆಚ್ಚಿನ ಪ್ರಯೋಜನವಾಗುತ್ತದೆ.

ಹನುಮಂತಪ್ಪ ಬಿ. ದಾಸರ, ತರಲಕಟ್ಟಿ, ಕೊಪ್ಪಳ

ಪದ ಬಳಕೆ: ಭಾಷೆಯ ಬಲವರ್ಧನೆಗೆ ನೆರವಾಗಲಿ

ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವಲ್ಲಿ ಅದರ ಬಳಕೆಯ ಸಂಗತಿಗಳು ಸಹ ನಿರ್ಧಾರಕ ಅಂಶಗಳಾಗಿರುತ್ತವೆ. ಸರ್ಕಾರಿ ಕಚೇರಿ, ಕಟ್ಟಡ, ಆಡಳಿತಾತ್ಮಕ ಸಂಸ್ಥೆಗಳ ಹೆಸರಿನಲ್ಲಿ ಅನೇಕ ಇಂಗ್ಲಿಷ್ ಹಾಗೂ ಅನ್ಯದೇಶಿ ಪದಗಳು ಬಳಕೆಯಾಗುತ್ತಾ ಬಂದಿರುವುದು ಸಾಮಾನ್ಯ ಎಂಬಂತಾಗಿದೆ. ಕನ್ನಡ ಭಾಷೆ ಬೆಳವಣಿಗೆಯ ದೃಷ್ಟಿಯಿಂದ ಇಂತಹ ನಡೆ ಸೂಕ್ತ ಎನಿಸುವುದಿಲ್ಲ. ಮಿನಿ ವಿಧಾನಸೌಧದ ಹೆಸರಿನಲ್ಲಿ 'ಮಿನಿ' ಎಂಬ ಇಂಗ್ಲಿಷ್ ಪದಕ್ಕೆ ಸಾಹಿತ್ಯ ವಲಯದಿಂದ ಆಕ್ಷೇಪ ವ್ಯಕ್ತವಾಗಿರುವ ಪ್ರಯುಕ್ತ ಈ ಬಗ್ಗೆ ಸರ್ಕಾರ ಶೀಘ್ರದಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳುತ್ತದೆ ಎಂದು ಕಂದಾಯ ಸಚಿವರು ಹೇಳಿರುವುದು ಸ್ವಾಗತಾರ್ಹ ನಡೆ. ಬಹುಜನರಿಗೆ ಒಪ್ಪಿಗೆಯಾಗುವಂತಹ ಕನ್ನಡದ ಹೆಸರನ್ನು ಇಟ್ಟು ನೆಲದ ಭಾಷೆಯ ಬಲವರ್ಧನೆಗೆ ನೆರವಾಗಬೇಕಿದೆ.

ಆದಪ್ಪ ಮಲ್ಲಪ್ಪ ಗೊರಚಿಕ್ಕನವರ, ಕೂಡಲಸಂಗಮ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8009. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಹಿಳೆಯರ ಸುರಕ್ಷತೆ ಸ್ವಯಂ ನಿಯಂತ್ರಣ ಅಗತ್ಯವೇ?

ಹೆಣ್ಣು ಅಧೀನಲಿಂಗಿ ಎಂಬ ವಿಕೃತ ಮನಸ್ಥಿತಿ





ಅತ್ಯಾಚಾರ ನಡೆದಾಗ ಅದರಲ್ಲಿ ಅತ್ಯಾಚಾರಿಯ ದುಷ್ಕೃತ್ಯವನ್ನು ಖಂಡಿಸುವುದಕ್ಕಿಂತಲೂ ಹೆಚ್ಚಾಗಿ, 'ಹಾಗೆ ನಡೆಯದಿರುವಂತೆ ತಡೆಯಬೇಕಾಗಿದ್ದುದು ಸಂತ್ರಸ್ತೆಯ ಜವಾಬ್ದಾರಿಯಾಗಿತ್ತು; ಅದರಲ್ಲಿ ಆಕೆ ಸೋತದ್ದರಿಂದಲೇ ಅತ್ಯಾಚಾರ ನಡೆಯಿತು, ಆಕೆಯ 'ಆ' ತಪ್ಪು ಸಹಜವಾಗಿಯೇ ಅತ್ಯಾಚಾರಕ್ಕೆ ಆಹ್ವಾನ' ಎಂಬಂತೆ ವ್ಯಾಖ್ಯಾನಿಸಲಾಗುತ್ತದೆ

ಪ್ರಜಾವಾಣಿ ಚರ್ಚೆ

• ಸಂಜ್ಯೋತಿ ವಿ.ಕೆ.

ಅತ್ಯಾಚಾರಕ್ಕೆ ಕಾರಣವನ್ನು ಸಂತ್ರಸ್ತೆಯಲ್ಲಲ್ಲ, ಅತ್ಯಾಚಾರಿಯಲ್ಲಿ ಮತ್ತು ನಮ್ಮೊಳಗೆ ಹುಡುಕಬೇಕಿದೆ!

ಅಂದು ಆಕೆ ಅಲ್ಲಿಗೆ ಹೋದದ್ದಾಗಲೀ, ಸಂಜೆ 7.30ರ ಹೊತ್ತಲ್ಲಿ ಹೋದದ್ದಾಗಲೀ ಅಥವಾ ತನ್ನ ಗೆಳೆಯನೊಟ್ಟಿಗೆ ಹೋದದ್ದಾಗಲೀ ಇದಾವುದೂ ಕ್ರಿಮಿನಲ್ ಅಪರಾಧಗಳಲ್ಲ. ಆದರೆ, ಅತ್ಯಾಚಾರ ಖಂಡಿತವಾಗಿಯೂ ಅತಿಹೀನವಾದ ಕ್ರಿಮಿನಲ್ ಅಪರಾಧ. ಇಂಥದ್ದೊಂದು ಅಪರಾಧ ನಡೆದಾಗ, ಕಾನೂನು ಸುವ್ಯವಸ್ಥೆ ಕಾಪಾಡುವ ಅತ್ಯುನ್ನತ ಹುದ್ದೆಯಲ್ಲಿರುವ ಗೃಹ ಸಚಿವರೊಬ್ಬರ ಮೊದಲ ಕರ್ತವ್ಯ ಅದನ್ನು ಅತ್ಯಂತ ಸ್ಪಷ್ಟ ಮಾತುಗಳಲ್ಲಿ ಖಂಡಿಸುವುದು ಮತ್ತು ಅಪರಾಧಿಗಳನ್ನು ಶೀಘ್ರವಾಗಿ ಬಂಧಿಸಿ, ನ್ಯಾಯಾಂಗ ಪ್ರಕ್ರಿಯೆಗೆ ಒಳಪಡಿಸಿ, ಸಂತ್ರಸ್ತೆಗೆ ತ್ವರಿತವಾಗಿ ನ್ಯಾಯ ಒದಗಿಸುವ ವ್ಯವಸ್ಥೆ ಮಾಡುವುದು. ಬದಲಿಗೆ ಅವರು 'ಆಕೆ ಅಷ್ಟು ಹೊತ್ತಲ್ಲಿ ಅಲ್ಲಿಗೆ ಹೋಗಿದ್ದು ತಪ್ಪು' ಎನ್ನುವಂಥ ಹೇಳಿಕೆ ನೀಡಿದ್ದಾರೆ. ಇದು 'ಹೆಣ್ಣು ತನ್ನ ಮಿತಿಯಲ್ಲಿರಬೇಕು, ಅದನ್ನು ಮೀರಿದರೆ ಇಂತಹ ಅನಾಹುತಗಳು ನಡೆಯುವುದು ಸಹಜ' ಎಂಬ ಅರ್ಥ ಹೊರಡಿಸುತ್ತದೆ.

ಕನಿಷ್ಠ ಪ್ರಜ್ಞೆಯೂ ಇಲ್ಲದ ಇಂತಹ ಹೇಳಿಕೆ ನೀಡುವುದು ಅಜ್ಞಾನ ಮಾತ್ರವಲ್ಲ, ಬದಲಿಗೆ ಇಡೀ ನ್ಯಾಯದಾನ ವ್ಯವಸ್ಥೆಗೆ, ನಾವು ಒಪ್ಪಿ ಅನುಷ್ಠಾನಗೊಳಿಸಿರುವ ಸಂವಿಧಾನಕ್ಕೆ, ಮನುಷ್ಯರು ಕಟ್ಟಿಕೊಂಡಿರುವ ನಾಗರಿಕ ವ್ಯವಸ್ಥೆಯೆಂಬ ಕಲ್ಪನೆಗೇ ಮಾಡುವ ಅಪಚಾರ. ಹಾಗಿದ್ದಾಗ ಇದಕ್ಕೆ ಅತಿ ದೊಡ್ಡ ಮಟ್ಟದ ಪ್ರತಿರೋಧ ಬರಬೇಕಿತ್ತು, ಗೃಹಮಂತ್ರಿಗಳು ರಾಜೀನಾಮೆ ಕೊಡಬೇಕಿತ್ತು ಮತ್ತು ಅವರು ಪ್ರತಿನಿಧಿಸುವ ಪಕ್ಷವೂ ಜನತೆಯ ಕ್ಷಮೆ ಯಾಚಿಸಬೇಕಿತ್ತು. ಆದರೆ ಅಂಥದ್ದೇನೂ ಆಗಲಿಲ್ಲ.

ಇದೇ ಚಾಳಿಯ ಮುಂದುವರಿಕೆಯಾಗಿ, ನಮ್ಮನ್ನು ಹೆಚ್ಚು ಮಾನವೀಯಗೊಳಿಸಬೇಕಾದ, ಸಮಾನತೆಯನ್ನು ಕಲಿಸಬೇಕಾದ ವಿದ್ಯೆಯನ್ನು ನೀಡುವ ಹೊಣೆಹೊತ್ತ ವಿಶ್ವವಿದ್ಯಾಲಯವೊಂದು ಸಂಜೆ ಆರೂವರೆಯ ನಂತರ ಕ್ಯಾಂಪಸ್ಸಿನಲ್ಲಿ ವಿದ್ಯಾರ್ಥಿನಿಯರ ಓಡಾಟವನ್ನು ನಿರ್ಬಂಧಿಸಿ ಸುತ್ತೋಲೆ ಹೊರಡಿಸುತ್ತದೆ! (ವ್ಯಾಪಕ ಖಂಡನೆಯ ನಂತರ ಅದನ್ನು ಹಿಂಪಡೆಯಲಾಯ್ತು) ವಿದ್ಯಾರ್ಥಿನಿಯರ ಸಹಜ ಓಡಾಟದ ಹಕ್ಕುಗಳ ಮಾತು ಆಮೇಲಾಗಲಿ, ಇಂತಹ ನಿರ್ಬಂಧಗಳಿಂದ ಅವರು ಗ್ರಂಥಾಲಯ ಬಳಸುವುದಕ್ಕೆ, ಓದಿನ ಸಂಬಂಧಿತ ಇತರ ಚಟುವಟಿಕೆಗಳಿಗೆ ಆಗುವ ತೊಂದರೆಯನ್ನು ಸಹಿಸಿಕೊಳ್ಳಬೇಕು.

ಏಕೆಂದರೆ ಅವರ ಸುರಕ್ಷತೆಯ ಹೊಣೆ ಅವರದೇ! ಅತ್ಯಾಚಾರವು ಸಂಜೆ ಏಳೂವರೆಗೆ ನಡೆದಿದ್ದರಿಂದ ನಿರ್ಬಂಧದ ಸಮಯ ಆರೂವರೆ ಎಂದಾಯ್ತು. ಮತ್ತೊಂದು ಅತ್ಯಾಚಾರ ಮಧ್ಯಾಹ್ನವೋ ಅಥವಾ ಬೆಳಿಗ್ಗೆಯೋ ನಡೆದರೆ ಇವರು ತೆಗೆದುಕೊಳ್ಳುವ ಸುರಕ್ಷತಾ ಕ್ರಮಗಳೇನು? ಗೃಹಮಂತ್ರಿಗಳು ಆಗ 'ಹೆಣ್ಣುಮಕ್ಕಳು ಹೊರಗೇಕೆ ಓಡಾಡಬೇಕು' ಎನ್ನುವರೇನು?

ಅತ್ಯಾಚಾರಿಗಳನ್ನು, ಅಪರಾಧಿಗಳನ್ನು ತಡೆಯಲು ನಮ್ಮಿಂದ ಸಾಧ್ಯವಿಲ್ಲ, ಹಾಗಾಗಿ ನೀವು ನಿಮ್ಮ ವಿದ್ಯೆ ಕಲಿಯುವ ಹಕ್ಕು, ಎಲ್ಲ ಮನುಷ್ಯರಂತೆ ಬದುಕುವ ಹಕ್ಕನ್ನು ಮರೆತು ಗೂಡೊಳಗೆ ಸೇರಿಕೊಂಡು ನಿಮ್ಮನ್ನು ನೀವು ರಕ್ಷಿಸಿಕೊಳ್ಳಿ ಎನ್ನುತ್ತಿದ್ದಾರೆಯೇ? ಮೊದಲಿಗೆ ನಾವು ಸಂವಿಧಾನ, ಸರ್ಕಾರ ಇಂತಹ ಒಂದು ವ್ಯವಸ್ಥೆಯನ್ನು ರೂಪಿಸಿಕೊಂಡಿರುವುದರ ಮೂಲ ಉದ್ದೇಶವಾದರೂ ಏನು? ಬಲವಿದ್ದವರು ಕೊಂದು ತಿನ್ನುವ, ಇಲ್ಲದವರು ಅಸಹಾಯಕರಾಗಿ ಕೊಲ್ಲಲ್ಪಡುವ ವ್ಯವಸ್ಥೆಗೆ ಬದಲಾಗಿ ಎಲ್ಲರೂ ಸಮಾನವಾಗಿ ಬದುಕುವ ಅವಕಾಶ ರೂಪಿಸಿಕೊಂಡು, ಎಲ್ಲರ ಸುರಕ್ಷತೆಯ ಹೊಣೆಯನ್ನು ವ್ಯವಸ್ಥೆಗೆ ಒಪ್ಪಿಸಿ, ಅದನ್ನು ಸುಗಮವಾಗಿ ನಡೆಸಿಕೊಂಡು ಹೋಗುವ ಸಲುವಾಗಿಯೇ ಸರ್ಕಾರಕ್ಕೆ ತೆರಿಗೆ ಪಾವತಿಸಿ, ಸಂವಿಧಾನ ವಿಧಿಸಿದ ಕರ್ತವ್ಯಗಳನ್ನು ಪಾಲಿಸಿಕೊಂಡು ಹೋಗುತ್ತಿರುವುದು. ಸಂವಿಧಾನ ಎಲ್ಲ ಪ್ರಜೆಗಳಿಗೂ ಸಮಾನವಾಗಿ ನೀಡಿರುವ ಹಕ್ಕುಗಳನ್ನು ಅನುಭವಿಸದಂತೆ, ಸಂವಿಧಾನಕ್ಕೂ ಮೀರಿದ ಸಾಮಾಜಿಕ ನೈತಿಕ (?) ಮಿತಿಗಳನ್ನು ಹೆಣ್ಣಿನ ಮೇಲೆ ಮಾತ್ರ ಹೇರಿ, ಅವರನ್ನು ಹೀಗೆ ಮಿತಿಗೊಳಿಸುವ ಅಧಿಕಾರ ಇವರಿಗೆ ಕೊಟ್ಟವರು ಯಾರು? ಹಾಗಾದರೆ ಮಹಿಳೆಯರು ಈ ದೇಶದಲ್ಲಿ ಎರಡನೇ ದರ್ಜೆಯ ಪ್ರಜೆಗಳೇನು?

ಗೃಹಮಂತ್ರಿಗಳು ನನ್ನ ಹೇಳಿಕೆಗೆ 'ಸಂತ್ರಸ್ತೆ ತಮ್ಮ ಮಗಳ ಸಮಾನ, ಕಾಳಜಿಯಿಂದಲೇ ಆ ಮಾತನ್ನು ಹೇಳಿದೆ' ಎಂಬ ಸಮಜಾಯಿಷಿಯನ್ನೂ ನೀಡಿದ್ದಾರೆ. ಒಬ್ಬ ಗೃಹಮಂತ್ರಿಯಾಗಿ ತಮ್ಮ ಕೆಲಸವನ್ನು ಸರಿಯಾಗಿ ಮಾಡುವುದೇ ಆಕೆಗೆ ಮತ್ತು ರಾಜ್ಯದ ಎಲ್ಲ ಪ್ರಜೆಗಳಿಗೆ ತೋರಬಹುದಾದ ಅತಿ ದೊಡ್ಡ ಕಾಳಜಿಯಾಗಿದೆ ಮತ್ತು ಅದು ಅವರು ಸಾಂವಿಧಾನಿಕವಾಗಿ ಮಾಡಬೇಕಾದ ಕನಿಷ್ಠ ಕರ್ತವ್ಯವಾಗಿದೆ. ಕಾಳಜಿಯೆಂದು ಕರೆಯುತ್ತಿರುವ ಅವರ ಹೇಳಿಕೆಯು ಆಕೆಗೂ, ಜನತೆಗೂ ಮತ್ತು ಸಂವಿಧಾನಕ್ಕೂ ಬಗೆಯುವ ದ್ರೋಹವಾಗಿದೆ.

ಅತ್ಯಂತ ವಿಷಾದದ ಸಂಗತಿಯೆಂದರೆ, ಗೃಹಮಂತ್ರಿಗಳ ಹೇಳಿಕೆಗೆ ವ್ಯಕ್ತವಾದ ಖಂಡನೆಯ ಜೊತೆಗೇ ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಅದನ್ನು ಪುಷ್ಟೀಕರಿಸುವ ಮಾತುಗಳು ಸಹ ಬಂದವು. ಅತ್ಯಾಚಾರ ನಡೆದಾಗ ಅದರಲ್ಲಿ ಅತ್ಯಾಚಾರಿಯ ದುಷ್ಕೃತ್ಯವನ್ನು ಖಂಡಿಸುವುದಕ್ಕಿಂತಲೂ ಹೆಚ್ಚಾಗಿ, 'ಹಾಗೆ ನಡೆಯದಿರುವಂತೆ ತಡೆಯಬೇಕಾಗಿದ್ದುದು ಸಂತ್ರಸ್ತೆಯ ಜವಾಬ್ದಾರಿಯಾಗಿತ್ತು; ಅದರಲ್ಲಿ ಆಕೆ ಸೋತದ್ದರಿಂದಲೇ ಅತ್ಯಾಚಾರ ನಡೆಯಿತು, ಆಕೆಯ 'ಆ' ತಪ್ಪು ಸಹಜವಾಗಿಯೇ ಅತ್ಯಾಚಾರಕ್ಕೆ ಆಹ್ವಾನ' ಎಂಬಂತೆ ವ್ಯಾಖ್ಯಾನಿಸಲಾಗುತ್ತದೆ. 'ಆ' ತಪ್ಪಿನ ಪಟ್ಟಿ ಕೊನೆಯಿಲ್ಲದಷ್ಟು ಉದ್ದವಿದೆ; ತೊಡುವ ಬಟ್ಟೆಯ ಉದ್ದ, ಮುಕ್ತ ನಗು, ಸಮಾನತೆಗಾಗಿನ ತುಡಿತ, ಓದುವ ಹಂಬಲ, ಸಂಗಾತಿಯ ಆಯ್ಕೆ ಹೀಗೆ ಯಾವುದು ಬೇಕಾದರೂ ಪುರುಷಾಧಿಪತ್ಯದ ಮನಸನ್ನು ಅತ್ಯಾಚಾರಕ್ಕೆ ಪ್ರೇರೇಪಿಸಬಹುದು ಮತ್ತು ಅದು ಸಹಜ ಎಂದು ನಮಗೆ ನಿರಂತರವಾಗಿ ಹೇಳಿಕೊಡಲಾಗುತ್ತದೆ!

ಅತ್ಯಾಚಾರವೆಂಬುದು ಕ್ಷಣಿಕವಾಗಿ ನಡೆದುಬಿಡುವ ಅಚಾತುರ್ಯವಲ್ಲ, ಅದು ಹಂತಹಂತವಾಗಿ ಬೆಳೆಯುವ, ಬೆಳೆಸಲ್ಪಡುವ ಮನಸ್ಥಿತಿ. ಹೆಣ್ಣನ್ನು ಅಧೀನಲಿಂಗಿಯಾಗಿ ನೋಡುವ ಪಾಠ ಮನೆಯಂಗಳದಿಂದಲೇ ಆರಂಭವಾಗಿ, ನೆರೆಹೊರೆಯಲ್ಲಿ, ಶಾಲಾ ಪಠ್ಯಗಳಲ್ಲಿ, ಸಿನಿಮಾ- ಧಾರಾವಾಹಿಗಳಲ್ಲಿ, ಆರಾಧಿಸುವ ಹೀರೋಗಳ ನಡೆನುಡಿಯಲ್ಲಿ, ಮಾಧ್ಯಮಗಳಲ್ಲಿ, ರಾಜಕಾರಣಿಗಳ ಹೇಳಿಕೆಗಳಲ್ಲಿ ಕೊನೆಗೆ ಕೋರ್ಟುಗಳಲ್ಲಿ ಅತ್ಯಾಚಾರಿಯನ್ನೇ ಮದುವೆಯಾಗುವ ಪ್ರಸ್ತಾಪವಿಡುವ ನ್ಯಾಯಾಧೀಶರುಗಳವರೆಗೆ ಎಲ್ಲೆಲ್ಲೂ ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಹೆಣ್ಣು ತಗ್ಗಿ-ಬಗ್ಗಿ ನಡೆಯಬೇಕು, ಹೆಚ್ಚು ಮಾತಾಡಬಾರದು, ಜೋರಾಗಿ ನಗಬಾರದು, ಎಲ್ಲೆಂದರಲ್ಲಿ ಓಡಾಡಬಾರದು, ಜೀನ್ಸ್ ತೊಡಬಾರದು, ಮೈತುಂಬ ಬಟ್ಟೆ ಹಾಕಬೇಕು, (ಎಷ್ಟು ತುಂಬ?) ಚೂಡಿದಾರದ ಮೇಲೆ ದುಪಟ್ಟಾ ಹೊದ್ದಿರಬೇಕು ಎಂದೆಲ್ಲಾ ಹೇಳುವವರು; ಹಾಗೂ ಅದೇ ಚೂಡಿದಾರನ್ನು ಒಬ್ಬ ಟೀಚರ್ ತೊಟ್ಟರೆ ಅದು ವಿದ್ಯಾರ್ಥಿಗಳಿಗೆ ಪ್ರಚೋದಕವೆನಿಸಬಹುದು ಎಂದು ಸುತ್ತೋಲೆ ಹೊರಡಿಸುವವರು ಇವರೆಲ್ಲರ ಪಾಲೂ ಇದೆ, ಈ ಅತ್ಯಾಚಾರಗಳಲ್ಲಿ.

ಹೀಗೆ ಸಂತ್ರಸ್ತೆಯಾದ ಹೆಣ್ಣನ್ನೇ ದೂಷಿಸುವ ಮನಸ್ಥಿತಿಯನ್ನು ಪಕ್ಷಾತೀತವಾಗಿ ಅನೇಕರು ಮೊದಲೂ ತೋರಿದ್ದಾರೆ. ಅವರೆಲ್ಲರೂ ಖಂಡನಾರ್ಹರೇ. ಆದರೆ ಬಿಜೆಪಿ ರಾಜಕೀಯ ಪಕ್ಷವಾಗಿ ಸ್ತ್ರೀ ಅಧೀನತೆಯನ್ನು ಅಧಿಕೃತವಾಗಿ ತನ್ನ ಸಿದ್ಧಾಂತವಾಗಿ ಪ್ರತಿಪಾದಿಸುವುದರಿಂದ ಅದು ಹೆಚ್ಚು ಅಪಾಯಕಾರಿ. ಸ್ತ್ರೀಯರಿಗೆ ಸಮಾನತೆಯ ಹಕ್ಕುಗಳನ್ನು ನೀಡುವ ಸಂವಿಧಾನಕ್ಕಿಂತ ಮಿಗಿಲಾಗಿ ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರೇ ಅಲ್ಲವೆನ್ನುವ ಮನುಧರ್ಮಶಾಸ್ತ್ರಕ್ಕೆ ತಮ್ಮ ನಿಷ್ಠೆ ಎಂದು ಹಲವಾರು ಬಾರಿ ಅಧಿಕೃತ ಹೇಳಿಕೆಗಳನ್ನೇ ನೀಡಿದ್ದಾರೆ. ಸಮಯ ಸರಿದಂತೆ ಧರ್ಮ, ಜಾತಿ, ಚರ್ಮದ ಬಣ್ಣ, ಲಿಂಗ ತರತಮಗಳೆಲ್ಲ ಕಳೆದು ಮನುಷ್ಯರೆಲ್ಲರೂ ಹೆಚ್ಚು ಸಮಾನರಾಗುವತ್ತ, ಹೆಚ್ಚು ಮಾನವೀಯವಾಗುವತ್ತ ಸಾಗಬೇಕಿತ್ತು. ಆದರೆ ನಮ್ಮನ್ನು ಆಳುವವರ ವಿಕೃತ ಮನಸ್ಥಿತಿಗಳು, ಅಧಿಕಾರ ಲಾಲಸೆಗಳು ಸಮಾಜವಾಗಿ ನಮ್ಮನ್ನು ಹಿಮ್ಮುಖವಾಗಿ ದೂಡುತ್ತ ಪ್ರಪಾತಕ್ಕೆ ತಳ್ಳಲು ಹೊರಟಿವೆ. ನಾವು ಎಚ್ಚೆತ್ತುಕೊಂಡು ದನಿ ಎತ್ತಲೇ ಬೇಕಿದೆ.

ಲೇಖಕಿ: ನಟಿ, ನಿರ್ದೇಶಕಿ

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ಸಂಬಂಧಕ್ಕೆ ನಂಬಿಕೆಯೇ ಬೇರು

ಕಾಲ ಕಳೆದಂತೆ ಸಂಬಂಧಗಳ ಮೌಲ್ಯ ಕಡಿಮೆಯಾಗುತ್ತಿದೆ. ಸಂಬಂಧಗಳ ಸಡಿಲಿಕೆಯಿಂದ ಮನೆ-ಮನಗಳಲ್ಲಿ ಕ್ಷೋಭೆ ಆವರಿಸುತ್ತಿದೆ. ಹಿಂದೆಲ್ಲಾ ಸಂಬಂಧಗಳಿಗೆ ಬೆಲೆ ಕೊಡದವರು ಮನುಷ್ಯರೇ ಅಲ್ಲ ಅನ್ನುವ ಮಾತು ಕೇಳಿ ಬರುತ್ತಿತ್ತು. ಆದರೆ ಇಂದು ಸಂಬಂಧಗಳಿಗೆ ಬೆಲೆ ಕೊಡುವುದಿರಲಿ, ಅವುಗಳಿಗೆ ಬೆಲೆಯೇ ಇಲ್ಲದಂಥ ದುಃಸ್ಥಿತಿ ನಿರ್ಮಾಣವಾಗುತ್ತಿದೆ. ಕೊಟ್ಟು-ತೆಗೆದುಕೊಳ್ಳುವ ವ್ಯಾಪಾರ-ವ್ಯವಹಾರಕ್ಕಷ್ಟೆ ಮಾನವೀಯ ಸಂಬಂಧಗಳು ಸೀಮಿತವಾಗುತ್ತಿರುವುದು ಆತಂಕಕಾರಿ ವಿಷಯ. ಮನುಷ್ಯ ಸಂಬಂಧಗಳು ಎಲ್ಲ ಮೌಲ್ಯಕ್ಕಿಂತ ಮಿಗಿಲಾದುದು. ನಮ್ಮ ದೇವರುಗಳ ನಡುವೆ ಕೂಡ ಸಂಬಂಧಗಳ ಸೇತುಬಂಧವಿದೆ. ಮನುಷ್ಯರು ಸಹ ದೇವರಂತೆ ಬದುಕು ರೂಪಿಸಿಕೊಳ್ಳ-ಬೇಕೆಂಬ ಸದಾಶಯದಿಂದ ಶಿವ-ಪಾರ್ವತಿ, ಲಕ್ಷ್ಮಿ-ವಿಷ್ಣು, ಬ್ರಹ್ಮ-ಸರಸ್ವತಿ ಸಹಿತ ಎಲ್ಲಾ ದೇವಾನುದೇವತೆಗಳ ಸಂಸಾರ ಚಿತ್ರಣಗಳನ್ನು ಪುರಾಣಗಳಲ್ಲಿ ಕಟ್ಟಿಕೊಡಲಾಗಿದೆ.

ಆದರೆ ದೇವರುಗಳಂತೆ ಮನುಷ್ಯರು ಬದುಕುವುದನ್ನು ಬಿಟ್ಟು, ದೆವ್ವಗಳಂತೆ ದುರಾಚಾರ ರೂಢಿಸಿಕೊಂಡ ಪರಿಣಾಮವಾಗಿ ಸಂಸಾರಗಳು ಸಂಕೀರ್ಣ-ವಾಗುತ್ತಹೋದವು. ಸಂಬಂಧಗಳು ಶಿಥಿಲವಾಗಿ ಅಲ್ಲಿ ಅಪನಂಬಿಕೆಯ ಬಿಳಲುಗಳು ಬಿಟ್ಟುಕೊಂಡವು. ಹೆತ್ತವರ ಮರೆವ ಮಕ್ಕಳು, ಕ್ಷುಲ್ಲಕ ಕಾರಣಕ್ಕೆ ಮನೆ ಒಡೆವ ದುರಾತ್ಮರು, ಒಡಹುಟ್ಟಿದವರನ್ನೇ ಸಹಿಸದ ಜನರು, ಅನ್ಯೋನ್ಯತೆ ಅರಿಯದ ದಂಪತಿಗಳು ಹೆಚ್ಚಾದರು. ಹಿರಿಯರನ್ನು ನೋಡಿ ಕಲಿವ ಮಕ್ಕಳು ಸಹ, ಸಂಬಂಧಗಳಿಗೆ ತಿಲಾಂಜಲಿ ಇಡುತ್ತಹೋದರು. ಇದರಿಂದ ಬಹುತೇಕ ಮನೆಗಳಲ್ಲಿ ಮಧುರವಾದ ಸಂಸಾರದ ಕಲರವಕ್ಕಿಂತ, ಕರ್ಕಶ ಕಲಹಗಳ ಸದ್ದೇ ಕೇಳಿ ಬರುತ್ತಿದೆ. ಜಗತ್ತಿನಲ್ಲಿ ರಕ್ತಸಂಬಂಧಕ್ಕಿಂತ ಸ್ನೇಹಸಂಬಂಧ ಗಟ್ಟಿಯಾಗಿ-ರುತ್ತಿತ್ತು. ಈಗ ಸ್ನೇಹಸಂಬಂಧಗಳಲ್ಲೂ ಬಿರುಕು ಮೂಡುತ್ತಿವೆ.

ಯಾವುದೇ ಸಂಬಂಧ ಉತ್ತಮವಾಗಿ ಬೆಳೆಯಲು ನಂಬಿಕೆಯ ಬೇರು ಗಟ್ಟಿಯಾಗಿರಬೇಕು. ಆ ನಂಬಿಕೆಯ ಬೇರಿಗೆ ಧಕ್ಕೆಯಾದರೆ, ಸಂಬಂಧಗಳು ಚಿಗುರೊಡೆಯದೆ ಒಣಗುತ್ತವೆ. ನಂಬಿಕೆ ಇಲ್ಲದೆ ಮನುಷ್ಯ ಒಂದು ಹೆಜ್ಜೆ ಕೂಡ ಮುಂದಿಡಲಾರ. ಸುರಕ್ಷಿತವಾಗಿ ಚಾಲನೆ ಮಾಡುತ್ತೇನೆ ಎಂಬ ನಂಬಿಕೆಯಿಂದಲೇ ವಾಹನ ಚಲಾಯಿಸುತ್ತೇವೆ. ಅಪಘಾತವಾಗುತ್ತೆ ಅಂತ ಅಪನಂಬಿಕೆ ಇದ್ದರೆ ರಸ್ತೆಗೆ ಇಳಿಯುವುದೇ ಇಲ್ಲ. ದೇವರನ್ನು ನಂಬಿದರೆ ಒಳ್ಳೆಯದು ಆಗುತ್ತೋ, ಇಲ್ಲವೋ? ಆದರೆ ಕೆಟ್ಟದ್ದಂತೂ ಆಗುವುದಿಲ್ಲ ಎಂಬ ನಂಬಿಕೆಯಿಂದಲೇ ದೇವರನ್ನು ಪೂಜಿಸುತ್ತೇವೆ. ಒಳ್ಳೆಯದಾಗುತ್ತೆ ಅನ್ನೋ ನಂಬಿಕೆಯಿಂದಲೇ ದೇವರ ಮೇಲೆ ನಮ್ಮೆಲ್ಲಾ ಕಷ್ಟಗಳ ಭಾರ ಹಾಕಿ ನಾವು ನೆಮ್ಮದಿಯಾಗಿರುತ್ತೇವೆ. ಇಲ್ಲಿ ನಂಬಿಕೆ ಅನ್ನೋದೇ ದೇವರು. ನಂಬಿಕೆಯ ದೇವರನ್ನು ಸಂಬಂಧಗಳಲ್ಲಿ ಕಾಣದ ಮನುಷ್ಯರ ಬದುಕು ಜರ್ಜರಿತವಾಗುತ್ತಿದೆ.

ಸಂಬಂಧಗಳಲ್ಲಿ ನಂಬಿಕೆ ಕಾಣೆಯಾಗುವುದರ ಹಿಂದೆ ಮನುಷ್ಯರ ಕುತ್ಸಿತ ಬುದ್ಧಿಯ ಕೈವಾಡವಿದೆ. 'ತಾನು ನಂಬುವುದಿಲ್ಲ, ಪರರನ್ನು ನಂಬುವುದಿಲ್ಲ' ಎಂಬ ನಾಣ್ಣುಡಿಯಂತೆ, ಪರಸ್ಪರ ಅಪನಂಬಿಕೆಗಳಲ್ಲೇ ಮನಸ್ಸನ್ನು ಕೆಡಿಸಿಕೊಂಡಿರುವ ಮನುಷ್ಯರಿಂದ ವಿಶ್ವಾಸದ ವಾತಾವರಣ ನಿರ್ಮಾಣವಾ-ಗುತ್ತಿಲ್ಲ. ಅನುಮಾನ-ಅಪನಂಬಿಕೆಗಳನ್ನ ವಿಜ್ಞಾನ ಮಾನಸಿಕ ರೋಗ ಎನ್ನುತ್ತೆ. ಹಾಗೇ, ವಿಕಾರ ಮನಸ್ಸಿನವರನ್ನ ಧರ್ಮಗಳು ಪಾಪಾತ್ಮರೆಂದು ಪರಿಗಣಿಸುತ್ತೆ. ನಂಬಿಕೆಯ ಚೌಕಟ್ಟಿನಲ್ಲಿ ಮಾನವಸೌಧ ಕಟ್ಟುವ ಸಮಾಜ ಸುಧಾರಕರ ಪ್ರಯತ್ನಕ್ಕೆ ಅಲ್ಪಬುದ್ಧಿಯ ಜನ ಅಡ್ಡಿಯಾಗಿದ್ದಾರೆ.

ದ್ವೇಷ-ಅಸೂಯೆ-ದುರಾಸೆಗಳಿಂದ ಬಳಲುವ ಜನರಲ್ಲೇ ಅಪನಂಬಿಕೆಗಳು ಹೆಚ್ಚು. ಇವರು ಹರಡುವ ಮಾನಸಿಕ ರೋಗಗಳು ಮನುಷ್ಯಸಂಬಂಧಗ-ಳನ್ನು ಹಾಳುಗೆಡವುತ್ತಿವೆ. ಅನುಮಾನಗಳು ಉರಿಬಾಣಗಳಾಗಿ ಮಾನವರ ಎದೆಗೂಡಲ್ಲಿ ದ್ವೇಷದ ಬೆಂಕಿ ಹೊತ್ತಿಸುತ್ತಿವೆ. ಅಂತಸ್ತು-ಪ್ರತಿಷ್ಠೆಗಳ ಮೇಲಾಟದಲ್ಲಿ ಸಂಬಂಧಗಳು ಜಾಳಾಗಿ ಸಿರಿವಂತಿಕೆಯ ಸೊಕ್ಕು ಮೇರೆ ಮೀರುತ್ತಿದೆ. ಇದರ ಮಧ್ಯೆ ಮುನಿಸಿನ ಸೋಗೇ ಮನುಷ್ಯಸಂಬಂಧಗಳಿಗೆ ಕಿಚ್ಚನ್ನು ಹಚ್ಚುತ್ತಿದೆ. ಸಂಸಾರವೆಂಬ ವೃಕ್ಷದ ನಂಬಿಕೆಯ ಬೇರಿಗೆ ವಿಶ್ವಾಸದ ನೀರು ಬೆರೆತಾಗ 'ಸಚ್ಚಿದಾನಂದ'ದ ಬದುಕು ಸಾಕಾರವಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಹೆಣ್ಣಿಗೂ ಗಂಡಿಗೂ ಬೇಕು ಸ್ವಯಂ ನಿಯಂತ್ರಣ



ಮಾಧ್ಯಮಗಳಲ್ಲಿ ಮೈಪ್ರದರ್ಶಿಸಿಕೊಂಡು ಕೂರುವುದು ಯುವತಿಯರಿಗೆ ಇಂದು ತೀರ ಸಾಧಾರಣವಾದ ವ್ಯವಹಾರವಾಗಿದೆ. ಇವರ ಅಂಗಾಂಗ ಪ್ರದರ್ಶನವನ್ನು ನಿತ್ಯವೂ ನೋಡುತ್ತಿರುವ ಧೂರ್ತ, ಕಾಮುಕ ಗಂಡಸರ ಮೇಲೆ ಈ ದೃಶ್ಯಗಳು ಯಾವ ಪರಿಣಾಮವನ್ನು ಬೀರಬಹುದು? ಯಾರೂ ಯೋಚಿಸುವುದಿಲ್ಲ

• ಡಾ. ಎಸ್.ಆರ್. ಲೀಲಾ

ಮಹಿಳೆಯರ ಸುರಕ್ಷತೆ: ಸ್ವಯಂ ನಿಯಂತ್ರಣ ಅಗತ್ಯವೆ?- ಇಂದಿನ ಸಂದರ್ಭದಲ್ಲಿ ಇಂಥ ಒಂದು ಪ್ರಶ್ನೆ ಹಾಕುವುದು ಸರಿಯೇ, ಈ ವಿಷಯದ ಚರ್ಚೆ ಸೂಕ್ತವೇ, ಸಾಧುವೇ? ಎಂಬುದೇ ನಿಜವಾದ ತೊಡಕು.

ಹಾಗಾದರೆ ಇಂದಿನ ಸಂದರ್ಭ ಏನು? ಇಂದು ಸಿನಿಮಾ, ಮಾಡೆಲಿಂಗ್, ಪತ್ರಿಕೆಗಳು, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಯುವತಿಯರು, ಹೆಂಗಸರು ದೇಹ ಪ್ರದರ್ಶನ ಮಾಡುವ ಹೀನಕಲೆಯಲ್ಲಿ ಒಬ್ಬರ ಮೇಲೊಬ್ಬರು ಪೈಪೋಟಿಗಿಳಿದಂತೆ ಕಾಣುತ್ತಿದ್ದಾರೆ. ಪಾಶ್ಚಾತ್ಯ ಹೆಣ್ಣುಗಳೂ ನಾಚುವಂತೆ ಅವರನ್ನು ಅನುಕರಣೆ ಮಾಡುತ್ತಿದ್ದಾರೆ. ಮಾಧ್ಯಮಗಳಲ್ಲಿ ಮೈಪ್ರದರ್ಶಿಸಿಕೊಂಡು ಕೂರುವುದು ಯುವತಿಯರಿಗೆ ಇಂದು ತೀರ ಸಾಧಾರಣವಾದ ವ್ಯವಹಾರವಾಗಿದೆ. ಇವರ ಅಂಗಾಂಗ ಪ್ರದರ್ಶನವನ್ನು ನಿತ್ಯವೂ ನೋಡುತ್ತಿರುವ ಧೂರ್ತ, ಕಾಮುಕ ಗಂಡಸರ ಮೇಲೆ ಈ ದೃಶ್ಯಗಳು ಯಾವ ಪರಿಣಾಮವನ್ನು ಬೀರಬಹುದು? ಯಾರೂ ಯೋಚಿಸುವುದಿಲ್ಲ. ತುಂಡು ಬಟ್ಟೆಯುಟ್ಟು ಕೋತಿಯಂತೆ ಹೇಗೆ ಬೇಕಾದರೂ ಕುಣಿದು ಕೋಟಿಕೋಟಿ ಬಾಚಿಕೊಳ್ಳುವ ಸಿನಿಮಾ ತಾರೆಯರಿಗೆ ಇಂದು ಯಾವ ನೀತಿ ನಿಯಮಗಳೂ ಇಲ್ಲ.

ಮನರಂಜನಾ ಉದ್ಯಮ ಅನ್ನೋ ಹೆಸರಿನಲ್ಲಿ ಕಾಮೋದ್ದೀಪನವೆಂಬ ಅನಿಷ್ಟ ದಂಧೆಯಲ್ಲಿ ಎಷ್ಟು ಜನ ಹೆಂಗಸರು ತೊಡಗಿಸಿಕೊಂಡಿದ್ದಾರೆ? ಈ ಆಟಕ್ಕೆ ಎಷ್ಟು ಜನ ಅಮಾಯಕರು ಬಲಿಯಾಗುತ್ತಿದ್ದಾರೆ? ಇಂದು ಗಂಡು-ಹೆಣ್ಣುಗಳಿಬ್ಬರಿಗೂ 'ಸೆಕ್ಸಿ' ಎಂದು ಅನ್ನಿಸಿಕೊಳ್ಳುವುದು ತುಂಬು ಅಭಿಮಾನದ, ಗೌರವದ ಸಂಕೇತವಾಗಿದೆ!

ಹಿಂದೆ ಹೇಗಿತ್ತು? ಹಿಂದೆ ಎಂದರೆ ಎಷ್ಟು ಹಿಂದೆ? ಐದು-ಆರು ದಶಕಗಳ ಹಿಂದೆ ಹೆಂಗಸರ ಮೈಮಾಟ ಪ್ರದರ್ಶನ ಇಂದಿನಷ್ಟು ಅಂಕೆಯಿಲ್ಲದ ದಂಧೆಯಾಗಿರಲಿಲ್ಲ. ಅಂದಿನ ಸಿನಿಮಾಗಳನ್ನು ನೋಡಿದರೆ ಇದು ತಿಳಿಯುತ್ತದೆ. ಇದಕ್ಕೂ ಒಂದು ಕಾರಣ ಇತ್ತು. ಸಾಮಾಜಿಕ ರೀತಿನೀತಿಗಳಲ್ಲಿ ದೇಶಕ್ಕೆ ಕೀರ್ತಿ ತಂದ ಮಹನೀಯರ ಮಾತುಗಳಿಗೆ, ಚರ್ಯೆಗೆ ಒಂದಿಷ್ಟು ಗೌರವ ಕೊಡುವ ಪರಿಪಾಟ ಇತ್ತು. ಇದಕ್ಕೆ ನಿದರ್ಶನವಾಗಿ, ಪಾಶ್ಚಾತ್ಯ ದೇಶಗಳಲ್ಲಿ ಭಾರತೀಯ ಸ್ತ್ರೀಯನ್ನು ಕುರಿತ ಟೀಕೆಗಳಿಗೆ, ಭಾರತೀಯ ಹೆಂಗಸರು ಅಡಿಯಿಂದ ಮುಡಿಯವರೆಗೆ ಮೈ ಮುಚ್ಚಿಕೊಂಡು ಮನೆಯಲ್ಲೆ ಬಿದ್ದಿರುವ ಮೂದೇವಿಗಳೆಂಬ ಆಕ್ಷೇಪಕ್ಕೆ, ನಿಂದನೆಗೆ ಸ್ವಾಮಿ ವಿವೇಕಾನಂದರು ಹೀಗೆ ಉತ್ತರಿಸಿದ್ದರು-The girls of India would die, if they like American girls were obliged to expose half their bodies to the vulgar gaze of young men (ಅಮೆರಿಕದ ಹೆಣ್ಣು ಮಕ್ಕಳ ಹಾಗೆ ತಮ್ಮ ಅರ್ಧ ದೇಹವನ್ನು ಯುವಕರ ಅಸಭ್ಯ ನೋಟಕ್ಕೆ ಒಡ್ಡಿಕೊಳ್ಳಬೇಕಾಗಿ ಬಂದರೆ, ಅದರ ಬದಲು ಭಾರತೀಯ ಹೆಣ್ಣುಮಕ್ಕಳು ಜೀವ ತೆಗೆದುಕೊಳ್ಳುತ್ತಾರೆ).

ಸ್ವಾಮಿ ವಿವೇಕಾನಂದರ ಮಾತನ್ನು ಅಪ್ಪಟ ಸುಳ್ಳೆಂದು, ಕೆಲ ವಲಯಗಳಲ್ಲಿ ದುಡಿಯುತ್ತಿರುವ ಭಾರತೀಯ ಮಹಿಳೆಯರು ಸಾಬೀತು ಮಾಡಿ ತುಂಬ ಮುಂದುವರಿದಿದ್ದಾರೆ! ಈ ಮಾತನ್ನು ಯಾಕೆ ಎತ್ತಿ ಹೇಳಬೇಕಾಯ್ತು ಅಂದರೆ ಇಂದಿನ ಬಹುತೇಕ ಯುವತಿಯರಿಗೆ ಅಂಗಾಂಗ ಪ್ರದರ್ಶನದಿಂದಲೇ ಐಶ್ವರ್ಯ, ಅಂತಸ್ತುಗಳನ್ನು ಗಳಿಸಿಕೊಳ್ಳುವ, ಮದುವೆ ಯಾದವರನ್ನೇ ಮದುವೆ ಆಗುವ ಸ್ವಚ್ಛಂದ ಬದುಕಿನ ತಾರೆಯರು ಆದರ್ಶವಾಗಿದ್ದಾರೆ. ಈ ತಾರೆಯರಲ್ಲಿರುವ ನಟನಾ ಸಾಮರ್ಥ್ಯ, ಪ್ರತಿಭೆ ಕೂಡ ಅವರು ಇತರರಿಗೆ ಮೇಲ್ಪಂಕ್ತಿಯಾಗಲು ಪೂರಕವಾಗಿದೆ ಎಂಬುದನ್ನು ಯಾರೂ ತಳ್ಳಿಹಾಕುವಂತಿಲ್ಲ.

ಮೈಸೂರಿನಲ್ಲಿ ನಡೆದಿರುವುದು ಹೇಯ ಪ್ರಸಂಗ: ಒಂದೊಂದು ಬಾರಿ ಇಂಥ ಅವಘಡ, ವಿಕೃತಿ ನಡೆದಾಗಲೂ ಈ ವಿಷಯದ ಚರ್ಚೆ ಮುನ್ನೆಲೆಗೆ ಬರುತ್ತದೆ. ಮುದ್ರಣ ಮಾಧ್ಯಮ, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಇದರ ಪೂರ್ವಾಪರಗಳ ಬಗ್ಗೆ ಸಾಕಷ್ಟು ವಿವರಗಳು ಚೆಲ್ಲಾಡುತ್ತವೆ. ಇನ್ನು ಪೊಲೀಸ್, ರಾಜಕಾರಣಿಗಳು ಅದರಲ್ಲೂ ಗೃಹ ಸಚಿವ, ಮುಖ್ಯಮಂತ್ರಿಗಳ ಮಾತುಗಳನ್ನು ಕ್ಷಕಿರಣದ ಅನ್ವೇಷಣೆಗೊಳಪಡಿಸಿ ಹಿಗ್ಗಾಮುಗ್ಗಾ ಎಳೆದಾಡಿಬಿಡುವ ಪದ್ಧತಿಯನ್ನು ಮಾಧ್ಯಮದ ಮಂದಿ ರೂಢಿಸಿಕೊಂಡಿದ್ದಾರೆ.

ಇಂಥ ಪ್ರಕರಣಗಳಲ್ಲಿ ನಾಲ್ಕು ಮುಖಗಳಂತೂ ಮೇಲ್ನೋಟಕ್ಕೆ ಕಾಣುತ್ತವೆ:

1. ಅತ್ಯಾಚಾರಕ್ಕೀಡಾದ ಯುವತಿ ಮತ್ತವಳ ಜತೆಗಾರ.
2. ಅತ್ಯಾಚಾರಗೈದ ಪಶುಗಳು.
3. ಅಪರಾಧಾನ್ವೇಷಣೆಯಲ್ಲಿ ತೊಡಗಿದ ಪೊಲೀಸ್, ಸರ್ಕಾರ, ಗೃಹ ಸಚಿವರ ಹೇಳಿಕೆ ಇತ್ಯಾದಿ.
4. ಶಿಕ್ಷೆ ಏನಾಗಬೇಕು? ಹೇಗಾಗಬೇಕು?

ಈ ಚತುರ್ಮುಖಗಳ ಸುತ್ತಲೇ ಇಡಿ ಚರ್ಚೆ ಸುತ್ತುತ್ತದೆ. ಇದನ್ನು ಬಿಟ್ಟು ಒಂದಿಂಚೂ ಅತ್ತಿತ್ತ ಸುಳಿಯುವುದಿಲ್ಲ. ಈ ಅಂಶಗಳು ಬಹುಮುಖ್ಯ ಅನ್ನುವುದರಲ್ಲಿ ಸಂದೇಹವೇ ಇಲ್ಲ. ಇಂಥ ಅನಾಗರಿಕ, ಕ್ರೂರ, ಬರ್ಬರ ಪ್ರಕರಣಗಳು ಏಕೆ ಮತ್ತೆಮತ್ತೆ ಮರುಕಳಿಸುತ್ತಿವೆ? ಇದರ ಹಿನ್ನೆಲೆ ಏನು? ಇದನ್ನು ನಿಯಂತ್ರಿಸಲು ಸಾಧ್ಯವೊ, ಇಲ್ಲವೊ? ಸಾಧ್ಯವಾದರೆ ಏನು ಮಾಡಬೇಕು. ಹೀಗೇ ಆದರೆ ಮುಂದೇನಾಗಬಹುದು. ಇಂತಹ ಅತ್ಯಂತ ಸಂಗತವಾದ, ಅಗತ್ಯವಾದ ಅಂಶಗಳು ಮುನ್ನೆಲೆಗೆ ಬರುತ್ತಿಲ್ಲ. ಸಾಮಾಜಿಕ ಹೊಣೆಗಾರಿಕೆಯುಳ್ಳ ಎಲ್ಲರನ್ನೂ ಇದು ತೀವ್ರವಾಗಿ ಕಾಡಬೇಕಾಗಿದೆ ಅಲ್ಲವೇ?

ಇಂಥ ಪ್ರಸಂಗಗಳು ನಡೆದಾಗ ಸಾಮಾನ್ಯವಾಗಿ ಕೇಳಿಬರುವ ಕೆಲವು ಮಾತುಗಳಿವೆ- 'ಯುವಕ-ಯುವತಿಯರು ನಿರ್ಜನ ಪ್ರದೇಶಕ್ಕೆ ಹೋಗಿ ಇಂಥ ಕೃತ್ಯಗಳಿಗೆ ಏಕೆ ಅವಕಾಶ ಕೊಡಬೇಕು?'- ಹೀಗೆ ಹೇಳಿದವರನ್ನು ಹೀಗಳೆಯುವುದು ಉಂಟು.


ಇದನ್ನೂ ಸ್ವಲ್ಪ ವಿಮರ್ಶಿಸೋಣ. ಹೆಂಗಸರು ಕಾಮಿನಿಯರಾಗಿ ಪುರುಷರಿಗೆ ಕಾಟ ಕೊಡುವುದು, ಕಾಮುಕರಾದ ಪುರುಷರು ಸ್ತ್ರೀಯರನ್ನು ಗೋಳುಗುಟ್ಟಿಸುವುದು ಎಲ್ಲ ಕಾಲದಲ್ಲೂ ಇದ್ದೇ ಇದೆ. ಪ್ರಾಚೀನ ಕಾಲದಿಂದ ಬಂದಿರುವ ಸಾಹಿತ್ಯರಾಶಿಯೇ ಇದಕ್ಕೆ ಸಾಕ್ಷಿಯಾಗಿ ನಿಂತಿದೆ. ವಸ್ತುಸ್ಥಿತಿ ಹೀಗಿರುವಾಗ ನಿಯಂತ್ರಣ, ಸ್ವಯಂನಿಯಂತ್ರಣ ಅಗತ್ಯ ಎಂದು ಹೇಳದೆ ವಿಧಿಯಿಲ್ಲ. ನಾವೇನು ಸತ್ಯಯುಗದಲ್ಲಿ ಬದುಕುತ್ತಿಲ್ಲ. ಆದರೆ ಈ ನಿಯಂತ್ರಣವೆನ್ನುವ ಹಗ್ಗವನ್ನು ಬಳಸಬೇಕಾದವರು ಕೇವಲ ಮಹಿಳೆಯರಷ್ಟೆ ಅಲ್ಲ, ಪುರುಷರು ಕೂಡ ಎಂಬುದನ್ನು ಮನಗಾಣಬೇಕು. ಹೆಣ್ಣು-ಗಂಡುಗಳೆರಡೂ ಸಮಾನವೆಂದು ಪ್ರತಿಪಾದಿಸುತ್ತಿರುವ ಈ ಕಾಲಘಟ್ಟದಲ್ಲಿ, ನಿಯಂತ್ರಣ ಇಬ್ಬರಿಗೂ ಬೇಕಲ್ಲವೆ? ಸ್ತ್ರೀ ನಿಯಂತ್ರಣ ಎಂದು ಹೇಳುವಾಗ ಅದೇ ಉಸಿರಿನಲ್ಲಿ ಪುರುಷರಿಗೂ ಬೇಕು ಎಂದು ಹೇಳಲೇಬೇಕಾಗಿದೆ.

ಗಂಡು-ಹೆಣ್ಣು ಎಂಬ ಭೇದವಿಲ್ಲದೆ, ಮನುಷ್ಯರ ಅನಿಯಂತ್ರಿತ ಸ್ವಚ್ಛಂದವಾದ ದುಷ್ಟಪ್ರವೃತ್ತಿಗಳೇ ಸಮಾಜದ ಸ್ವಾಸ್ಥ್ಯ ಕೆಡಿಸುತ್ತಿರುವುದು ಎಲ್ಲರಿಗೂ ಕಾಣುತ್ತಿದೆ. ಲಂಚಕೋರತನ, ಕಾಮುಕತೆ, ಈರ್ಷ್ಯೆ, ಅಸೂಯೆ, ದುರಾಸೆಗಳು ಎಲ್ಲ ವರ್ಗಗಳಲ್ಲೂ ತಾಂಡವಿಸುತ್ತಿವೆ. ಸಮಾಜದಲ್ಲಿ ಕಾಣುವ ಬದಲಾವಣೆಗಳಿಗೆ ಎಲ್ಲರೂ ಹೊಣೆಯಾಗುತ್ತಾರೆ. ಸರ್ಕಾರ, ಸಾಮಾನ್ಯರು, ಪೊಲೀಸರು, ನ್ಯಾಯಾಂಗ, ಮಾಧ್ಯಮ ಎಲ್ಲರೂ ಸಂವೇದನೆಯನ್ನು ಕಳೆದುಕೊಳ್ಳುತ್ತಿದ್ದಾರೇನೋ ಎಂಬ ಭಯ ಆವರಿಸುತ್ತಿದೆ. ಕಾನೂನಿಗಂತೂ ಕಣ್ಣಿಲ್ಲ.

ಪೊಲೀಸ್, ಆರೋಪಿ, ಪಬ್ಲಿಕ್ ಪ್ರಾಸಿಕ್ಯೂಟರ್, ವಕೀಲರು, ಸಾಕ್ಷಿಗಳು ಇವೆಲ್ಲದರ ನಡುವೆ ಸಿಕ್ಕಿಕೊಂಡ ನ್ಯಾಯಾಂಗ, 'ಅನ್ಯಾಯ'ದ ಕಡೆ ವಾಲುವುದು ಸಹಜವೇ ಆಗಿಬಿಟ್ಟಿದೆ. ಅಪರಾಧಿಗೆ ಸೂಕ್ತ ಶಿಕ್ಷೆಯೇ ಆಗುತ್ತಿಲ್ಲ. ಗಲ್ಲುಶಿಕ್ಷೆ ಕಾಯಂ ಆದವರಿಗೆ, ಕ್ಷಮಾದಾನ ನೀಡಬೇಕೆಂದು ರಾಷ್ಟ್ರಪತಿಗೆ ಅರ್ಜಿಹಾಕಲು ಅವಕಾಶವೇಕೆ? ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟಮೇಲೆ ಮತ್ತೆ ಅದನ್ನು ವಿಮರ್ಶಿಸುವ ಈ ಪುನರುಕ್ತಿಪಾಂಡಿತ್ಯವೇಕೆ? ಸರ್ಕಾರಗಳು ಇಂಥ ಅಸಂಗತಗಳನ್ನು ನಿವಾರಿಸಲು ಪ್ರಯತ್ನಿಸುವುದಿಲ್ಲ. ಮೈಸೂರಿನ ಪ್ರಸಂಗದಲ್ಲಿ ಸಂತ್ರಸ್ತೆಯ ಮನೆಯವರು ದೂರುಕೊಡಲು ಹಿಂಜರಿಯುತ್ತಿದ್ದಾರೆ ಏಕೆ? ಸಮಾಜಕ್ಕೆ, ಮರ್ಯಾದೆಗೆ ಅಂಜಿ, ಎನ್ನುವ ಸುದ್ದಿ! ಹಾಗಾದರೆ ಅಪರಾಧಿಗಳಿಗೆ ಶಿಕ್ಷೆ ಆಗಬೇಕೆಂಬುದು ತಪ್ಪೆ? ಪ್ರಸ್ತುತ ಅಪರಾಧದಲ್ಲಿ ಭಾಗವಹಿಸಿದ ಧೂರ್ತ ಕಾಮುಕರನ್ನು ಒಡನೆಯೇ ಗಲ್ಲಿಗೇರಿಸಬೇಕಾಗಿರುವುದು ಸೂಕ್ತ. ಇಲ್ಲಿ ದಯೆ- ದಾಕ್ಷಿಣ್ಯ ಎಂಬುದು ಅಸಂಗತ-ಅಪ್ರಕೃತ.

ಲೇಖಕಿ: ವಿಧಾನ ಪರಿಷತ್ ಮಾಜಿ ಸದಸ್ಯೆ

ಪದಬಂಧ 4709 – ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಪ್ರವಾಸದಲ್ಲಿರುವ ದಾರ್ಶನಿಕ (3)
4.ಹಜಾರ ಇಲ್ಲದೆ (4)
6.ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಸೇರುವುದು (4)
8.ರಾತ್ರಿಯನ್ನು ಹೀಗೂ ಹೇಳುವರು (3)
11.ಕರುವಿಗೆ ತೋರಿದ ದಯೆ (3)
13.ಕಾಡಿನ ಅರಸನಿವನು (4)
17.ದಮಯಂತಿ ಗಂಡನ ರುಚಿಕಟ್ಟಾದ ಅಡುಗೆ (4)
18.ಔದಾರ್ಯವನ್ನು ಹೀಗೆನ್ನಿ (3)

ಮೇಲಿಂದ ಕೆಳಕ್ಕೆ

1.ಪ್ರೌಢನಾದವನನ್ನು ಹೀಗೂ ಕರೆವರು (3)
2.ಸೂರ್ಯನ ಇನ್ನೊಂದು ಹೆಸರು (4)
3.ಕನ್ನಡಿಗನಿಗೆ ಸಿಕ್ಕಿರುವ ಡಿಸ್ಕೌಂಟ್! (3)
5.ನೆನಪಲ್ಲೇ ಕಾರಣವೂ ಇದೆಯಲ್ಲಾ! (2)
7.ಮಣಿ ಧರಿಸಿದ ಚಲುವೆ (3)
9.ಯಮನು ಕೊನೆಗಿದ್ದಾಗಿನ ಸೂತ್ರ (3)
10.ಸ್ವಂತ ಭಾವನ ಗುಣ! (3)
12.ಅನಿರೀಕ್ಷಿತ ಘಟನೆಯು ಉಲ್ಟಾ ಆಗಿಬಿಟ್ಟಿದೆ (4)
14.ಕನಸು ಇಲ್ಲಿ ನಿಜವಾಗಿದೆ (3)
15.ಜವಾನನ ಹತ್ತಿರವಿರುವ ಮಂದಿ (2)
16.ಸಮತಲ ಪ್ರದೇಶ (3)

4708ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉತ್ತರಾಧಿಕಾರಿ 4.ಪುರೋಹಿತ 5.ಗಹನ 7.ಕನಸು 9.ತರುಣಿ 11.ಕಲಹ 13.ಕರ್ನಾಟಕ 15.ವಿಚಾರವೇದಿಕೆ

ಮೇಲಿಂದ ಕೆಳಕ್ಕೆ: 1.ಉರಗ 2.ರಿಪು 3.ಅಂತಕ 6.ನವನೀತ 7.ಕಲ್ಯಾಣಿ 8.ಸುಧಾರಕ 10.ಬಿಕರಿ 12.ಹರಕೆ 14.ಕವಿ

ಸುಡೊಕು 5095

				8			2	
	3							8
6		5		9		4		3
	2		6				3	
5		3	2		1	8		9
	1				9		4	
	6			2				4
3		8	9				5	
	5			3	4			1


5094 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಸೆಪ್ಟೆಂಬರ್ 4, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಪೂರ್ವಫಲ್ಗುಣಿ ತ್ರಯೋದಶಿ ಗಂ. 60-00 (ದಿನ ಪೂರ್ತಿ) ಶನಿವಾರ ನಿತ್ಯ ನಕ್ಷತ್ರ ಪುಷ್ಯ ಗಂ. 26-35 (ಹ. 4-53) ವರೀಯನ್ ನಾಮ ಯೋಗ ಗಂ. 8-55 ಗರಜ ಕರಣ ಗಂ. 30-11 ವಿಷ ಗಂ. 59-24 ಅಮೃತ ಗಂ. 8-52 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-12 ಸೂರ್ಯಾಸ್ತ: 6-26 ಅದೃಷ್ಟ ಸಂಖ್ಯೆ 3, 9

ಮೇಷ: ಹಣಕಾಸು ವ್ಯವಹಾರ ನಡೆಸುವವರು ಯೋಜನೆ ವಿಸ್ತರಣೆ ಮಾಡಲು ಉತ್ತಮ ದಿನ. ಸಂಪರ್ಕ, ಸಂವಹನ ಕ್ಷೇತ್ರಗಳಲ್ಲಿ ದುಡಿಯುತ್ತಿರುವವರಿಗೆ ಗೌರವಾದರಗಳು ದೊರಕಲಿವೆ. ಮಹಿಳಾ ಉದ್ಯೋಗಿಗಳಿಗೆ ಕಿರಿಕಿರಿ.

ವೃಷಭ: ಷೇರುಪೇಟೆ, ಹೂಡಿಕೆಗಳಲ್ಲಿ ಹಣ ತೊಡಗಿಸುವುದರಿಂದಾಗಿ ಉತ್ತಮ ಲಾಭ. ರೇಷ್ಮೆ ನೇಕಾರರಿಗೆ ಉತ್ತಮ ಆದಾಯ. ಹೊಸ ವಸ್ತ್ರ ವಿನ್ಯಾಸಕಾರರು, ಕಲಾವಿದರಿಗೆ ಅವಕಾಶ ಹೆಚ್ಚಲಿದೆ.

ಮಿಥುನ: ಕೋರ್ಟ್ ಕಚೇರಿಗಳಲ್ಲಿನ ಕೆಲಸಗಳಲ್ಲಿ ಯಶಸ್ಸು ದೊರೆಯುವು-ದರೊಂದಿಗೆ ಆದರಾತಿಥ್ಯ. ಅಪೇಕ್ಷಿತರಿಗೆ ಸಂತಾನ ಪ್ರಾಪ್ತವಾಗುವ ಲಕ್ಷಣ. ಕೈಗಾರಿಕಾ ಕ್ಷೇತ್ರದಲ್ಲಿ ಉತ್ತಮ ಲಾಭ. ಆರೋಗ್ಯದಲ್ಲಿ ಸುಧಾರಣೆ.

ಕರ್ಕಾಟಕ: ಶೈಕ್ಷಣಿಕ ವಲಯದಲ್ಲಿ ವಿದ್ಯಾರ್ಥಿಗಳ ಅಪಾರ ಸಾಧನೆ ಗಣನೀಯವಾಗಿ ಹೆಚ್ಚಲಿದೆ. ಸಮಾಜಸೇವೆಯಲ್ಲಿ ಸಂಪೂರ್ಣ ಭಾಗಿಯಾಗಲಿ-ದ್ದೀರಿ. ಹಿರಿಯರಿಂದ ಪ್ರಶಂಸೆ. ಆರೋಗ್ಯದಲ್ಲಿ ಸುಧಾರಣೆ

ಸಿಂಹ: ಕಟ್ಟಡ ಸಾಮಗ್ರಿಗಳ ವ್ಯಾಪಾರಸ್ಥರಿಗೆ ಒಳ್ಳೆಯ ಆದಾಯ. ಕುಟುಂಬದಲ್ಲಿ ಮಂಗಳಕಾರ್ಯಗಳು ಜರುಗುವ ಲಕ್ಷಣಗಳು ಕಂಡುಬರುವುದು. ಕೆಲಸ-ಕಾರ್ಯಗಳು ನಿರ್ವಿಘ್ನದಾಯಕವಾಗಿ ಸಾಗುವವು.

ಕನ್ಯಾ: ಸತ್ಕಾರ್ಯಗಳನ್ನು ಸರಾಗವಾಗಿ ನೆರವೇರಿಸಲಿದ್ದೀರಿ. ಉದ್ದೇಶಿತ ಕಾರ್ಯಗಳಿಗೆ ಸಕಾಲದಲ್ಲಿ ಬರಬೇಕಾದ ಹಣ ಬರುವುದರಿಂದ ಅನುಕೂಲ. ಮಹಿಳೆಯರಿಗೆ ಬಿಡುವಿಲ್ಲದ ಕೆಲಸದಿಂದಾಗಿ ದೇಹಾಲಸ್ಯ.

ತುಲಾ: ನಿಮ್ಮ ಬಯಕೆಗಳು ಈಡೇರುವ ದಿನ. ವಿದೇಶ ಪ್ರಯಾಣ ಮಾಡುವ ಸಾಧ್ಯತೆ. ವಿವಾಹಾಪೇಕ್ಷಿತರಿಗೆ ಅನುರೂಪ ಸಂಗಾತಿಯು ದೊರಕಿ ನಿಶ್ಚಯವಾಗಲಿದೆ. ಹಿರಿಯರ ಆರೋಗ್ಯದ ಬಗ್ಗೆ ಗಮನ ಅಗತ್ಯ.

ವೃಶ್ಚಿಕ: ಬರವಣಿಗೆಯಿಂದ ಉತ್ತಮ ಆದಾಯ. ಕಠಿಣವೆನಿಸಿದ ಕಾರ್ಯಗಳು ಸಹ ಸುಗಮವಾಗಿ ನೆರವೇರುವುದರಿಂದಾಗಿ ನೆಮ್ಮದಿ. ಮನೆಯಲ್ಲಿ ಹಬ್ಬದ ವಾತಾವರಣ ನೆಲೆಸಲಿದೆ. ಧಾರ್ಮಿಕ ಕಾರ್ಯದಲ್ಲಿ ಮಗ್ನರಾಗುವಿರಿ.

ಧನು: ವ್ಯಾಪಾರಿಗಳಿಗೆ ಉತ್ತಮ ಲಾಭ. ಕೃಷಿಕರಿಗೆ ಉತ್ತಮ ಆದಾಯ. ಸರ್ಕಾರಿ ನೌಕರರಿಗೆ ಇತರೆ ಮೂಲಗಳಿಂದ ಅಧಿಕ ಆದಾಯ. ಆದಾಯಕ್ಕಿಂತ ವೆಚ್ಚ ಅಧಿಕವಾಗುವ ಸಾಧ್ಯತೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಖರ್ಚು.

ಮಕರ: ನೌಕರಿಯಲ್ಲಿ ನಿರೀಕ್ಷಿತ ಶುಭವಾಗಲಿದೆ. ಸುದ್ದಿ ಮಾಧ್ಯಮದಲ್ಲಿ ದುಡಿಯುವವರಿಗೆ ಬಿಡುವಿಲ್ಲದ ಕಾರ್ಯದೊಂದಿಗೆ ಯಶಸ್ಸು. ಎಂಜಿನಿಯ-ರ್‌ಗಳಿಗೆ ಧನಲಾಭದೊಂದಿಗೆ ಉನ್ನತ ಸ್ಥಾನದಲ್ಲಿರುವವರಿಂದ ಪ್ರಶಂಸೆ.

ಕುಂಭ: ಸಂಪತ್ತು ವೃದ್ಧಿಸುವುದು. ಉತ್ತಮ ಯೋಜನೆಗಳು ವೃದ್ಧಿಸುವ ಎಲ್ಲ ಲಕ್ಷಣ. ಅವಿವಾಹಿತರಿಗೆ ವಿವಾಹ ಯೋಗ. ಅಪೇಕ್ಷಿತರಿಗೆ ಸಂತಾನ ಪ್ರಾಪ್ತವಾಗುವ ಸಾಧ್ಯತೆ. ವೈದ್ಯಕೀಯ ವೆಚ್ಚ ಭರಿಸಬೇಕಾದೀತು.

ಮೀನ: ಮಕ್ಕಳ ಪ್ರತಿಭೆ ಬೆಳಕಿಗೆ ಬಂದು ಅಪಾರ ಸಂತೋಷ ತರಲಿದೆ. ಸತ್ಕಾರ ನಿರ್ವಹಣೆಯಲ್ಲಿ ಧಾರ್ಮಿಕ ಮುಖಂಡರು ಮುಖ್ಯ ಪಾತ್ರ ವಹಿಸಲಿದ್ದಾರೆ. ವೈವಾಹಿಕ ವ್ಯವಹಾರಗಳನ್ನು ಮುಂದೂಡಲಿದ್ದೀರಿ.

ನಿಮ್ಮ ಜನ್ಮದಿನ 4-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕ. ಮೇಲಧಿಕಾರಿಗಳೊಂದಿಗೆ ಕೆಲಸದ ವಿಚಾರದಲ್ಲಿ ದೀರ್ಘ ಚರ್ಚೆ. ಸೊಸೈಟಿ ಅಥವಾ ಸಹಕಾರ ಸಂಘ ಸಂಸ್ಥೆಗಳಲ್ಲಿ ಉನ್ನತ ಸ್ಥಾನ ಲಭ್ಯ ಸಾಧ್ಯತೆ. ಹೊಸ ವಾಹನ ಖರೀದಿ ಯೋಗ. ನಿಮ್ಮ ಕೆಲಸದ ವೈಖರಿ ಸಹವರ್ತಿಗಳ ಗಮನ ಸೆಳೆಯಲಿದೆ. ಹೊಸ ಹೊಸ ಭಾಷೆ ಕಲಿಯಲು ಆಸಕ್ತಿ.

ಹಿರಿಯ ನಾಗರಿಕರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ • ಆಸ್ತಿ, ಚಿನ್ನಾಭರಣಕ್ಕಾಗಿ ವೃದ್ಧರ ಹತ್ಯೆ • ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ನೆವ

‘ಹಿರಿಯ ಜೀವ’ಗಳ ಸುರಕ್ಷತೆಗೆ ಬೇಕಿದೆ ಬಲ

• ಸಂತೋಷ ಜಿಗಳಿಕೊಪ್ಪ / ರಶೀದ್ ಕಪ್ಪನ್

ಬೆಂಗಳೂರು: ನಗರದಲ್ಲಿ ವಾಸಿಸುತ್ತಿರುವ ಹಿರಿಯ ನಾಗರಿಕರು (60+ ವಯಸ್ಸು) ಹಾಗೂ ಒಂಟಿ ಮಹಿಳೆಯರ ಮೇಲೆ ಅಪರಾಧ ಕೃತ್ಯ ಎಸಗುವವರ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದ್ದು, ಈ ಬಗ್ಗೆ ಹಲವರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.


ಆಸ್ತಿ, ನಗದು ಹಾಗೂ ಚಿನ್ನಾಭರಣ ದೋಚಲು ವೃದ್ಧ ದಂಪತಿ ಹತ್ಯೆ ಘಟನೆಗಳು ನಡೆಯುತ್ತಿವೆ. ವೃದ್ಧಾಶ್ರಮದಲ್ಲೂ ಆಹಾರ ನೀಡದೇ ವೃದ್ಧರನ್ನು ಕೊಲೆ ಮಾಡಿದ ಪ್ರಕರಣಗಳೂ ವರದಿಯಾಗಿವೆ.

ಕುಟುಂಬದ ಸದಸ್ಯರಿಂದ ಹಾಗೂ ಕೆಲ ಸಾರ್ವಜನಿಕರಿಂದಲೂ ವೃದ್ಧರ ಮೇಲೆ ದೌರ್ಜನ್ಯಗಳು ಮೇಲಿಂದ ಮೇಲೆ ನಡೆಯುತ್ತಿವೆ. ಕೆಲ ವೃದ್ಧರು, ಠಾಣೆಗೆ ಹೋಗಿ ದೂರು ನೀಡಿದರೂ ಪೊಲೀಸರು ಕ್ರಮ ಕೈಗೊಳ್ಳುತ್ತಿಲ್ಲವೆಂಬ ಆರೋಪ ವ್ಯಕ್ತವಾಗಿದೆ.

‘ವಯಸ್ಸಿನಲ್ಲಿ ದುಡಿದು, ಈಗ ವೃದ್ಧಾಪ್ಯ ಬದುಕು ನಡೆಸುತ್ತಿದ್ದೇವೆ. ಕೆಲವರು ಮನೆಯಲ್ಲಿ ಒಂಟಿಯಾಗಿ ಇರಬೇಕಾದ ಸ್ಥಿತಿ ಇದೆ. ಇಂಥ ಹಿರಿಯ ನಾಗರಿಕರಿಗೆ ರಕ್ಷಣೆ ನೀಡುವುದು ಪೊಲೀಸ್ ಇಲಾಖೆ ಜವಾಬ್ದಾರಿ. ಅನಕ್ಷರಸ್ಥ ಹಿರಿಯ ನಾಗರಿಕರಿಗೆ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸಬೇಕು’ ಎಂದು ಹಿರಿಯ ನಾಗರಿಕ ಕಾಚರಕನಹಳ್ಳಿಯ ಜಗನ್ನಾಥ್ ರೆಡ್ಡಿ ಹೇಳಿದರು.

ಇನ್ನೊಬ್ಬ ಹಿರಿಯ ನಾಗರಿಕ ಬಿ.ಶ್ರೀಪತಿ ರಾವ್, ‘ವೃದ್ಧ ದಂಪತಿ ಕೊಲೆ, ಸುಲಿಗೆ, ಹಲ್ಲೆಯಂಥ ಘಟನೆಗಳು ನಿತ್ಯವೂ ವರದಿಯಾಗುತ್ತಿವೆ. ಬಸ್ಸಿನಲ್ಲೂ ಹಿರಿಯ ನಾಗರಿಕರ ಗಮನ ಬೇರೆಡೆ ಸೆಳೆದು ಹಣ, ಚಿನ್ನಾಭರಣ, ಮೊಬೈಲ್ ಕದಿಯುತ್ತಿದ್ದಾರೆ. ರಸ್ತೆಯಲ್ಲಿ ಓಡಾಡಲು ಭಯವಾಗುತ್ತಿದೆ. ಹಿರಿಯ ಜೀವಗಳ ಸುರಕ್ಷತೆಗೆ ವ್ಯವಸ್ಥೆಯೊಂದನ್ನು ರೂಪಿಸಬೇಕಾದ ಅಗತ್ಯವಿದೆ’ ಎಂದರು.

‘ಮನೆಯಿಂದಲೇ ಹಿರಿಯ ನಾಗರಿಕರು ದೂರು ನೀಡಲು ವ್ಯವಸ್ಥೆ ಇರಬೇಕು. ದೂರುದಾರರಿಗೆ ರಕ್ಷಣೆ ನೀಡಬೇಕು. ಅವರ ಮಾಹಿತಿ ಆರೋಪಿಗಳಿಗೆ ಸಿಗದಂತೆ ಗೋಪ್ಯವಾಗಿರಿಸಬೇಕು. ನಿತ್ಯವೂ ರಸ್ತೆಯಲ್ಲಿ ಸಂಚರಿಸುವ ಬಸ್, ಆಟೊ, ಕ್ಯಾಬ್ ಚಾಲಕರು ಹಾಗೂ ಬೀದಿಬದಿ ವ್ಯಾಪಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಹಿರಿಯ ನಾಗರಿಕರ ಮೇಲೆ ದೌರ್ಜನ್ಯಗಳಾದರೆ, ತ್ವರಿತವಾಗಿ ಠಾಣೆಗೆ ಮಾಹಿತಿ ನೀಡುವಂತೆ ಅವರನ್ನು ಕೋರಬೇಕು’ ಎಂದೂ ಹೇಳಿದರು.



‘ತುರ್ತು ಸಂಖ್ಯೆ– 112’

‘ವೃದ್ಧರು ಹಾಗೂ ಒಂಟಿ ಮಹಿಳೆಯರು, ತುರ್ತು ಸಂದರ್ಭಗಳಲ್ಲಿ ಸಹಾಯಕ್ಕಾಗಿ 112 ಸಂಖ್ಯೆಗೆ ಕರೆ ಮಾಡಬಹುದು. ತ್ವರಿತವಾಗಿ ಸ್ಪಂದಿಸುವ ವ್ಯವಸ್ಥೆ ನಮ್ಮಲ್ಲಿದೆ’ ಎಂದು ಕಮಲ್ ಪಂತ್ ತಿಳಿಸಿದರು.

‘ಮಹಿಳೆ ಹಾಗೂ ಮಕ್ಕಳ ರಕ್ಷಣೆ, ಸೈಬರ್ ಅಪರಾಧ, ಡ್ರಗ್ಸ್ ಸಾಗಣೆ ಹಾಗೂ ಮಾರಾಟ ಸೇರಿದಂತೆ ಹಲವು ವಿಚಾರಕ್ಕೆ ಸಹಾಯವಾಣಿಗಳು ಇವೆ. ಯಾವಾಗ ಯಾವ ಸಹಾಯವಾಣಿಗೆ ಕರೆ ಮಾಡಬೇಕೆಂಬ ಗೊಂದಲ ಜನರಲ್ಲಿ ಇರುತ್ತದೆ. ಇದೇ ಕಾರಣಕ್ಕೆ 112 ಪರಿಚಯಿಸಲಾಗಿದೆ’ ಎಂದೂ ಹೇಳಿದರು.

ಬೆಂಗಳೂರಿನಲ್ಲಿ ವೃದ್ಧರ ಮೇಲಾದ ಅಪರಾಧ ಪ್ರಕರಣಗಳು

2019	209
2020	210
2021	62

ಹಿರಿಯ ನಾಗರಿಕರ ಜನಸಂಖ್ಯೆ

76,58,000 ಕರ್ನಾಟಕ

9,11,336 ಬೆಂಗಳೂರು

ವೃದ್ಧಾಶ್ರಮಗಳ ಸಂಖ್ಯೆ

292 ಕರ್ನಾಟಕ | **89** ಬೆಂಗಳೂರು

ಕರ್ನಾಟಕದಲ್ಲಿ ಹಿರಿಯ ನಾಗರಿಕರ ಮೇಲಾದ ದೌರ್ಜನ್ಯ ಪ್ರಕರಣಗಳು

ವರ್ಷ	ಕುಟುಂಬದವರಿಂದ	ವ್ಯಕ್ತಿಗಳಿಂದ	ಸಾರ್ವಜನಿಕ ಸಂಸ್ಥೆ/ಸೇವಾ ಪೂರೈಕೆದಾರರಿಂದ
2018	804	269	80
2019	1015	359	85
2020	442	184	33
2021 ಆಗಸ್ಟ್‌ವರೆಗೆ	254	82	11

‘ಠಾಣೆವಾರು ನೋಂದಣಿ ಆರಂಭ’

‘ಹಿರಿಯ ನಾಗರಿಕರು ಹಾಗೂ ಒಂಟಿ ಮಹಿಳೆಯರ ರಕ್ಷಣೆ ಪೊಲೀಸರ ಜವಾಬ್ದಾರಿ. ಅಂಥವರ ಮಾಹಿತಿಯನ್ನು ಕಲೆಹಾಕಲು ತೀರ್ಮಾನಿಸಲಾಗಿದೆ. ಕೆಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಹೆಸರು ನೋಂದಣಿ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದರು.

‘ಪ್ರಜಾವಾಣಿ’ಗೆ ವಿಶೇಷ ಸಂದರ್ಶನ ನೀಡಿದ ಕಮಲ್ ಪಂತ್, ’ಸೆಪ್ಟೆಂಬರ್ 15ರೊಳಗಾಗಿ ಎಲ್ಲ ಠಾಣೆಯಲ್ಲೂ ನೋಂದಣಿ ಕೆಲಸ ಚುರುಕಾಗಲಿದೆ’ ಎಂದರು. ಸಂದರ್ಶನದ ವಿವರ ಇಲ್ಲಿದೆ.

• **ಹಿರಿಯ ನಾಗರಿಕರ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇದರ ತಡೆಗೆ ಪೊಲೀಸರು ಕೈಗೊಂಡ ಕ್ರಮಗಳೇನು?**

ಕಮಲ್ ಪಂತ್: ಹಿರಿಯ ನಾಗರಿಕರ ಮೇಲಿನ ದೌರ್ಜನ್ಯವನ್ನು ಸಹಿಸುವುದಿಲ್ಲ. ನಗರದಲ್ಲಿ ವಾಸವಿರುವ ಹಿರಿಯ ನಾಗರಿಕರ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಆಯಾ ಠಾಣೆ ಪೊಲೀಸರು, ಹಿರಿಯ ನಾಗರಿಕರ ಜೊತೆ ನಿರಂತರವಾಗಿ ಸಂಪರ್ಕದಲ್ಲಿದ್ದು ಸಮಸ್ಯೆಗಳನ್ನು ಆಲಿಸಲಿದ್ದಾರೆ

• **ಹಿರಿಯ ನಾಗರಿಕರ ನೋಂದಣಿ ಹೇಗೆ? ಇದರ ಉಪಯೋಗವೇನು?**

ಕಮಲ್ ಪಂತ್; ಮನೆ ಹಾಗೂ ಸುತ್ತಮುತ್ತಲ ಸ್ಥಳದಲ್ಲಿ ಸುರಕ್ಷತೆ ಇಲ್ಲವೆಂದು ಭಾವಿಸುವ ಹಿರಿಯ ನಾಗರಿಕರು ತಮ್ಮ ವ್ಯಾಪ್ತಿಯ ಠಾಣೆಯಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಖುದ್ದಾಗಿ ಠಾಣೆಗೆ ಬರಲು ಸಾಧ್ಯವಾಗದವರು, ಬೆಂಗಳೂರು ಸಿಟಿ ಪೊಲೀಸ್ ಜಾಲತಾಣದಲ್ಲಿ ಆನ್‌ಲೈನ್ ಮೂಲಕವೂ ಹೆಸರು ನೋಂದಾಯಿಸಿಕೊಳ್ಳಬಹುದು. ಈ ಆನ್‌ಲೈನ್ ನೋಂದಣಿ ಸೌಲಭ್ಯ ಸದ್ಯದಲ್ಲೇ ಲಭ್ಯವಾಗಲಿದೆ.



ಕಮಲ್ ಪಂತ್

ನೋಂದಾಯಿತ ಹಿರಿಯ ನಾಗರಿಕರು ಹಾಗೂ ಒಂಟಿ ಮಹಿಳೆಯರ ಮನೆಗಳ ಸ್ಥಳಗಳನ್ನು ‘ಇ-ಬೀಟ್’ ಜಿಪಿಎಸ್ ವ್ಯವಸ್ಥೆಯಲ್ಲಿ ಗುರುತಿಸಲಾಗುವುದು. ಗಸ್ತು ಸಿಬ್ಬಂದಿ ಮನೆಗಳಿಗೆ ಭೇಟಿ ನೀಡಿ ಕನಿಷ್ಠ 10 ನಿಮಿಷ ನೋಂದಾಯಿತರ ಜೊತೆ ಮಾತುಕತೆ ನಡೆಸಲಿದ್ದಾರೆ. ಸಿಬ್ಬಂದಿ ಹೋಗಿಬಂದ ದಾಖಲೆ ಸರ್ವರ್‌ನಲ್ಲಿ ನಮಗೆ ಲಭ್ಯವಾಗಲಿದೆ. ಆಗಾಗ ಪೊಲೀಸರು ಮನೆಗೆ ಹೋಗಿ ಬಂದರೆ, ನೋಂದಾಯಿತರಿಗೆ ಧೈರ್ಯ ಬರುತ್ತದೆ.

• **ವೈಯಕ್ತಿಕವಾಗಿ ಹಿರಿಯ ನಾಗರಿಕರ ಸಮಸ್ಯೆ ಆಲಿಸುತ್ತೀರಾ?**

ಕಮಲ್ ಪಂತ್: ಜನರ ಸಮಸ್ಯೆ ಆಲಿಸಲು ನಾನು ನಡೆಸುತ್ತಿರುವ ಜನಸಂಪರ್ಕ ಸಭೆಯಲ್ಲಿ ಹಿರಿಯ ನಾಗರಿಕರೇ ಹೆಚ್ಚಿರುತ್ತಾರೆ. ಹೀಗಾಗಿ, ಅವರ ಸಮಸ್ಯೆಗಳನ್ನು ವೈಯಕ್ತಿಕವಾಗಿ ಆಲಿಸುತ್ತೇನೆ. ನಿಯಂತ್ರಣ ಕೊಠಡಿ ಸಿಬ್ಬಂದಿ, ದಿನಕ್ಕೆ 50 ನೋಂದಾಯಿತ ಹಿರಿಯ ನಾಗರಿಕರಿಗೆ ಕರೆ ಮಾಡಿ ಸುರಕ್ಷತೆ ಬಗ್ಗೆ ವಿಚಾರಿಸಲಿದ್ದಾರೆ. ಯಾವುದಾದರೂ ಸಮಸ್ಯೆ ಇದ್ದರೆ, ಸಂಬಂಧಪಟ್ಟ ಠಾಣೆಗೆ ರವಾನಿಸಲಿದ್ದಾರೆ.

ಪ್ರಜಾವಾಣಿ ವಿಶೇಷ

‘ಹಿರಿಯ ಜೀವ’ಗಳು ಬಯಸುವುದು ಏನು?

- ನಿಂದನೆ, ಕಿರುಕುಳ ಮತ್ತು ದೌರ್ಜನ್ಯಕ್ಕೆ ಒಳಗಾದ ಹಿರಿಯರಿಗೆ ತ್ವರಿತವಾಗಿ ಸಹಾಯ ಸಿಗಬೇಕು
- ನಿರ್ವಹಣೆ ಕಾಯ್ದೆಯಡಿ ಹಿರಿಯರು ನ್ಯಾಯಾಧಿಕರಣಗಳ ಮೂಲಕ ಪ್ರಕರಣ ಇತ್ಯರ್ಥಪಡಿಸಿಕೊಳ್ಳಲು ಸಹಾಯ ಬೇಕು
- ಏಕಾಂಗಿ ಮತ್ತು ಖಿನ್ನತೆಗೆ ಮಾನಸಿಕ ಸಮಾಲೋಚನೆ ನೀಡಬೇಕು
- ಕಾಣೆಯಾದ ಹಿರಿಯರ ಪತ್ತೆಗೆ ಕ್ರಮ ಕೈಗೊಳ್ಳಬೇಕು
- ಕಾನೂನು ಸಲಹೆ, ವೈದ್ಯಕೀಯ ಮಾರ್ಗದರ್ಶನ ಉಚಿತವಾಗಿ ಸಿಗಬೇಕು
- / ಸಹಾಯಧನ ಪಡೆಯುವ ಪ್ರಕ್ರಿಯೆಯಲ್ಲಿ ಸಹಾಯ ಅಗತ್ಯ
- ವೃದ್ಧಾಶ್ರಮಗಳಲ್ಲಿ ನಿವಾಸಿಗಳ ಜೀವನದ ಗುಣಮಟ್ಟ ಸುಧಾರಿಸಬೇಕು
- ಹಿರಿಯರನ್ನು ಅಪರಾಧಗಳಿಂದ ರಕ್ಷಿಸಲು ಸುರಕ್ಷಿತ ವಾತಾವರಣ ಸೃಷ್ಟಿಸಬೇಕು

ಅಭಿಪ್ರಾಯಗಳು



ಗಸ್ತಿನಲ್ಲಿರುವ ಸಿಬ್ಬಂದಿ, ತಮ್ಮ ಠಾಣೆ ವ್ಯಾಪ್ತಿಯ ನಿವಾಸಿಗಳ ಜೊತೆ ನಿರಂತರವಾಗಿ ಸಂಪರ್ಕದಲ್ಲಿರಬೇಕು. ಮನೆ ಹಾಗೂ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿರುವ ಹಿರಿಯ ನಾಗರಿಕರ ಪರಿಚಯವೂ ಅವರಿಗೆ ಇರಬೇಕು. ಪೊಲೀಸರ ಮೇಲೆ ಹಿರಿಯ ನಾಗರಿಕರಿಗೆ ನಂಬಿಕೆ ಬರುವ ರೀತಿಯಲ್ಲಿ ಗಸ್ತು ಸಿಬ್ಬಂದಿ ಕೆಲಸ ಮಾಡಬೇಕು.

- ಎಸ್.ಟಿ.ರಮೇಶ್, ನಿವೃತ್ತ ಡಿಜಿ-ಐಜಿಪಿ

ಬಹುತೇಕ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಅಪರಿಚಿತ ವ್ಯಕ್ತಿಗಳ ಪ್ರವೇಶ ನಿರ್ಬಂಧಿಸಲಾಗಿದೆ. ಆಕಸ್ಮಾತ್ ಯಾರಾದರೂ ಬಂದರೆ, ಅವರ ಮೇಲೆ ನಿಗಾ ವಹಿಸಲು ಕೆಲವರು ಮೊಬೈಲ್ ಆ್ಯಪ್‌ಗಳನ್ನು ಬಳಸುತ್ತಿದ್ದಾರೆ. ಇದರಿಂದ ಸ್ಥಳೀಯ ನಿವಾಸಿಗಳಲ್ಲಿ ಸುರಕ್ಷತೆ ಭಾವ ಮೂಡಿದೆ

- ವಿಕ್ರಮ್ ರೈ, ಬೆಂಗಳೂರು ಅಪಾರ್ಟ್‌ಮೆಂಟ್ ನಿವಾಸಿಗಳ ಒಕ್ಕೂಟ (ಬಿಎಎಫ್)



ಬೆಂಗಳೂರಿನಲ್ಲಿ ಸುಮಾರು 1.30 ಕೋಟಿ ಜನಸಂಖ್ಯೆಯಿದ್ದು, 20 ಸಾವಿರ ಪೊಲೀಸರು ಮಾತ್ರ ಇದ್ದಾರೆ. ಅವರ ಮೇಲೆ ಕೆಲಸದ ಒತ್ತಡ ಸಾಕಷ್ಟಿದೆ. ಎಲ್ಲರ ಸುರಕ್ಷತೆ ಕಾಯಲು ಹಾಗೂ ಅಪರಾಧ ತಡೆಯಲು ಕನಿಷ್ಠ 50,000 ಸಿಬ್ಬಂದಿಯಾದರೂ ನಗರಕ್ಕೆ ಬೇಕು.

– ಭಾಸ್ಕರ್‌ರಾವ್, ರೈಲ್ವೆ ಪೊಲೀಸ್ ಎಡಿಜಿಪಿ

ಪ್ರಮುಖ ಅಪರಾಧ ಪ್ರಕರಣ

- ಬೆಂಗಳೂರಿನ ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ 2021ರ ಆಗಸ್ಟ್ 20ರಂದು ಬಿಎಂಟಿಸಿಯ ನಿವೃತ್ತ ನೌಕರ ಶಾಂತರಾಜು (65) ಹಾಗೂ ಅವರ ಪತ್ನಿ ಪ್ರೇಮಲತಾ (61) ಅವರನ್ನು ಹತ್ಯೆ ಮಾಡಲಾಗಿತ್ತು. ಅವರ ಮನೆಯಲ್ಲೇ ಬಾಡಿಗೆಗಿದ್ದ ವ್ಯಕ್ತಿ ಸೇರಿ ನಾಲ್ವರನ್ನು ಬಂಧಿಸಿದ್ದ ಪೊಲೀಸರು, 193 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿದ್ದರು
- ಕೋಣನಕುಂಟೆ ಠಾಣೆ ವ್ಯಾಪ್ತಿಯಲ್ಲಿ 2020ರ ಮೇ 10ರಂದು ನಿವೃತ್ತ ಸರ್ಕಾರಿ ಉದ್ಯೋಗಿ ಗೋವಿಂದಪ್ಪ (65) ಹಾಗೂ ಅವರ ಪತ್ನಿ ಶಾಂತಮ್ಮ ಕೊಲೆ ಮಾಡಲಾಗಿತ್ತು
- ಮಹದೇವಪುರ ಠಾಣೆ ವ್ಯಾಪ್ತಿಯ ಗರುಡಾಚಾರ್ ಪಾಳ್ಯದಲ್ಲಿ 2019ರ ಅಕ್ಟೋಬರ್ 16ರಂದು ಚಂದ್ರೇಗೌಡ (63) ಹಾಗೂ ಅವರ ಪತ್ನಿ ಲಕ್ಷ್ಮಮ್ಮ ಕೊಲೆಯಾಗಿತ್ತು
- ಆರ್.ಎಂ.ಸಿ ಯಾರ್ಡ್ ಠಾಣೆ ವ್ಯಾಪ್ತಿಯಲ್ಲಿರುವ ‘ಉಸುರು ಫೌಂಡೇಷನ್’ ವೃದ್ಧಾಶ್ರಮದ ಶಾಖೆಯಲ್ಲಿ ಕಮಲಮ್ಮ (82) ಅವರನ್ನು ಕತ್ತಲು ಕೋಣೆಯಲ್ಲಿರಿಸಿ ಆಹಾರ ನೀಡದೇ ಕೊಲೆ ಮಾಡಲಾಗಿತ್ತು

ಸೆ.20ಕ್ಕೆ ಸಿಇಟಿ ಫಲಿತಾಂಶ



ಬೆಂಗಳೂರು: ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ನಡೆದಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶ ಇದೇ 20ರಂದು ಪ್ರಕಟವಾಗಲಿದೆ.

‘ಅ.1ರವರೆಗೆ ವೃತ್ತಿಪರ ಕೋರ್ಸ್ ಪದವಿ ಪ್ರವೇಶಕ್ಕೆ ಅವಕಾಶವಿದೆ. ಎಂಜಿನಿಯರಿಂಗ್ ಕೋರ್ಸ್‌ಗಳ ಶುಲ್ಕದ ಬಗ್ಗೆ ಮುಂದಿನ ವಾರ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಶುಕ್ರವಾರ ತಿಳಿಸಿದರು.‘ಫಲಿತಾಂಶ ಪ್ರಕಟವಾದ ನಂತರ ನಿಗದಿತ ವೇಳಾಪಟ್ಟಿಯಂತೆ ಕೌನ್ಸೆಲಿಂಗ್ ನಡೆಸಲಾಗುವುದು. ಶೈಕ್ಷಣಿಕ ವರ್ಷ ಆರಂಭ ಹೆಚ್ಚು ವಿಳಂಬವಾಗಲು ಬಿಡುವುದಿಲ್ಲ’ ಎಂದೂ ಹೇಳಿದರು.

‘ರಾಷ್ಟ್ರೀಯ ಶಿಕ್ಷಣ ನೀತಿ ನೆಪದಲ್ಲಿ ಶುಲ್ಕ ಹೆಚ್ಚಳಕ್ಕೆ ಅವಕಾಶವೇ ಇಲ್ಲ. ಈ ಬಗ್ಗೆ ದೂರುಗಳು ಬಂದರೆ ಆಯಾ ಕಾಲೇಜುಗಳ ವಿರುದ್ಧ ಕ್ರಮ ಜರುಗಿಸಲಾಗುವುದು’ ಎಂದೂ ಅವರು ಎಚ್ಚರಿಸಿದರು. ಫಲಿತಾಂಶಕ್ಕಾಗಿ https://cetonline.karnataka.gov.in ವೆಬ್‌ಸೈಟ್ ಸಂಪರ್ಕಿಸಬಹುದು.

ಆಸ್ತಿ ಮಾರ್ಗಸೂಚಿ ದರ ಇಳಿಕೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದಾಗಿ ಕುಸಿತ ಕಂಡಿರುವ ಸ್ಥಿರಾಸ್ತಿ ಮಾರಾಟ ವಹಿವಾಟಿಗೆ ಉತ್ತೇಜನ ನೀಡಲು ಮುಂದಾಗಿರುವ ಕಂದಾಯ ಇಲಾಖೆ, ರಾಜ್ಯದಾದ್ಯಂತ ಹೆದ್ದಾರಿ ಬದಿಗಳನ್ನು ಹೊರತುಪಡಿಸಿದಂತೆ ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಇಳಿಕೆ ಮಾಡಲು ಸಿದ್ಧತೆ ಆರಂಭಿಸಿದೆ.



ಆರ್. ಅಶೋಕ

ಕಂದಾಯ ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ, ‘ರಾಜ್ಯದಲ್ಲಿ ಸ್ಥಿರಾಸ್ತಿ ನೋಂದಣಿ ಕುಸಿದಿದೆ. ಹೆಚ್ಚಿನವರು ನೇರವಾಗಿ ಕ್ರಯ ಪತ್ರಗಳನ್ನು ನೋಂದಣಿ ಮಾಡುತ್ತಿಲ್ಲ. ಜಿಪಿಎ ಪತ್ರಗಳನ್ನು ನೋಂದಣಿ ಮಾಡುತ್ತಿದ್ದಾರೆ. ಇದರಿಂದ ವರಮಾನ ಸಂಗ್ರಹ ಕುಸಿಯುತ್ತಿದೆ. ಸ್ಥಿರಾಸ್ತಿ ಮಾರ್ಗಸೂಚಿ ದರ ಪರಿಷ್ಕರಣೆ ಮಾಡಿ ನೋಂದಣಿ ಹೆಚ್ಚಳಕ್ಕೆ ಉತ್ತೇಜನ ನೀಡಲು ಯೋಚಿಸಲಾಗಿದೆ’ ಎಂದರು.

ಯಾವ ಪ್ರದೇಶಗಳಲ್ಲಿ ಮಾರ್ಗ ಸೂಚಿ ದರ ಇಳಿಕೆ ಮಾಡಲು ಸಾಧ್ಯವಿದೆ ಎಂಬುದನ್ನು ಪರಿಶೀಲಿಸಿ, ಡಿಸೆಂಬರ್ ಅಂತ್ಯದೊಳಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ. ಈ ಸಂಬಂಧ ಮೌಲ್ಯಮಾಪನ ವರದಿಗಳನ್ನು ಸಿದ್ಧಪಡಿಸಲು ನೋಂದಣಿ ಇಲಾಖೆ ಆಯುಕ್ತರಿಗೆ ನಿರ್ದೇಶನ ನೀಡಲಾಗಿದೆ. ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳ ಸಮೀಪದಲ್ಲಿರುವ ಆಸ್ತಿಗಳ ಮಾರ್ಗಸೂಚಿ ದರ ಹೆಚ್ಚಳಕ್ಕೆ ಇರುವ ಸಾಧ್ಯತೆಗಳ ಬಗ್ಗೆಯೂ ವರದಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ನೋಂದಣಿ ಮತ್ತು ಮುದ್ರಾಂಕ ಶುಲ್ಕವು ರಾಜ್ಯ ಸರ್ಕಾರದ ಪ್ರಮುಖ ಆದಾಯದ ಮೂಲಗಳಲ್ಲಿ ಒಂದಾಗಿದೆ.


‘ರಿಯಲ್ ಎಸ್ಟೇಟ್ ವಹಿವಾಟು ಉತ್ತೇಜಿಸುವುದಕ್ಕಾಗಿ ₹ 45 ಲಕ್ಷದವರೆಗಿನ ಮೌಲ್ಯದ ಫ್ಲ್ಯಾಟ್‌ಗಳ ನೋಂದಣಿ ಶುಲ್ಕವನ್ನು ಕಡಿಮೆ ಮಾಡಲಾಗಿದೆ. ಆದರೂ, ವಹಿವಾಟಿನಲ್ಲಿ ಚೇತರಿಕೆ ಆಗಿಲ್ಲ. ಪ್ರಸಕ್ತ ವರ್ಷವೂ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಸಂಗ್ರಹ ಇಳಿಮುಖವಾಗಿದೆ’ ಎಂದು ಅಶೋಕ ತಿಳಿಸಿದರು.

ದರ ಪರಿಷ್ಕರಣೆ ಹೇಗೆ?

ಉಪ ನೋಂದಣಿ ಕಚೇರಿಗಳ ವ್ಯಾಪ್ತಿಯಲ್ಲಿ ಸ್ಥಿರಾಸ್ತಿ ದರ ಪರಿಷ್ಕರಣೆಗೆ ಪೂರಕವಾಗಿ ಮೌಲ್ಯಮಾಪನ ವರದಿಗಳನ್ನು ಸಿದ್ಧಪಡಿಸಲಾಗುತ್ತದೆ. ಆ ಪ್ರದೇಶದಲ್ಲಿ ಲಭ್ಯವಿರುವ ಮೂಲಸೌಕರ್ಯ, ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾ ಹೆದ್ದಾರಿಗಳು ಹಾದು ಹೋಗಿರುವುದು ಸೇರಿದಂತೆ ವಿವಿಧ ಮಾನದಂಡಗಳ ಆಧಾರದಲ್ಲಿ ಸ್ಥಳೀಯ ಮೌಲ್ಯಮಾಪನ ಸಮಿತಿಗಳು ದರ ಪರಿಷ್ಕರಣೆಗ ಶಿಫಾರಸು ಮಾಡುತ್ತವೆ. ಹಿಂದಿನ ವರ್ಷದಲ್ಲಿ ಆಯಾ ಪ್ರದೇಶದಲ್ಲಿ ನಡೆದಿರುವ ಸ್ಥಿರಾಸ್ತಿ ಮಾರಾಟ ದರವನ್ನೂ ಪರಿಗಣಿಸಿ ನಿರ್ಧಾರಕ್ಕೆ ಬರಲಾಗುತ್ತದೆ.

ಸ್ಥಳೀಯ ಮೌಲ್ಯಮಾಪನ ಸಮಿತಿಗಳು ಸಿದ್ಧಪಡಿಸಿದ ವರದಿಗಳನ್ನು ಪ್ರಕಟಿಸಿ, ಸಲಹೆ ಮತ್ತು ಆಕ್ಷೇಪಣೆಗಳನ್ನು ಆಹ್ವಾನಿಸಲಾಗುತ್ತದೆ. ಕೇಂದ್ರೀಯ ಮೌಲ್ಯಮಾಪನ ಸಮಿತಿಯ(ರಾಜ್ಯಮಟ್ಟ) ಪರಿಶೀಲನೆ ಬಳಿಕ ಅಂತಿಮ ಅಧಿಸೂಚನೆ ಹೊರಡಿಸಲಾಗುತ್ತದೆ. ಪರಿಷ್ಕೃತ ಮಾರ್ಗಸೂಚಿ ದರದ ಆಧಾರದಲ್ಲೇ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ನಿರ್ಧರಿಸಲಾಗುತ್ತದೆ.

ಸರ್ಕಾರಕ್ಕೆ ನೋಂದಣಿ ಆದಾಯ



ಮೈಸೂರು ದಸರಾ ಈ ಬಾರಿಯೂ ಸರಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಹಬ್ಬ ಮೈಸೂರು ದಸರಾ ಉತ್ಸವವನ್ನು ಕಳೆದ ಬಾರಿಯಂತೆ ಈ ವರ್ಷವೂ ಸರಳ ಮತ್ತು ಸಾಂಪ್ರದಾಯಿಕವಾಗಿ ನಡೆಸಲು ಉನ್ನತ ಮಟ್ಟದ ಸಮಿತಿ ನಿರ್ಧರಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ಶುಕ್ರವಾರ ನಡೆದ ಈ ಸಭೆಯಲ್ಲಿ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ಜನಪ್ರತಿನಿಧಿಗಳು ಭಾಗವಹಿಸಿದ್ದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಟಿ.ಸೋಮಶೇಖರ್, ಕೋವಿಡ್ ಇರುವುದರಿಂದ ಕಳೆದ ವರ್ಷದಂತೆಯೇ ಕನಿಷ್ಠ ಜನರ ಭಾಗವಹಿಸುವಿಕೆಯ ಮೂಲಕ ದಸರಾ ಆಚರಿಸಲಾಗುವುದು. ಚಾಮುಂಡಿ ಬೆಟ್ಟದಲ್ಲಿ ದಸರಾ ಉದ್ಘಾಟನೆಯಿಂದ ಹಿಡಿದು ಒಂಬತ್ತು ದಿನಗಳೂ ಎಲ್ಲ ಕಾರ್ಯಕ್ರಮಗಳು ಸರಳವಾಗಿ ನಡೆಯಲಿವೆ ಎಂದರು.

ದಸರಾ ಮಹೋತ್ಸವದ ಉದ್ಘಾಟಕರು ಯಾರು ಎಂಬುದನ್ನು ತೀರ್ಮಾನಿಸುವ ಅಧಿಕಾರ ಮುಖ್ಯಮಂತ್ರಿಯವರಿಗೆ ನೀಡಲಾಗಿದೆ. ಕಳೆದ ವರ್ಷ ಉದ್ಘಾಟನೆ ದಿನ 150, ಒಂಬತ್ತು ದಿನಗಳ ಕಾರ್ಯಕ್ರಮಗಳಲ್ಲಿ ತಲಾ 50 ಮತ್ತು ಅರಮನೆ ಒಳಗೇ ನಡೆದ ಜಂಬೂಸವಾರಿಯಲ್ಲಿ 300 ಜನರಿಗೆ ಭಾಗವಹಿಸಲು ಅವಕಾಶ ನೀಡಲಾಗಿತ್ತು. ಈ ವರ್ಷವೂ ಅಷ್ಟೇ ಜನರ ಭಾಗವಹಿಸುವಿಕೆಗೆ ಒಪ್ಪಿಗೆ ನೀಡಲಾಗಿದೆ. ಸೆಪ್ಟೆಂಬರ್ 15 ರ ಬಳಿಕ ಇನ್ನೊಂದು ಸಭೆ ನಡೆಸಿ, ಕೋವಿಡ್ ಪ್ರಮಾಣ ಕಡಿಮೆಇದ್ದರೆ, ಈಗ ನಿರ್ಧರಿಸಿದ್ದಕ್ಕಿಂತ ಎರಡು ಪಟ್ಟು ಹೆಚ್ಚು ಜನರ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡುವ ಬಗ್ಗೆ ತೀರ್ಮಾನಿಸಲಾಗುವುದು ಎಂದರು.

ಕಳೆದ ದಸರಾದ ಬಾಕಿ ₹8 ಕೋಟಿಯನ್ನು ಪಾವತಿ ಮಾಡಲು ಮುಖ್ಯಮಂತ್ರಿಯವರು ಸೂಚಿಸಿದ್ದಾರೆ. ಈವರ್ಷ ಮೈಸೂರು, ಚಾಮರಾಜ ನಗರ ಹಾಗೂ ಶ್ರೀರಂಗ ಪಟ್ಟಣದಲ್ಲಿ ದಸರಾ ಆಚರಣೆ ನಡೆಸಲು ₹6 ಕೋಟಿ ನೀಡಲು ಒಪ್ಪಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಗೊಂದಲದ ನಡುವೆ ಪಾಲಿಕೆಗಳಿಗೆ ಮತದಾನ

ಹುಬ್ಬಳ್ಳಿ/ಕಲಬುರ್ಗಿ: ಮತದಾರರ ಹೆಸರು ಕೈಬಿಟ್ಟಿದ್ದಕ್ಕೆ ಆಕ್ರೋಶ, ವಾಗ್ವಾದದ ನಡುವೆ ಶುಕ್ರವಾರ ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆಯ 82 ವಾರ್ಡ್‌ಗಳಲ್ಲಿ ಮತದಾನ ನಡೆಯಿತು. ಕಲಬುರ್ಗಿ ಮಹಾನಗರ ಪಾಲಿಕೆಯ 55 ವಾರ್ಡ್‌ಗಳಿಗೆ ಮತದಾನ ನಡೆದಿದ್ದು,ಅಲ್ಲಲ್ಲಿ ನಕಲಿ ಮತದಾನದ ಆರೋಪ ಕೇಳಿಬಂದಿದೆ.

ಹುಬ್ಬಳ್ಳಿಯ ಗಣೇಶ ಪೇಟೆ, ಗಾರ್ಡನ್ ಪೇಟೆಯಲ್ಲಿ ಗುಂಪು ಚದುರಿಸಲು ಪೊಲೀಸರು ಲಾಠಿ ಬೀಸಿದರು. ಮತದಾರರ ಪಟ್ಟಿಯಿಂದ ಹೆಸರು ಕೈಬಿಟ್ಟಿದ್ದು, ಬೇರೆ ವಾರ್ಡ್‌ಗೆ ವರ್ಗಾವಣೆ ಕಾರಣ ಗೊಂದಲ ಉಂಟಾಯಿತು. ಒಟ್ಟಾರೆ ಶೇ53.81ರಷ್ಟು ಮತದಾನವಾಗಿದೆ. ಮತದಾನ ನೀರಸವಾಗಿತ್ತು. ಒಟ್ಟು 420 ಅಭ್ಯರ್ಥಿಗಳು ಕಣದಲ್ಲಿದ್ದು ಸೆ.6ರಂದು ಮತಎಣಿಕೆ ನಡೆಯಲಿದೆ.

ಪೊಲೀಸ್ ಸಾವು: ಚುನಾವಣೆ ಕರ್ತವ್ಯ ನಿರತ ಸಿಬ್ಬಂದಿಗೆ ಊಟ ಒಯ್ಯುತ್ತಿದ್ದ ಧಾರವಾಡದ ವಿದ್ಯಾಗಿರಿ ಪೊಲೀಸ್ ಠಾಣೆ ಕಾನ್‌ಸ್ಟೆಬಲ್ ನಿಂಗಪ್ಪ ಭೂಸಣ್ಣವರ (28) ಬೈಕ್– ಟ್ರಕ್ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ನ್ಯೂಜೆರ್ಸಿ: ‘ಐಡಾ’ ಪರಿಣಾಮ ಮಳೆ, 45ಕ್ಕೂ ಹೆಚ್ಚು ಸಾವು

ನ್ಯೂಯಾರ್ಕ್ (ಎ.ಪಿ): ಅಮೆರಿಕದ ನ್ಯೂಯಾರ್ಕ್‌ನ ಈಶಾನ್ಯ ಭಾಗದಲ್ಲಿ ‘ಐಡಾ’ ಚಂಡಮಾರುತ ಹಾಗೂ ನಂತರದ ಧಾರಾಕಾರ ಮಳೆಯ ಪರಿಣಾಮಗಳಿಂದ 45ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ.

ನ್ಯೂಜೆರ್ಸಿಯಲ್ಲಿ 23 ಮಂದಿ ಮೃತಪಟ್ಟಿದ್ದಾರೆ ಎಂದು ಗವರ್ನರ್ ಫಿಲ್ ಮರ್ಫಿ ತಿಳಿಸಿದ್ದಾರೆ. ನ್ಯೂಯಾರ್ಕ್ ನಗರದಲ್ಲೇ 13 ಜನ ಸತ್ತಿದ್ದು, ನೆಲಮಹಡಿಯಲ್ಲಿ ನೀರು ಆವರಿಸಿ ಮೂವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಒಳ ಉಡುಪಿನಲ್ಲಿ ರೈಲಿನಲ್ಲಿ ಅಡ್ಡಾಡಿದ ಜೆಡಿಯು ಶಾಸಕ

ನವದೆಹಲಿ: ಬಿಹಾರದ ಜೆಡಿಯು ಶಾಸಕ ಗೋಪಾಲ್ ಮಂಡಲ್ ರೈಲಿನಲ್ಲಿ ಒಳ ಉಡುಪು ಧರಿಸಿ ಓಡಾಡುತ್ತಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು, ವಿರೋಧ ಪಕ್ಷಗಳು ಶಾಸಕರ ನಡವಳಿಕೆಯನ್ನು ಟೀಕಿಸಿವೆ.

ಪಟ್ನಾ–ನವದೆಹಲಿ ನಡುವೆ ಸಂಚರಿಸುವ ತೇಜಸ್ ರಾಜಧಾನಿ ರೈಲಿನಲ್ಲಿ ಗುರುವಾರ ಇದು ನಡೆದಿದೆ. ಒಳ ಉಡುಪು ಧರಿಸಿದ್ದ ಕಾರಣಕ್ಕೆ ಪ್ರಯಾಣಿಕರೊಬ್ಬರು ಪ್ರಶ್ನಿಸಿದಾಗ, ಶಾಸಕರು ಸಹಪ್ರಯಾಣಿಕರೊಂದಿಗೆ ವಾಗ್ವಾದ ನಡೆಸಿದ್ದಾರೆ. ರೈಲ್ವೆ ಪೊಲೀಸ್ ಪಡೆ ಮಧ್ಯ ಪ್ರವೇಶಿಸಿ ವಾಗ್ವಾದ ತಡೆದಿದ್ದಾರೆ. ‘ನನ್ನ ಹೊಟ್ಟೆ ಕೆಟ್ಟಿತ್ತು. ಹಾಗಾಗಿ ಅವಸರದಲ್ಲಿ ಒಳ ಉಡುಪಿನಲ್ಲೇ ಶೌಚಾಲಯಕ್ಕೆ ತೆರಳಿದೆ’ ಎಂದು ಮಂಡಲ್ ಹೇಳಿದ್ದಾರೆ.



ಗೋಪಾಲ್ ಮಂಡಲ್



ದಲಿತ ಕೇರಿಗಳಲ್ಲಿ ಪೇಜಾವರ ಶ್ರೀ ಪಾದಯಾತ್ರೆ

ಬೆಂಗಳೂರು: ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಗವಿಪುರ, ಗುಟ್ಟಹಳ್ಳಿ, ಕೆ.ಜಿ.ನಗರದ ದಲಿತ ಕೇರಿಗಳಲ್ಲಿ ಪಾದಯಾತ್ರೆ ನಡೆಸಿದರು.

ಚಿತ್ರದುರ್ಗದ ಮಾದಾರ ಚೆನ್ನಯ್ಯ ಸ್ವಾಮೀಜಿ ಜೊತೆ ದಲಿತ ಕೇರಿಗಳಲ್ಲಿ ಪಾದಯಾತ್ರೆ ನಡೆಸಿದ ಅವರು, ವಿಶ್ವ ಹಿಂದೂ ಪರಿಷತ್ ಆಯೋಜಿಸಿದ್ದ ಧರ್ಮಸಭೆಯಲ್ಲಿ ಭಾಗವಹಿಸಿದ್ದರು.

ಬಡಾವಣೆಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ತಳಿರು ತೋರಣಗಳಿಂದ ಬೀದಿಗಳನ್ನು ಅಲಂಕರಿಸಲಾಗಿತ್ತು. ಕೃಷ್ಣವೇಷ ತೊಟ್ಟ ಮಕ್ಕಳು ಸ್ವಾಮೀಜಿಗಳನ್ನು ಬರ ಮಾಡಿಕೊಂಡರು. ಮಹಿಳೆಯರು ಸ್ವಾಮೀಜಿ ಅವರು ಪಾದ ತೊಳೆದು ಹೂಮಳೆಗರೆದರು.

ಸಾಮೂಹಿಕ ರಾಮ–ಕೃಷ್ಣ ಭಜನೆ ನಡೆಯಿತು. ತಮಿಳು ಭಾಷಿಕರೇ ಹೆಚ್ಚಿರುವ ಬಡಾವಣೆಗಳಲ್ಲಿ ಸ್ವಾಮೀಜಿ ತಮಿಳಿನಲ್ಲೇ ಮಾತನಾಡಿದರು. ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ದಲಿತ ಸಮುದಾಯದವರು ಹೆಚ್ಚಿರುವ ಬಡಾವಣೆಗಳಲ್ಲಿ ಸಭೆ ನಡೆಸಲಾಗುತ್ತಿದೆ ಎಂದು ಮಠದ ಸಿಬ್ಬಂದಿ ಸ್ಪಷ್ಟಪಡಿಸಿದರು.

ಪೇಜಾವರದ ಈ ಹಿಂದಿನ ಶ್ರೀಗಳಾದ ವಿಶ್ವೇಶತೀರ್ಥ ಸ್ವಾಮೀಜಿ 2009ರಲ್ಲಿ ಮೈಸೂರಿನಲ್ಲಿ ಮೊದಲ ಬಾರಿಗೆ ದಲಿತ ಕೇರಿಗಳಲ್ಲಿ ಪಾದಯಾತ್ರೆ ನಡೆಸಿದ್ದರು.

ರಾಜೀವ್ ಹೆಸರು ಕೈಬಿಡಲು ಸಿಎಂಗೆ ಪತ್ರ

ಬೆಂಗಳೂರು: ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನ ಹೆಸರು ತೆಗೆದು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ರಾಷ್ಟ್ರೀಯ ಉದ್ಯಾನ ಎಂಬ ಹೆಸರು ಇಡಬೇಕು ಎಂದು ಮೈಸೂರು ಸಂಸದ ಪ್ರತಾಪ್ ಸಿಂಹ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪತ್ರ ಬರೆದಿದ್ದಾರೆ.

‘ಪತ್ರ ಬಂದಿದೆ ಆದರೆ ಅದನ್ನು ಇನ್ನೂ ನೋಡಿಲ್ಲ’ ಎಂದು ಸುದ್ದಿಗಾರರ ಪ್ರಶ್ನೆಗೆ ಬೊಮ್ಮಾಯಿ ಪ್ರತಿಕ್ರಿಯಿಸಿದರು.

31 ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ

ಒಂದನೇ ಪುಟದಿಂದ ....

ವಿ. ಉಷಾ– ಪೆಂಡ್ಲಿವಾರಹಳ್ಳಿ–ಚಿಕ್ಕಬಳ್ಳಾಪುರ. ಬಿ.ಎ. ಜಮುನಾ–ಹೆರೋಹಳ್ಳಿ, ಬೆಂಗಳೂರು ಉತ್ತರ. ಎಡ್ವರ್ಡ್ ಡಿಸೋಜಾ– ಕಟ್ಟದಬೈಲು, ದಕ್ಷಿಣ ಕನ್ನಡ. ವಿ.ಜಿ. ವೆಂಕಟಾಚಲಯ್ಯ–ಗೋವಿಂದಪುರ, ಬೆಂಗಳೂರು ಗ್ರಾಮಾಂತರ. ಮಹಾದೇವ–ಮುದುಕಿ ಚಿಕ್ಕನಹುಂಡಿ, ಮೈಸೂರು. ಸ್ವಾಮಿ–ಅಲಕೆರೆ, ಮಂಡ್ಯ. ಎಚ್.ಎಂ. ಮಂಗಳ–ಕಬ್ಬಳ, ದಾವಣಗೆರೆ. ನಾರಾಯಣಪ್ಪ ಚಿತ್ರಗಾರ–ಮಾದಿನೂರು, ಕೊಪ್ಪಳ. ಪ್ರೌಢಶಾಲಾ ಶಿಕ್ಷಕರು: ಕಿಶನ್ ರಾವ್–ಹನುಮಸಾಗರ, ಕೊಪ್ಪಳ. ಆರ್.ಯು. ನವೀನ್‌ಕುಮಾರ್– ಅಲೀಪುರ, ಚಿಕ್ಕಬಳ್ಳಾಪುರ. ಜಿ. ರಂಗನಾಥ–ರೇಖಲಗೆರೆ, ಚಿತ್ರದುರ್ಗ. ಎಚ್.ಎನ್. ಶಿವಕುಮಾರ್–ಕಳಸ, ಚಿಕ್ಕಮಗಳೂರು. ಶಿವಲಿಂಗ–ಸಂತಪುರ, ಬೀದರ್. ಸದಾಶಿವಯ್ಯ ಎಸ್. ಪಲ್ಲೇದ– ಕುಶಾಲನಗರ, ಕೊಡಗು. ಶ್ರೀಕಾಂತ ರಾಮ ಪಟಗಾರ–ಕೋಣಂದೂರು, ಶಿವಮೊಗ್ಗ. ಎಂ.ಎಸ್. ನಟರಾಜು– ಹೆಗ್ಗೆರೆ, ತುಮಕೂರು. ಸಪನಾ ಅನಿಗೋಳ–ಮಹಾಲಿಂಗಪುರ, ಬಾಗಲಕೋಟೆ. ಬಸವರಾಜ ಅವಟಿ–ಪೀರಾಪುರ, ವಿಜಯಪುರ. ಕೆ. ಸಂಗೀತಾ– ಜಿ.ಬಿ. ಸರಗೂರು, ಹೆಗ್ಗಡದೇವನ ಕೋಟೆ, ಮೈಸೂರು.



ಸಚಿವ ಅಶ್ವತ್ಥನಾರಾಯಣ ಅವರು ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದವರ ಜೊತೆ ಸಮಾಲೋಚನೆ ನಡೆಸಿದರು

ಯುವಕರಿಗೆ ಸರ್ಕಾರದಿಂದಲೇ ಕೌಶಲ ತರಬೇತಿ: ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯುವಕರಿಗೆ ಸರ್ಕಾರದ ವತಿಯಿಂದಲೇ ಕೌಶಲ ತರಬೇತಿ ನೀಡಿ ಕೆಲಸವನ್ನೂ ಕೊಡಿಸಲಾಗುತ್ತಿದೆ’ ಎಂದು ಕೌಶಲಾಭಿವೃದ್ಧಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಮಲ್ಲೇಶ್ವರದಲ್ಲಿ ಆಯೋಜನೆಯಾಗಿದ್ದ ಉದ್ಯೋಗ ಮೇಳಕ್ಕೆ ಚಾಲನೆ ನೀಡಿ ಶುಕ್ರವಾರ ಮಾತನಾಡಿದರು.

‘ರಾಕೈಗಾರಿಕೆಗಳ ಬೇಡಿಕೆಗೆ ಅನುಗುಣವಾಗಿ ಮಾನವ ಸಂಪನ್ಮೂಲ ಒದಗಿಸಬೇಕೆಂಬುದು ಸರ್ಕಾರದ ಉದ್ದೇಶ. ಹೀಗಾಗಿ ಉದ್ಯೋಗ ಆಕಾಂಕ್ಷಿಗಳಿಗೆ ಸೂಕ್ತ ತರಬೇತಿ, ಭಾಷಾ ಜ್ಞಾನ, ಕೌಶಲ ಕಲಿಸಿಕೊಡಲು ಒತ್ತು ನೀಡಲಾಗುತ್ತದೆ’ ಎಂದರು.

‘ಈ ಮೇಳದಲ್ಲಿ 2,000ಕ್ಕೂ ಹೆಚ್ಚು ಉದ್ಯೋಗಗಳು ಲಭ್ಯ ಇವೆ. 1,300 ಮಂದಿಯಷ್ಟೇ ಹೆಸರು ನೋಂದಾಯಿಸಿಕೊಂಡಿದ್ದಾರೆ. 30 ಕಂಪನಿಗಳು ನೇರವಾಗಿ ಹಾಗೂ 12 ಕಂಪನಿಗಳು ಆನ್‌ಲೈನ್ ಮೂಲಕ ನೇಮಕಾತಿ ಮಾಡಿಕೊಳ್ಳುತ್ತಿವೆ’ ಎಂದರು.

ಎಬಿಪಿ–ಸಿ ವೋಟರ್ ಸಮೀಕ್ಷೆ: ಉತ್ತರ ಪ್ರದೇಶ, ಉತ್ತರಾಖಂಡ, ಗೋವಾ, ಮಣಿಪುರ ಬಿಜೆಪಿಗೆ

‘ಕೈ’ ತಪ್ಪುವ ಪಂಜಾಬ್ ಎಎಪಿ ತೆಕ್ಕೆಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನಸಭೆಗೆ ಮುಂದಿನ ವರ್ಷ ಚುನಾವಣೆ ನಡೆಯಲಿರುವ ಐದು ರಾಜ್ಯಗಳಲ್ಲಿ ನಡೆಸಲಾದ ಸಮೀಕ್ಷೆಯ ವರದಿಯು ಕಾಂಗ್ರೆಸ್ ಪಕ್ಷಕ್ಕೆ ಭಾರಿ ಆಘಾತಕಾರಿಯಾಗಿದೆ. ಈಗ ಅಧಿಕಾರದಲ್ಲಿರುವ ಪಂಜಾಬ್‌ನಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳಲಿದೆ. ಎಎಪಿ ಅಲ್ಲಿ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ. ಉತ್ತರ ಪ್ರದೇಶ, ಗೋವಾ, ಮಣಿಪುರ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರ ಉಳಿಸಿಕೊಳ್ಳಲಿದೆ ಎಂದು ಎಬಿಪಿ ಮತ್ತು ಸಿ-ವೋಟರ್ ನಡೆಸಿದ ಸಮೀಕ್ಷೆಯು ಹೇಳಿದೆ.

ಪಂಜಾಬ್‌ನಲ್ಲಿ ಯಾವ ಪಕ್ಷಕ್ಕೂ ಸರಳ ಬಹುಮತ ದೊರೆಯದು. ಆದರೆ, ಎಎಪಿಗೆ ಕೆಲವು ಸ್ಥಾನಗಳಷ್ಟೇ ಕೊರತೆ ಆಗಬಹುದು ಎಂದು ಸಮೀಕ್ಷೆ ಹೇಳಿದೆ.

ಗೋವಾದಲ್ಲಿ ಕಾಂಗ್ರೆಸ್ ಮೂರನೇ ಸ್ಥಾನಕ್ಕೆ ಕುಸಿಯಲಿದೆ. ಪಂಜಾಬ್‌ನಲ್ಲಿ ಕಾಂಗ್ರೆಸ್‌ಗೆ ಎರಡನೇ ಸ್ಥಾನ ದೊರೆಯಲಿದೆ. ಮುಂದಿನ ವರ್ಷ ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇರುವುದು ಪಂಜಾಬ್‌ನಲ್ಲಿ ಮಾತ್ರ.

ಉತ್ತರ ಪ್ರದೇಶ (403 ಸ್ಥಾನಗಳು)	
ಬಿಜೆಪಿ	259-267
ಸಮಾಜವಾದಿ ಪಾರ್ಟಿ	109-117
ಬಿಎಸ್‌ಪಿ	12-16
ಕಾಂಗ್ರೆಸ್	3-7
ಇತರೆ	6-10
ಪಂಜಾಬ್ (117 ಸ್ಥಾನಗಳು)	
ಎಎಪಿ	51-57
ಕಾಂಗ್ರೆಸ್	38-46
ಅಕಾಲಿ ದಳ	16-24
ಉತ್ತರಾಖಂಡ (70 ಸ್ಥಾನಗಳು)	
ಬಿಜೆಪಿ	44-48
ಕಾಂಗ್ರೆಸ್	19-23
ಎಎಪಿ	0-4
ಇತರೆ	0-2
ಗೋವಾ (40 ಸ್ಥಾನಗಳು)	
ಬಿಜೆಪಿ	22-26
ಎಎಪಿ	4-8
ಕಾಂಗ್ರೆಸ್	3-7
ಇತರೆ	3-7
ಮಣಿಪುರ (60 ಸ್ಥಾನಗಳು)	
ಬಿಜೆಪಿ	32-36
ಕಾಂಗ್ರೆಸ್	18-22
ಎನ್‌ಪಿಎಲ್	2-6
ಇತರೆ	0-4

ಉತ್ತರ ಪ್ರದೇಶದಲ್ಲಿ ಬಿಜೆಪಿಯ ಸ್ಥಾನಗಳ ಸಂಖ್ಯೆ ಕಡಿಮೆ ಆಗಲಿದೆ. 2017ರಲ್ಲಿ ಇಲ್ಲಿ 312 ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿತ್ತು. ಮುಂದಿನ ವರ್ಷದ ಚುನಾವಣೆಯಲ್ಲಿ ಬಿಜೆಪಿಗೆ 50 ಸ್ಥಾನಗಳು ಕಡಿಮೆಯಾಗಬಹುದು. 259–267 ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಬಹುದು. ಸಮಾಜವಾದಿ ಪಕ್ಷವು ತನ್ನ ಸ್ಥಾನಗಳ ಸಂಖ್ಯೆಯನ್ನು ಈಗಿನ 47ರಿಂದ 109–117ಕ್ಕೆ ಹೆಚ್ಚಿಸಬಹುದು ಎಂದು ಸಮೀಕ್ಷೆ ಅಂದಾಜಿಸಿದೆ.

19 ಶಾಸಕರನ್ನು ಹೊಂದಿರುವ ಬಿಎಸ್‌ಪಿ 12–16 ಸ್ಥಾನಗಳಿಗೆ ಕುಸಿಯಲಿದೆ. ಕಾಂಗ್ರೆಸ್ ಇನ್ನೂ ದುರ್ಬಲವಾಗಿ 3–7 ಕ್ಷೇತ್ರಗಳನ್ನು ಗೆಲ್ಲಲಷ್ಟೇ ಶಕ್ತವಾಗಲಿದೆ. ಪಂಜಾಬ್‌ನಲ್ಲಿ ಎಎಪಿಗೆ 51–57 ಕ್ಷೇತ್ರಗಳಲ್ಲಿ ಗೆಲುವು ದೊರೆಯಬಹುದು. 117 ಸದಸ್ಯ ಬಲದ ವಿಧಾನಸಭೆಯಲ್ಲಿ ಸರಳ ಬಹುಮತಕ್ಕೆ 59 ಶಾಸಕರ ಬೆಂಬಲ ಬೇಕು.

ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ನಡುವೆ ತೀವ್ರ ಭಿನ್ನಮತ ಇದೆ. ಹಾಗಾಗಿ, 2017ರಲ್ಲಿ 77 ಕ್ಷೇತ್ರಗಳಲ್ಲಿ ಗೆದ್ದಿದ್ದ ಕಾಂಗ್ರೆಸ್ 38–46 ಸ್ಥಾನಗಳಿಗೆ ಕುಸಿಯಬಹುದು ಎನ್ನಲಾಗಿದೆ. ಉತ್ತರಾಖಂಡದಲ್ಲಿ ಅಧಿಕಾರ ಹಿಡಿಯಬಹುದು ಎಂಬ ನಿರೀಕ್ಷೆ ಕಾಂಗ್ರೆಸ್‌ಗೆ ಇದೆ. ಈಗಿನ ಬಿಜೆಪಿ ನೇತೃತ್ವದ ಸರ್ಕಾರವು ಇಬ್ಬರು ಮುಖ್ಯಮಂತ್ರಿಗಳನ್ನು ಬದಲಾಯಿಸಿದೆ. ಆದರೆ ಕಾಂಗ್ರೆಸ್‌ನ ನಿರೀಕ್ಷೆ ಈಡೇರುವ ಸಾಧ್ಯತೆ ಕ್ಷೀಣ. 70 ಸದಸ್ಯರ ವಿಧಾನಸಭೆಯಲ್ಲಿ ಬಿಜೆಪಿ 44–48 ಕ್ಷೇತ್ರಗಳನ್ನು ಗೆಲ್ಲಬಹುದು. ಕಾಂಗ್ರೆಸ್‌ಗೆ 19–23 ಕ್ಷೇತ್ರಗಳು ದೊರೆಯಬಹುದು ಎಂದು ಸಮೀಕ್ಷೆಯು ಭವಿಷ್ಯ ನುಡಿದಿದೆ.

ಗೋವಾದಲ್ಲಿ ಬಿಜೆಪಿ 22–26 ಕ್ಷೇತ್ರಗಳನ್ನು ಗೆಲ್ಲಬಹುದು. ಅಲ್ಲಿನ ಒಟ್ಟು ಸದಸ್ಯ ಬಲ 40. 2017ರಲ್ಲಿ ಕಾಂಗ್ರೆಸ್ ಪಕ್ಷವು ಅತಿ ದೊಡ್ಡ ಪಕ್ಷವಾಗಿ ಹೊಮ್ಮಿತ್ತು. ಆದರೆ, ಪಕ್ಷಾಂತರದಿಂದಾಗಿ ಬಿಜೆಪಿ ಅಧಿಕಾರಕ್ಕೆ ಏರಿತ್ತು. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ 3ನೇ ಸ್ಥಾನಕ್ಕೆ ಕುಸಿಯಲಿದೆ. ಎಎಪಿ ಎರಡನೇ ಸ್ಥಾನಕ್ಕೆ ಬರಲಿದೆ ಎಂದು ಸಮೀಕ್ಷೆ ಹೇಳಿದೆ.

ಪ್ರಶಸ್ತಿಗೆ ಕಲ್ಯಾಣ ನಿಧಿ ಹಣ ಬಳಕೆ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿರುವ 31 ಶಿಕ್ಷಕರಿಗೆ ನಗದು ಪುರಸ್ಕಾರ ಹಾಗೂ ಅವರ ಶಾಲೆಗಳ ಅಭಿವೃದ್ಧಿಗೆ ಅನುದಾನ ನೀಡಲು ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಕಲ್ಯಾಣ ನಿಧಿಯ ಹಣ ಬಳಸಲು ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಅಖಿಲ ಭಾರತ ಶಿಕ್ಷಕರ ಫೆಡರೇಷನ್ ಆಕ್ಷೇಪಿಸಿದೆ.

ಈ ಕುರಿತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರಿಗೆ ಪತ್ರ ಬರೆದಿರುವ ಫೆಡರೇಷನ್ ಉಪಾಧ್ಯಕ್ಷ ಬಸವರಾಜ ಗುರಿಕಾರ, 'ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಕಲ್ಯಾಣ ನಿಧಿಯು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಹಣದಿಂದ ಸ್ಥಾಪಿತವಾದ ನಿಧಿ. ಇಂತಹ ನಿಧಿಯಿಂದ ಸರ್ಕಾರದಿಂದ ನೀಡುವ ಪ್ರಶಸ್ತಿಗೆ ನಗದು ಬಹುಮಾನ ನೀಡಲು ಹಾಗೂ ಶಾಲಾಭಿವೃದ್ಧಿಗೆ ಬಳಸುವುದು ಸರ್ಕಾರಕ್ಕೆ ಶೋಭೆ ತರುವುದಿಲ್ಲ. ಸರ್ಕಾರದ ಖಜಾನೆಯಿಂದಲೇ ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ನೀಡುವ ತಲಾ ₹10 ಸಾವಿರ ಮತ್ತು ಅವರ ಶಾಲೆಗಳ ಅಭಿವೃದ್ಧಿಗೆ ತಲಾ ₹50 ಸಾವಿರ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ಕೋರಿದ್ದಾರೆ.

ಪ್ರಶಸ್ತಿ ಪಟ್ಟಿಯನ್ನು ಶುಕ್ರವಾರ ಪ್ರಕಟಿಸಿರುವ ಸಾರ್ವಜನಿಕ ಶಿಕ್ಷಣ ಇಲಾಖೆ, ಪ್ರಶಸ್ತಿಯ ಮೊತ್ತವನ್ನು ಕಲ್ಯಾಣ ನಿಧಿಯಿಂದ ಭರಿಸಬೇಕು ಎಂದು ಆದೇಶಿಸಿದೆ.

ಚುನಾವಣೆ ಬಳಿಕವೇ ಲಿಂಗಾಯತ ಧರ್ಮದ ಹೋರಾಟ: ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರ ವಿಧಾನಸಭಾ ಚುನಾವಣೆಯ ಬಳಿಕ ಜತೆಗೂಡಿ ಸಾಮೂಹಿಕ ನಾಯಕತ್ವದಲ್ಲಿ ಪ್ರತ್ಯೇಕ ಲಿಂಗಾಯತ ಧರ್ಮಕ್ಕಾಗಿ ಹೋರಾಟ ನಡೆಸಲಾಗುವುದು ಎಂದು ಶಾಸಕ ಎಂ.ಬಿ. ಪಾಟೀಲ ಹೇಳಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರತ್ಯೇಕ ಧರ್ಮದ ಹೋರಾಟವನ್ನು ಈಗ ಕೈಗೆತ್ತಿಕೊಂಡರೆ ಅದಕ್ಕೆ ರಾಜಕೀಯ ಬಣ್ಣ ನೀಡಿ, ಅಪಪ್ರಚಾರ ಮಾಡುವ ಸಾಧ್ಯತೆ ಇದೆ. ಈ ಕಾರಣಕ್ಕಾಗಿ ಚುನಾವಣೆಯ ಬಳಿಕ ಹೋರಾಟ ಪುನರಾರಂಭಿಸಲಾಗುವುದು ಎಂದು ಇತ್ತೀಚೆಗೆ ಹೇಳಿಕೆ ನೀಡಿದ್ದೆ. ಪ್ರತ್ಯೇಕ ಹೋರಾಟದ ಕುರಿತು ನಾನು ಎಲ್ಲಿಯೂ ಮಾತನಾಡಿಲ್ಲ' ಎಂದು ತಮ್ಮ ಹಿಂದಿನ ಪತ್ರಿಕಾ ಹೇಳಿಕೆಯ ವಿಡಿಯೊ ತುಣುಕು ಪ್ರದರ್ಶಿಸಿದರು.


ಎಂ.ಬಿ. ಪಾಟೀಲ

ತಾವು ಹೋರಾಟದ ನಾಯಕತ್ವ ವಹಿಸುವುದಿಲ್ಲ. ಪಂಚ ಪೀಠಾಧೀಶರು, ವಿರಕ್ತ ಮಠಗಳು, ವೀರಶೈವ ಮಹಾಸಭಾ, ಜಾಗತಿಕ ಲಿಂಗಾಯತ ಮಹಾಸಭಾ ಸೇರಿದಂತೆ ಸಾಮೂಹಿಕ ನಾಯಕತ್ವದಲ್ಲಿ ಹೋರಾಟ ನಡೆಯಲಿದೆ. ವೀರಶೈವರೂ ಸೇರಿದಂತೆ 99 ಉಪ ಪಂಗಡಗಳನ್ನೂ ಸೇರಿಸಿ ಲಿಂಗಾಯತ ಧರ್ಮದ ಮಾನ್ಯತೆ ನೀಡುವಂತೆ ಹಿಂದೆ ಹೋರಾಟ ಆರಂಭಿಸಲಾಗಿತ್ತು. ಅದೇ ಬೇಡಿಕೆಯ ಆಧಾರದಲ್ಲಿ ಹೋರಾಟ ಮುಂದುವರಿಯಲಿದೆ ಎಂದರು.

'ಎಲ್ಲರೂ ಒಗ್ಗೂಡಿ ಚರ್ಚಿಸಿ, ನಮ್ಮ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಂಡು ಮುಂದಕ್ಕೆ ಸಾಗುತ್ತೇವೆ ಎಂದು ಹೇಳಿದ್ದೆ. ಅದನ್ನು ತಪ್ಪಾಗಿ ಬಿಂಬಿಸಲಾಗಿದೆ. ನಾವು ಒಗ್ಗೂಡಿದರೆ ಯಾರಿಗೆ ಮತ್ತು ಏಕೆ ಸಮಸ್ಯೆ ಆಗುತ್ತದೆ ಎಂಬುದು ತಿಳಿದಿಲ್ಲ. ನಮ್ಮ ನಡುವಿನ ತಾತ್ವಿಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡು, ಒಗ್ಗೂಡಲು ಎಷ್ಟು ಸಮಯ ಬೇಕಾಗಬಹುದು ಎಂಬುದು ಗೊತ್ತಿಲ್ಲ' ಎಂದು ಹೇಳಿದರು.

ಹಿಂದೆ ವೀರಶೈವ ಮಹಾಸಭಾದವರೇ ಪ್ರತ್ಯೇಕ ಲಿಂಗಾಯತ ಧರ್ಮಕ್ಕೆ ಬೇಡಿಕೆ ಸಲ್ಲಿಸಿದ್ದರು. ಆದರೆ, ಮನವಿಯಲ್ಲಿದ್ದ ತಾಂತ್ರಿಕ ತೊಡಕಿನಿಂದ ಅದು ಈಡೇರಿರಲಿಲ್ಲ. ಬಳಿಕ ತಾವು ಹೋರಾಟ ಕೈಗೆತ್ತಿಕೊಂಡಿದ್ದು. ಲಿಂಗಾಯತ ಪ್ರತ್ಯೇಕ ಧರ್ಮದ ಬೇಡಿಕೆ ಈಡೇರಿ, ಅಲ್ಪಸಂಖ್ಯಾತ ಸ್ಥಾನಮಾನ ದೊರಕಿದ್ದರೆ ಈಗ ಹಿಂದುಳಿದ ವರ್ಗಗಳ 2–ಎ ಮೀಸಲಾತಿ ಕೇಳುವ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ ಎಂದರು.

ಪ್ರಥಮ ಪಿಯು ಭೌತಿಕ ತರಗತಿ ಆರಂಭಕ್ಕೆ ಸೂಚನೆ

ಬೆಂಗಳೂರು: ರಾಜ್ಯದ ಎಲ್ಲ ಪದವಿ ಪೂರ್ವ ಕಾಲೇಜುಗಳಲ್ಲಿ ಸೆ.6ರಿಂದ ಕಡ್ಡಾಯವಾಗಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಭೌತಿಕ ತರಗತಿ ಆರಂಭಿಸಬೇಕು, ಪ್ರತಿದಿನದ ವಿದ್ಯಾರ್ಥಿಗಳ ಹಾಜರಾತಿಯ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ದಾಖಲಿಸಬೇಕು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಸೂಚನೆ ನೀಡಿದೆ.

ಈ ಸಂಬಂಧ ಶುಕ್ರವಾರ ಸುತ್ತೋಲೆ ಹೊರಡಿಸಿರುವ ಇಲಾಖೆಯು, ಕಳೆದ ಆ.23ರಿಂದಲೇ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಭೌತಿಕ ತರಗತಿ ಆರಂಭಿಸಲು ಸರ್ಕಾರದ ಆದೇಶದಂತೆ ಅನುಮತಿ ನೀಡಲಾಗಿದ್ದರೂ ಪ್ರಥಮ ಪಿಯು ದಾಖಲಾತಿ ಪ್ರಕ್ರಿಯೆ ನಡೆಯುತ್ತಿದ್ದ ಕಾರಣ ಸಾಕಷ್ಟು ಕಾಲೇಜುಗಳಲ್ಲಿ ಭೌತಿಕ ತರಗತಿಗಳು ಆರಂಭವಾಗಿಲ್ಲ.

ಆಯಾ ಜಿಲ್ಲಾ ಉಪನಿರ್ದೇಶಕರು ಕಾಲೇಜುಗಳಿಗೆ ಭೇಟಿ ನೀಡಿ ತರಗತಿ ಆರಂಭಿಸಲು ಕ್ರಮ ಕೈಗೊಳ್ಳಬೇಕು ಎಂದು ಪಿಯು ಇಲಾಖೆಯ ನಿರ್ದೇಶಕಿ ಆರ್. ಸ್ನೇಹಲ್ ಸೂಚನೆ ನೀಡಿದ್ದಾರೆ.

ಮೈಸೂರಿನಲ್ಲಿ ಮತ್ತೊಂದು ಅತ್ಯಾಚಾರ ಪ್ರಕರಣ

ಪ್ರಜಾವಾಣಿ ವಾರ್ತೆ

ಮೈಸೂರು: ಯುವತಿಯ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣ ಮಾಸುವ ಮುನ್ನವೇ ಮೈಸೂರಿನಲ್ಲಿ ಶುಕ್ರವಾರ ಮಧ್ಯಾಹ್ನ ಮತ್ತೊಂದು ಅತ್ಯಾಚಾರ ಪ್ರಕರಣ ನಡೆದಿದ್ದು, ಆರೋಪಿ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ.

'ಇಲ್ಲಿನ ಆರ್.ಎಸ್.ನಾಯ್ಡು ನಗರದ ವಸತಿ ನಿಲಯವೊಂದಕ್ಕೆ ಶುಕ್ರವಾರ ಮಧ್ಯಾಹ್ನ ನುಗ್ಗಿದ ಆರೋಪಿಯು ಯುವತಿಯ ಕೈಗೆ ಚಾಕುವಿನಿಂದ ಹಲ್ಲೆ ಮಾಡಿ, ಅತ್ಯಾಚಾರ ನಡೆಸಿ ಪರಾರಿಯಾಗಿದ್ದ. ಈತ ಯುವತಿಗೆ ಐದು ತಿಂಗಳ ಹಿಂದೆಯಷ್ಟೇ ಪರಿಚಯವಾಗಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ. ಸಂತ್ರಸ್ತೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಪರಾಧಿಗೆ 20 ವರ್ಷ ಕಠಿಣ ಶಿಕ್ಷೆ

ವಿರಾಜಪೇಟೆ: ಬಾಲಕಿಯ ಮೇಲೆ ಅತ್ಯಾಚಾರ ಪ್ರಕರಣದಲ್ಲಿ ಅಪರಾಧಿ ಬೊಳಕ ಅಲಿಯಾಸ್ ಚೋಮನಿಗೆ 20 ವರ್ಷಗಳ ಕಠಿಣ ಶಿಕ್ಷೆ ಹಾಗೂ ₹30 ಸಾವಿರ ದಂಡ ವಿಧಿಸಿ ಇಲ್ಲಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಆದೇಶಿಸಿದೆ. ದಂಡ ಪಾವತಿಸದಿದ್ದರೆ 2 ವರ್ಷಗಳ ಹೆಚ್ಚುವರಿ ಸೆರೆವಾಸವನ್ನೂ ವಿಧಿಸಿದೆ.

ಸಮೀಪದ ಕೊಳ್ತೋಡು-ಬೈಗೋಡು ಗ್ರಾಮದಲ್ಲಿ 2018ರಲ್ಲಿ ಘಟನೆ ನಡೆದಿತ್ತು. ಅದೇ ಗ್ರಾಮದ ತೋಟದ ಲೈನ್ ಮನೆಯಲ್ಲಿ ಚೋಮ ವಾಸವಾಗಿದ್ದ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ವಿರಾಜಪೇಟೆ ಇನ್‌ಸ್ಪೆಕ್ಟರ್ ಕುಮಾರ ಆರಾಧ್ಯ ಆರೋಪಪಟ್ಟಿ ಸಲ್ಲಿಸಿದ್ದರು.

ಯುವಕನಿಗೆ ಒಟ್ಟಿಗೆ 2 ಡೋಸ್ ಕೋವಿಡ್ ಲಸಿಕೆ

ಪ್ರಜಾವಾಣಿ ವಾರ್ತೆ

ಸುಳ್ಯ: ತಾಲ್ಲೂಕಿನ ದುಗ್ಗಲಡ್ಕ ಪ್ರೌಢಶಾಲೆಯಲ್ಲಿ ನಡೆದ ಲಸಿಕಾ ಶಿಬಿರದಲ್ಲಿ ಯುವಕನಿಗೆ ಆರೋಗ್ಯ ಸಹಾಯಕಿಯೊಬ್ಬರು ಕೆಲವೇ ಕ್ಷಣಗಳ ಅಂತರದಲ್ಲಿ ಎರಡು ಡೋಸ್ ಲಸಿಕೆ ನೀಡಿದ್ದಾರೆ.

ಬುಧವಾರ ದುಗ್ಗಲಡ್ಕ ಪ್ರೌಢಶಾಲೆಯಲ್ಲಿ ಕೋವಿಡ್ ಲಸಿಕೆ ಶಿಬಿರ ನಡೆಯುತ್ತಿತ್ತು. ಕೂಟೇಲು ಸಿಆರ್‌ಸಿಯ ಬಾಲಸುಬ್ರಹ್ಮಣ್ಯಂ ಅವರ ಪುತ್ರ, ಕೆ.ಬಿ. ಅರುಣ್ ಮೊದಲ ಡೋಸ್ ಪಡೆಯಲು ಬಂದಿದ್ದರು. ಆರೋಗ್ಯ ಸಹಾಯಕಿಯು ಅರುಣ್ ಅವರಿಗೆ ಲಸಿಕೆ ನೀಡಿದ್ದರು. ಇದಾದ ನಂತರವೂ ಮಾತ್ರೆ ಪಡೆಯುವ ಉದ್ದೇಶದಿಂದ ಅರುಣ್ ಅಲ್ಲೇ ಕುಳಿತಿದ್ದರು. ಸ್ವಲ್ಪ ಸಮಯದಲ್ಲಿ ಹೊಸ ಸಿರಿಂಜ್‌ನೊಂದಿಗೆ ಬಂದ ಆರೋಗ್ಯ ಸಹಾಯಕಿಯು ಬೇರೆಯವರು ಕುಳಿತಿದ್ದಾರೆ ಎಂದು ಭಾವಿಸಿ ಪುನಃ ಅರುಣ್ ಅವರಿಗೇ ಲಸಿಕೆ ನೀಡಿದ್ದಾರೆ.

'ಆತಂಕ ಪಡಬೇಕಾಗಿಲ್ಲ. ಸರಿಯಾಗಿ ಆಹಾರ ಸೇವನೆ ಮಾಡಲಿ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಂದಕುಮಾರ್ ಅವರು ಹೇಳಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೋರ್ಟ್ ಖರ್ಚಿಗೆ ಕದ್ದರು 25 ಬೈಕ್!

ಆರೋಪಿಗಳಿಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಹೊಸಪೇಟೆ (ವಿಜಯನಗರ): ಕೊಲೆ, ಅತ್ಯಾಚಾರ ಪ್ರಕರಣದಲ್ಲಿ ವಿಚಾರಣೆ ಎದುರಿಸುತ್ತಿರುವ ಆರೋಪಿಗಳು ನ್ಯಾಯಾಲಯದ ಖರ್ಚು ನಿಭಾಯಿಸಲು ಕದ್ದಿದ್ದ 25 ಬೈಕ್‌ಗಳೊಂದಿಗೆ ನಾಲ್ವರನ್ನು ಇಲ್ಲಿನ ಪಟ್ಟಣ ಠಾಣೆ ಪೊಲೀಸರು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಯಲ್ಲಿ ಬೈಕ್ ಕಳವು ಮಾಡಿರುವ ಆರೋಪಿಗಳ ಪೈಕಿ ನಾಲ್ವರನ್ನು ಪಟ್ಟಣ ಠಾಣೆ ಪೊಲೀಸರು ವಶಕ್ಕೆ ಪಡೆದರೆ, ಇನ್ನೊಬ್ಬನನ್ನು ಕೊಪ್ಪಳ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಒಂದು ಮತ್ತು ಎರಡನೇ ಆರೋಪಿ, ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ವಿಚಾರಣೆ ಎದುರಿಸುತ್ತಿದ್ದರು. ಕೋರ್ಟ್ ಖರ್ಚು ನಿಭಾಯಿಸಲು ಬೈಕ್ ಕಳ್ಳತನ ಮಾಡುತ್ತಿದ್ದರು. ಆ 29ರಂದು ನಗರದ ಕನಕದಾಸ ವೃತ್ತದಲ್ಲಿ ಶೋಧ ನಡೆಸುತ್ತಿರುವ ವೇಳೆ ಆರೋಪಿಗಳು ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾರೆ.

ಹೊಸಪೇಟೆ, ಬಳ್ಳಾರಿ, ಕಂಪ್ಲಿ, ಕಮಲಾಪುರ, ಕೊಪ್ಪಳ ಹಾಗೂ ಗಂಗಾವತಿಯಲ್ಲಿ ಜನನಿಬಿಡ ಪ್ರದೇಶಗಳಲ್ಲಿ ನಕಲಿ ಕೀ ಬಳಸಿ ಬೈಕ್ ಕಳವು ಮಾಡಿ, ಕಡಿಮೆ ಬೆಲೆಗೆ ಅವುಗಳನ್ನು ಮಾರಾಟ ಮಾಡುತ್ತಿದ್ದರು. ಒಂದನೇ ಆರೋಪಿ ಹಾಗೂ ಬೈಕ್ ಖರೀದಿಸಿದ 2,4,5ನೇ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಎರಡನೇ ಆರೋಪಿ ಕೊಪ್ಪಳದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾನೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಅನಿಸಿಕೆ

'ಸ್ಕಾಲರ್‌ಷಿಪ್ ಪಡೆದ ಖುಷಿ'



ಸ್ಕಾಲರ್‌ಷಿಪ್ ಹಣ ಕಾಲೇಜಿನ ಶುಲ್ಕ ನೀಡಲು ನೆರವಾಯಿತು. ಲಾಕ್‌ಡೌನ್ ವೇಳೆ ಅಪ್ಪನಿಗೆ ಉದ್ಯೋಗ ನಷ್ಟವಾಗಿತ್ತು. ಆ ವೇಳೆಯಲ್ಲಿ ದೊರೆತ ಈ ಹಣ ನಮಗೆ ದೊಡ್ಡ ಮೊತ್ತವೇ ಆಗಿತ್ತು. ನಾನು ಸಾಮಾನ್ಯ ವರ್ಗದಲ್ಲಿ ಬರುವುದರಿಂದ ನನಗೆ ಈವರೆಗೆ ಯಾವ ಸ್ಕಾಲರ್‌ಷಿಪ್ ಕೂಡ ಸಿಕ್ಕಿರಲಿಲ್ಲ. ಇದೇ ಮೊದಲ ಬಾರಿ ಸ್ಕಾಲರ್‌ಷಿಪ್ ಪಡೆದ ಖುಷಿ ಇದೆ. 'ಪ್ರಜಾವಾಣಿ'ಗೆ ಋಣಿಯಾಗಿದ್ದೇನೆ.

ಸಿಂಚನಾ ನಾಯಕ, ಮಂಗಳೂರು

'ಪುಸ್ತಕ ಖರೀದಿಸಲು ಬಳಕೆ'



'ಪ್ರಜಾವಾಣಿ' ನೀಡಿದ ಸ್ಕಾಲರ್‌ಷಿಪ್ ಹಣವನ್ನು ಪುಸ್ತಕ ಖರೀದಿಸಲು ಬಳಸಿಕೊಂಡೆ. ಇದರಿಂದ ತುಂಬಾ ಸಹಾಯವಾಯಿತು. ಕಷ್ಟದಲ್ಲಿರುವಾಗ ಈ ರೀತಿ ಸಹಾಯ ದೊರೆತರೆ ನಮ್ಮಲ್ಲಿ ಆತ್ಮವಿಶ್ವಾಸ ಬೆಳೆಯುತ್ತದೆ. ದ್ವಿತೀಯ ಪಿಯುಸಿಯಲ್ಲೂ ಉತ್ತಮ ಅಂಕ ಗಳಿಸಿ, ಮುಂದೆ ವೈದ್ಯೆಯಾಗುವ ಕನಸಿದೆ.

ಶ್ವೇತಾ, ಮಂಗಳೂರು

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald--Prajavani Relief Trust' ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.fnc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ಸಂಕ್ಷಿಪ್ತ ಸುದ್ದಿ

ಅಂತರ ನಿಗಮ ವರ್ಗಾವಣೆಗೆ ಕೌನ್ಸೆಲಿಂಗ್

ಬೆಂಗಳೂರು: ಅಂತರ ನಿಗಮ ವರ್ಗಾವಣೆಗೆ ಅರ್ಹರಾಗಿರುವ ನಾಲ್ಕು ಸಾರಿಗೆ ಸಂಸ್ಥೆಗಳ ನೌಕರರು ಕೌನ್ಸೆಲಿಂಗ್‌ಗೆ ಅರ್ಜಿ ಸಲ್ಲಿಸಲು ಸೆ.4ರಿಂದ 13ರವರೆಗೆ ಅವಕಾಶ ಕಲ್ಪಿಸಲಾಗಿದೆ.

ksrtc.org/counselling ವೆಬ್‌ಸೈಟ್‌ನಲ್ಲಿ ಸೆ.13ರ ಸಂಜೆ 5.30ರ ತನಕ ಅರ್ಜಿ ಸಲ್ಲಿಸಬಹುದು. ಕೌನ್ಸೆಲಿಂಗ್‌ನಲ್ಲಿ ಭಾಗವಹಿಸದಿದ್ದರೆ, ಲಭ್ಯವಿರುವ ಖಾಲಿ ಹುದ್ದೆಗಳಿಗೆ ನಿಯೋಜನೆ ಮಾಡಲಾಗುವುದು. ಲಿಖಿತ ಅರ್ಜಿ ಸ್ವೀಕರಿಸುವುದಿಲ್ಲ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ತಿಳಿಸಿದ್ದಾರೆ.

ನಿವಾಸ ನೀಡದ್ದಕ್ಕೆ ಸಭಾಪತಿ ಬೇಸರ

ಹುಬ್ಬಳ್ಳಿ/ಧಾರವಾಡ: ವಿಧಾನ ಪರಿಷತ್ ಸಭಾಪತಿಯಾಗಿ ವರ್ಷ ಕಳೆದರೂ ಬೆಂಗಳೂರಿನಲ್ಲಿ ಸರ್ಕಾರ ನಿವಾಸ ನೀಡಿಲ್ಲ ಎಂದು ಸಭಾಪತಿ ಬಸವರಾಜ ಹೊರಟ್ಟಿ ಬೇಸರ ವ್ಯಕ್ತಪಡಿಸಿದರು.

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಶುಕ್ರವಾರ ಮತ ಚಲಾಯಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿವಾಸ ನೀಡುವಂತೆ ಸರ್ಕಾರಕ್ಕೆ ಏಳು ಬಾರಿ ಪತ್ರ ಬರೆದಿದ್ದೇನೆ. ಆದರೂ ಕ್ರಮಕೈಗೊಂಡಿಲ್ಲ. ನಾನು ಭಿಕ್ಷೆ ಬೇಡುತ್ತಿಲ್ಲ. ಇನ್ನು ಮುಂದೆ ನಿವಾಸ ನೀಡಿ ಎಂದು ಕೇಳುವುದಿಲ್ಲ. ಕೊಟ್ಟರೆ ಕೊಡಲಿ, ಬಿಟ್ಟರೆ ಬಿಡಲಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮನೆ ಇಲ್ಲದಿರುವುದು ದುರ್ದೈವದ ಸಂಗತಿ: ಈ ನಡುವೆ, ಧಾರವಾಡದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕಾಂಗ್ರೆಸ್ ಮುಖಂಡ ವೀರಣ್ಣ ಮತ್ತಿಕಟ್ಟಿ 'ಸಭಾಪತಿ ಬಸವರಾಜ ಹೊರಟ್ಟಿ ಅವರ ಹುದ್ದೆಯನ್ನು ಪರಿಗಣಿಸಿ ಸರ್ಕಾರ ಕೂಡಲೇ ಅವರಿಗೆ ಮನೆ ಹಂಚಿಕೆ ಮಾಡಬೇಕು' ಎಂದು ಆಗ್ರಹಿಸಿದರು.

'ರಾಜ್ಯಪಾಲರ ನಂತರದ ಸ್ಥಾನ ಸಭಾಪತಿಯದ್ದು. ಆದರೆ ಅವರಿಗೇ ಅಧಿಕೃತ ನಿವಾಸ ಇಲ್ಲದಂತಾಗಿರುವುದು ದುರ್ದೈವದ ಸಂಗತಿ. ಈ ಕುರಿತು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಮಾತನಾಡುತ್ತೇನೆ' ಎಂದು ಮತ್ತಿಕಟ್ಟಿ ಹೇಳಿದರು.

ಜಿಂಕೆ ಬೇಟೆ: ಕಳ್ಳರಿಗೆ ಗುಂಡೇಟು

ಹಲಗೂರು (ಮಂಡ್ಯ ಜಿಲ್ಲೆ): ಇಲ್ಲಿನ ಕಾವೇರಿ ವನ್ಯಜೀವಿ ವಲಯದಲ್ಲಿ ಶುಕ್ರವಾರ ನಸುಕಿನಲ್ಲಿ ಎರಡು ಜಿಂಕೆಗಳನ್ನು ಕೊಂದು ಸಾಗಿಸುತ್ತಿದ್ದ ನಾಲ್ವರ ಪೈಕಿ ವೆಂಕಟೇಶ್ ಎಂಬಾತ ಅರಣ್ಯ ಸಿಬ್ಬಂದಿಯ ಗುಂಡಿಗೆ ಸಿಲುಕಿ ಗಾಯಗೊಂಡಿದ್ದಾನೆ. ಉಳಿದ ಮೂವರು ಆರೋಪಿಗಳಾದ ಮನು, ಶೇಖರ್, ತೀರ್ಥ ಪರಾರಿಯಾಗಿದ್ದಾರೆ. ಗಾಯಾಳುವನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಬಸ್ ಸೌಲಭ್ಯಗಳ ಕೊರತೆ; ಕಲ್ಯಾಣ ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳ ತೀರದ ಗೋಳು – ಸಮಸ್ಯೆ ಬಗೆಹರಿಸಲು ಪೋಷಕರ ಒತ್ತಾಯ

ಶಾಲಾ– ಕಾಲೇಜಿಗೆ ನಡೆದೇ ಹೋಗುವ ವಿದ್ಯಾರ್ಥಿಗಳು

ಕಲ್ಯಾಣ ಕರ್ನಾಟಕದ ಜಿಲ್ಲೆಗಳ ವಿವಿಧ ಗ್ರಾಮಗಳಲ್ಲಿ ಇಂದಿಗೂ ಸಾರಿಗೆ, ರಸ್ತೆ ಸೌಲಭ್ಯಗಳು ಮರೀಚಿಕೆಯಾಗಿವೆ. ಸವಲತ್ತುಗಳು ನಾಗರಿಕರಿಗೆ ಹತ್ತಿರವಾಗದ ಪರಿಣಾಮ, ವಿವಿಧ ಗ್ರಾಮಗಳಲ್ಲಿ ವಿದ್ಯಾರ್ಥಿಗಳಿಗೆ ಕಲಿಕೆಯು 'ದೂರ'ವಾಗಿದೆ.

ಪ್ರಜಾವಾಣಿ ವಾರ್ತೆ

ಕಲಿಕೆಯ ಅಂಗಳಕ್ಕೆ ಕಾಲ ಹಾದಿ



ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕು ಮರಪಳ್ಳಿ ಗ್ರಾಮದ ಬಾಲಕಿಯರು ಸಾರಿಗೆ ಸೌಲಭ್ಯದ ಕೊರತೆಯಿಂದ ಹಸರಗುಂಡಗಿಯ ಸರ್ಕಾರಿ ಪ್ರೌಢಶಾಲೆಗೆ ನಿತ್ಯ ನಡೆದುಕೊಂಡೆ ಹೋಗುತ್ತಾರೆ



ಕಲಬುರ್ಗಿ ಜಿಲ್ಲೆಯ ಯಡ್ರಾಮಿ ತಾಲ್ಲೂಕಿನ ಜಂಬೇರಾಳ ಗ್ರಾಮದ ವಿದ್ಯಾರ್ಥಿಗಳು 3.5 ಕಿ.ಮೀ. ನಡೆದು ಕಡಕೋಳ ಪ್ರೌಢಶಾಲೆಗೆ ಹೋಗುತ್ತಾರೆ.

ಕಲಬುರ್ಗಿ: ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಕಲಬುರ್ಗಿ, ಯಾದಗಿರಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಗ್ರಾಮೀಣ ಪ್ರದೇಶದ ಕೆಲವೆಡೆ ಸಮರ್ಪಕ ಬಸ್ ವ್ಯವಸ್ಥೆ ಇಲ್ಲದ ಕಾರಣ ವಿದ್ಯಾರ್ಥಿಗಳು ಶಾಲಾ ಕಾಲೇಜಿಗೆ 3 ರಿಂದ 6 ಕಿ.ಮೀ.ವರೆಗೆ ನಡೆದುಕೊಂಡು ಹೋಗುತ್ತಿದ್ದಾರೆ.

ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಮರಪಳ್ಳಿ ಗ್ರಾಮದ 15 ಬಾಲಕಿಯರು ಸೇರಿ 20ಕ್ಕೂ ಹೆಚ್ಚು ವಿದ್ಯಾರ್ಥಿಗಳು ನಿತ್ಯ 3.5 ಕಿ.ಮೀ ನಡೆದುಕೊಂಡೇ ಹಸರಗುಂಡಗಿ ಸರ್ಕಾರಿ ಪ್ರೌಢಶಾಲೆಗೆ ಹೋಗುತ್ತಾರೆ. ಕೆಲ ಪೋಷಕರು ಮಕ್ಕಳನ್ನು ದ್ವಿಚಕ್ರ ವಾಹನದಲ್ಲಿ ಕರೆದೊಯ್ದರೆ, ಕೆಲವರು ಖಾಸಗಿ ವಾಹನ ಅವಲಂಬಿಸಿದ್ದಾರೆ.

'ಮಳೆ ಇರಲಿ ಅಥವಾ ಬಿಸಿಲು ಇರಲಿ ವಿದ್ಯಾರ್ಥಿಗಳು ನಡೆದುಕೊಂಡು ಬರುವುದು ತಪ್ಪುವುದಿಲ್ಲ. ಬಸ್ ವ್ಯವಸ್ಥೆ ಮಾಡಿದರೆ, ಅನುಕೂಲವಾಗುತ್ತದೆ' ಎಂದು ಪೋಷಕರು ಹೇಳುತ್ತಾರೆ. ಯಡ್ರಾಮಿ ತಾಲ್ಲೂಕಿನ ಜಂಬೇರಾಳ ಗ್ರಾಮದ ವಿದ್ಯಾರ್ಥಿಗಳು ಪ್ರತಿ ದಿನ 3.5 ಕಿ.ಮೀ. ನಡೆದು ಕಡಕೋಳ ಪ್ರೌಢಶಾಲೆಗೆ ಹೋಗುತ್ತಾರೆ.

ಯಾದಗಿರಿ ತಾಲ್ಲೂಕಿನ ಯರಗೋಳ ಸಮೀಪದ ಕಂಚಗಾರಳ್ಳಿ ಗ್ರಾಮದ ವಿದ್ಯಾರ್ಥಿಗಳು ಅಲ್ಲಿಪುರ ಸರ್ಕಾರಿ ಪ್ರೌಢಶಾಲೆಗೆ ಹೋಗಲು ನಾಲ್ಕೂವರೆ ಕಿ.ಮೀ. ನಡೆಯಬೇಕು.

ಗುತ್ತಿ ಬಸವೇಶ್ವರ, ಬಮ್ಮನಹಳ್ಳಿ, ಚಿಂಚೋಳಿ, ವಂದಗನೂರ, ಯಡಿಯಾಪುರ, ಕುಡಲಗಿ ಮತ್ತು ಸುತ್ತಮುತ್ತಲ ಗ್ರಾಮಗಳ ವಿದ್ಯಾರ್ಥಿಗಳು ಕೆಂಭಾವಿ ಶಾಲಾ–ಕಾಲೇಜಿಗೆ ಹೋಗಲು 2 ರಿಂದ 3 ಕಿ.ಮೀ. ನಡೆಯಲೇಬೇಕು.

> **ಸೋಂಕು ಕಡಿಮೆ ಆಗಿರುವುದರಿಂದ ಎಲ್ಲ ಕಡೆ ಸಾರಿಗೆ ಸಂಚಾರ ಆರಂಭಿಸಲು ಆಯಾ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಸೂಚಿಸಲಾಗಿದೆ**
>
> **ವಿ.ಎಚ್. ಸಂತೋಷಕುಮಾರ್** ಮುಖ್ಯ ಸಂಚಾರ ವ್ಯವಸ್ಥಾಪಕ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಲಬುರ್ಗಿ

'ವಡಗೇರಾ ತಾಲ್ಲೂಕಿನ ಕೊಡಾಲ್ ಗ್ರಾಮದಿಂದ ಯಾದಗಿರಿಯ ಶಾಲಾ ಕಾಲೇಜಿಗೆ ಹೋಗಲು ಬಸ್ ವ್ಯವಸ್ಥೆ ಇಲ್ಲ. ಕೊಡಾಲ್ ಗ್ರಾಮದಿಂದ ಮುಖ್ಯರಸ್ತೆಗೆ ಬರಲು 5 ಕಿ.ಮೀ. ದೂರ ನಡೆಯಬೇಕು. ಅಲ್ಲಿಂದ ಯಾದಗಿರಿಗೆ ಬಸ್ ಹತ್ತಬೇಕು' ಎಂದು ವಿದ್ಯಾರ್ಥಿಗಳು ಪರಿಸ್ಥಿತಿ ವಿವರಿಸುತ್ತಾರೆ.

'ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಏಕಲಾರ ಸರ್ಕಾರಿ ಪ್ರೌಢಶಾಲೆಗೆ ಬರಲು ತುಳಜಾಪುರ, ಬೋರಾಳ ಮತ್ತು ಬರದಾಪುರ ಗ್ರಾಮಗಳ ವಿದ್ಯಾರ್ಥಿಗಳು 7 ಕಿ.ಮೀ. ನಡೆಯುವುದು ಅನಿವಾರ್ಯ' ಎಂದು ಔರಾದ್‌ನ ಆದರ್ಶ ವಿದ್ಯಾಲಯದ ಪ್ರಾಚಾರ್ಯ ಧುಳಪ್ಪ ಮಳೆನೂರ ಹೇಳಿದರು.

ಬಸವಕಲ್ಯಾಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಗರ ಹೊರವಲಯದಲ್ಲಿ 4 ಕಿ.ಮೀ. ದೂರದಲ್ಲಿದೆ. 'ಬಸ್ ಇರದ ಕಾರಣ 3 ವರ್ಷಗಳಿಂದ ನಡೆದುಕೊಂಡೆ ಹೋಗುತ್ತಿದ್ದೇವೆ. ಪ್ರತಿಭಟನೆ ನಡೆದರೂ ಸ್ಪಂದನೆ ಸಿಕ್ಕಿಲ್ಲ' ಎಂದು ವಿದ್ಯಾರ್ಥಿಗಳು ಸಂಕಷ್ಟ ತೋಡಿಕೊಂಡರೆ, 'ಆ ಕಡೆ ಪ್ರಯಾಣಿಕರು ಹೆಚ್ಚು ಹೋಗುವುದಿಲ್ಲ. ಅದಕ್ಕೆ ಬಸ್ ಸೇವೆ ಕಲ್ಪಿಸಲಾಗದು' ಎಂದು ಸಾರಿಗೆ ಸಂಸ್ಥೆ ಅಧಿಕಾರಿಗಳು ಉತ್ತರಿಸುತ್ತಾರೆ.

'ಚಿಟಗುಪ್ಪ ತಾಲ್ಲೂಕಿನ ಬಸಿಲಾಪುರ ಗ್ರಾಮದಿಂದ 4 ಕಿ.ಮೀ. ದೂರವಿರುವ ನಿರ್ಣಾ ಗ್ರಾಮದ ಶಾಲೆಗೆ ವಿದ್ಯಾರ್ಥಿಗಳು ನಡೆದುಕೊಂಡೇ ಹೋಗುತ್ತಾರೆ' ಎಂದು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಓಂಕಾರ ರೆಡ್ಡಿ ಹೇಳುತ್ತಾರೆ.

ಸ್ಥಗಿತಗೊಂಡ ಬಸ್ ಸೇವೆ ಇನ್ನೂ ಆರಂಭಗೊಂಡಿಲ್ಲ

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಹತ್ತಿಗುಡ್ಡ ಗ್ರಾಮದ ವಿದ್ಯಾರ್ಥಿಗಳು ನಿತ್ಯ 6 ಕಿ.ಮೀ ನಡೆದೇ ತುರ್ವಿಹಾಳ ಸರ್ಕಾರಿ ಪ್ರೌಢಶಾಲೆಗೆ ಹೋಗುತ್ತಾರೆ. ಒಂದೂವರೆ ವರ್ಷದ ಹಿಂದೆ ಕೊರೊನಾ ಲಾಕ್‌ಡೌನ್‌ನಲ್ಲಿ ಸ್ಥಗಿತಗೊಂಡ ಬಸ್ ಸೇವೆ ಇನ್ನೂ ಆರಂಭಗೊಂಡಿಲ್ಲ.

'ದೇವಸುಗೂರು ಹೋಬಳಿ ವ್ಯಾಪ್ತಿಯ ಕೊರವಿಹಾಳ್, ಕೊರ್ತಕುಂದ, ಗಂಜಳ್ಳಿ, ಸಗಮಕುಂಟ, ಯರಗುಂಟ, ಕಾಡ್ಲೂರು, ರಂಗಾಪುರ ಮತ್ತು ಕರೇಕಲ್ ಗ್ರಾಮಗಳ ವಿದ್ಯಾರ್ಥಿಗಳು ದೇವಸುಗೂರು ಗ್ರಾಮದ ಪ್ರೌಢಶಾಲೆಗೆ ಹೋಗಲು ನಿತ್ಯ 5 ಕಿ.ಮೀ ನಡೆಯದೇ ವಿಧಿಯಿಲ್ಲ. ಹೆಣ್ಣು-ಮಕ್ಕಳನ್ನು ಶಾಲೆಗೆ ಕಳುಹಿಸಲು ಭಯವಾಗುತ್ತಿದೆ' ಎಂದು ಕೊರವಿಹಾಳ್ ಗ್ರಾಮಸ್ಥ ಮಲ್ಲೇಶ ಹೇಳುತ್ತಾರೆ.

ಸಿರವಾರ ತಾಲ್ಲೂಕಿನ ಕವಿತಾಳ ಹೋಬಳಿಯ ತೊಪ್ಪಲದೊಡ್ಡಿ, ಕಡ್ದೋಣಿ ತಿಮ್ಮಾಪುರ, ಸೈದಾಪುರ ಮತ್ತು ಹುಸೇನಪುರ ಗ್ರಾಮಗಳಿಂದ ಕವಿತಾಳದ ಸರ್ಕಾರಿ ಪ್ರೌಢಶಾಲೆ ಬರುವ ವಿದ್ಯಾರ್ಥಿಗಳು ಮನೆಗೆ ಹಿಂದಿರುಗಲು ಸಂಜೆವರೆಗೂ ಕಾಯಬೇಕು. ಮಧ್ಯಾಹ್ನ 1.30ಕ್ಕೆ ತರಗತಿ ಮುಗಿದರೂ ಬಸ್‌ಗಾಗಿ ಅವರು ಮಧ್ಯಾಹ್ನ 4.30ರವರೆಗೂ ಕಾಯಬೇಕು.

ಮುದಗಲ್ ಸಮೀಪದ ಕಿಲಾರಹಟ್ಟಿ, ಬೊಮ್ಮನಹಾಳ, ಬಂಡಿ ಸುಂಕಾಪುರ ಮತ್ತು ಭೋಗಾಪುರ ಗ್ರಾಮದ ವಿದ್ಯಾರ್ಥಿಗಳು 6 ಕಿ.ಮೀ ನಡೆದು ಖೈರವಾಡಗಿ ಪಿಯು ಕಾಲೇಜು ಮತ್ತು ಬಯ್ಯಾಪುರ ಪ್ರೌಢಶಾಲೆಗೆ ಹೋಗುತ್ತಾರೆ.

'ಮುದಗಲ್ ಮತ್ತು ನಾಗರಾಳ ನಡುವೆ 3 ಕಿ.ಮೀ ಅಂತರವಿದೆ. ಆದರೆ, ಬಸ್ ಸೌಕರ್ಯವಿಲ್ಲ. ಅದಕ್ಕೆ 35 ಕಿ.ಮೀ ದೂರದ ಲಿಂಗಸುಗೂರು ಕಾಲೇಜಿಗೆ ಹೋಗಬೇಕಿದೆ. ಮುದಗಲ್ ಮತ್ತು ನಾಗರಾಳ ನಡುವೆ ಬಸ್ ಸೌಲಭ್ಯ ಕಲ್ಪಿಸಬೇಕು' ಎಂದು ವಿದ್ಯಾರ್ಥಿಗಳು ಹೇಳುತ್ತಾರೆ.

ಪಾಸ್ ಇದ್ದರೂ ಬಸ್ ನಿಲ್ಲಲ್ಲ!

ಕೊಪ್ಪಳ ಜಿಲ್ಲೆ ಅಳವಂಡಿ ಮತ್ತು ಹಿರೇಶಿಂದೋಗಿ ಹೋಬಳಿ ವ್ಯಾಪ್ತಿಯ ಗ್ರಾಮಗಳ ವಿದ್ಯಾರ್ಥಿಗಳು 6 ಕಿ.ಮೀ ನಡೆಯಬೇಕು. ಹ್ಯಾಟಿ ಮತ್ತು ಮುಂಡರಗಿ ಗ್ರಾಮಗಳ ವಿದ್ಯಾರ್ಥಿಗಳು ಹಿರೇಶಿಂದೋಗಿಗೆ ಮತ್ತು ಮೋರನಾಳ ಗ್ರಾಮದ ವಿದ್ಯಾರ್ಥಿಗಳು ಅಳವಂಡಿಗೆ ಹೋಗುತ್ತಾರೆ.

'ಬಸ್‌ಗಳು ಹೆಚ್ಚಿರದ ಕಾರಣ ಬಹುತೇಕ ಬಸ್‌ಗಳಲ್ಲಿ ಪ್ರಯಾಣಿಕರ ದಟ್ಟಣೆ ಇರುತ್ತದೆ. ಬಸ್ ಟಾಪ್‌ನಲ್ಲಿ ಕೂತು ಕೆಲವರು ಪ್ರಯಾಣಿಸುತ್ತಾರೆ. ವಿದ್ಯಾರ್ಥಿಗಳ ಬಳಿ ಪಾಸ್ ಇದ್ದರೂ ಬಸ್ ಹತ್ತಲು ಸಾಧ್ಯವಾಗುವುದಿಲ್ಲ. ಕೆಲ ಬಸ್‌ಗಳು ನಿಲ್ಲುವುದಿಲ್ಲ. ಹೆಚ್ಚಿನ ಬಸ್ ಸೌಕರ್ಯಕ್ಕಾಗಿ ಹಲವು ಬಾರಿ ಪ್ರತಿಭಟನೆ ನಡೆಸಿದರೂ ಪ್ರಯೋಜನವಾಗಿಲ್ಲ. ವಿದ್ಯಾರ್ಥಿಗಳು ಅನಿವಾರ್ಯವಾಗಿ ಖಾಸಗಿ ವಾಹನ, ಟ್ರ್ಯಾಕ್ಟರ್ ಮತ್ತು ಜೆಸಿಬಿ ವಾಹನಗಳಲ್ಲಿ ಪ್ರಯಾಣಿಸುತ್ತಾರೆ' ಎಂದು ಗ್ರಾಮಸ್ಥರು ಹೇಳುತ್ತಾರೆ.

'ಪ್ರಯಾಣಿಕರ ಕೊರತೆಯಿಂದ ಕೆಲ ಬಸ್ ಮಾರ್ಗಗಳನ್ನು ಬಂದ್ ಮಾಡಲಾಗಿದೆ' ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ಹೇಳುತ್ತಾರೆ. ಗ್ರಾಮೀಣ ಭಾಗದ ಮತ್ತು ತುಂಗಭದ್ರಾ ಜಲಾಶಯದ ಹಿನ್ನೀರಿನ ಪ್ರದೇಶದಲ್ಲಿ ರಸ್ತೆಗಳೂ ಹದಗೆಟ್ಟಿವೆ.

ಐಎಎಸ್ ಅಧಿಕಾರಿ ಅನುರಾಗ್ ತಿವಾರಿ ಸಾವಿನ ಬಗ್ಗೆ ಪತ್ರದಲ್ಲಿ ಪ್ರಸ್ತಾಪ

ಐಪಿಎಸ್ ಅಧಿಕಾರಿ ವಿರುದ್ಧ ಪತಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿ ವರ್ತಿಕಾ ಕಟಿಯಾರ್ ವಿರುದ್ಧ ಅವರ ಪತಿ ಹಾಗೂ ಭಾರತೀಯ ವಿದೇಶಾಂಗ ಸೇವೆಗಳ (ಐಎಫ್‌ಎಸ್) ಅಧಿಕಾರಿ ನಿತಿನ್ ಸುಭಾಷ್ ಯಿಯೋಲಾ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರಿಗೆ ದೂರು ನೀಡಿದ್ದಾರೆ.

ವರ್ತಿಕಾ ವಿರುದ್ಧ ಭ್ರಷ್ಟಾಚಾರ ಸೇರಿ ಹಲವು ಆರೋಪಗಳನ್ನು ಮಾಡಿರುವ ನಿತಿನ್, '2017 ರಲ್ಲಿ ಉತ್ತರ ಪ್ರದೇಶದ ಲಖನೌದಲ್ಲಿ ನಿಗೂಢವಾಗಿ ಸಾವಿಗೀಡಾದ ಕರ್ನಾಟಕದ ಐಎಎಸ್ ಅಧಿಕಾರಿ ಅನುರಾಗ್ ತಿವಾರಿ ಅವರದು ಅಸಹಜ ಸಾವಾಗಿದ್ದು, ಈ ಸಾವಿನ ಬಗ್ಗೆ ತನಿಖೆ ನಡೆಸುತ್ತಿರುವ ಸಿಬಿಐ ಎರಡು ಬಾರಿ ವರ್ತಿಕಾ ಅವರನ್ನು ಬೆಂಗಳೂರು ಮತ್ತು ದೆಹಲಿಯಲ್ಲಿ ವಿಚಾರಣೆಗೆ ಒಳಪಡಿಸಿದೆ' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

'ವರ್ತಿಕಾ ಚಾರಿತ್ರ್ಯ ಪ್ರಶ್ನಾರ್ಹವಾಗಿದ್ದು, ಅನುರಾಗ್ ತಿವಾರಿ ಜತೆ ಸಂಬಂಧ ಹೊಂದಿದ್ದರು. ತಿವಾರಿ ಮನೆಗೆ ನಿತ್ಯವೂ ಭೇಟಿ ನೀಡುತ್ತಿದ್ದರು. ಇವರಿಬ್ಬರ ಮಧ್ಯೆ ಮೊಬೈಲ್ ಮೂಲಕ ನಡೆದಿರುವ ಮಾತುಕತೆ ಮತ್ತು ಸಂದೇಶಗಳ ರವಾನೆಗೆ ಸಂಬಂಧ ಎಲ್ಲ ದಾಖಲೆಗಳೂ ಸಿಬಿಐ ಬಳಿ ಇದೆ. ವರ್ತಿಕಾ ಧಾರವಾಡ ಎಸ್‌ಪಿ ಆಗಿದ್ದಾಗ ಆಯಾಜ್ ಖಾನ್ ಎಂಬುವರ ಜತೆ ಆಪ್ತವಾಗಿದ್ದಾರೆ. ಇಬ್ಬರೂ ಗೋವಾದ ಕ್ಯಾಸಿನೋಗಳಿಗೆ ಆಗಾಗ್ಗೆ ಭೇಟಿ ನೀಡುತ್ತಿದ್ದರು. ಹಣಕಾಸಿನ ವ್ಯವಹಾರವೂ ಇದ್ದೂ ವರ್ತಿಕಾ ಪರವಾಗಿ ಆಯಾಜ್ ಖಾನ್ ಹಣ ವಸೂಲಿ ಮಾಡುತ್ತಿದ್ದರು' ಎಂದು ದೂರಿದ್ದಾರೆ.

'ವರ್ತಿಕಾ ಅವರು ಅಫ್ಘಾನಿಸ್ತಾನ, ಶ್ರೀಲಂಕಾ, ಇಟಲಿ, ಸ್ವಿಜರ್‌ಲ್ಯಾಂಡ್, ಆಸ್ಟ್ರಿಯಾ ಮುಂತಾದ ದೇಶಗಳಿಗೆ ಅಕ್ರಮವಾಗಿ ಹಣ ಪಡೆದು ಆಗಿಂದಾಗ್ಗೆ ಪ್ರವಾಸ ಮಾಡಿದ್ದಾರೆ. ಅದಕ್ಕೆ ಆಗಿರುವ ಖರ್ಚು ವೆಚ್ಚ ಮತ್ತು ಅವರ ಬ್ಯಾಂಕ್ ಸ್ಟೇಟ್‌ಮೆಂಟ್ ಜತೆ ತಾಳೆ ಹಾಕಿ ನೋಡಲು ವ್ಯವಸ್ಥೆ ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.

ಕೊಡಗು ಮತ್ತು ಧಾರವಾಡ ಜಿಲ್ಲಾ ಎಸ್ಪಿ ಆಗಿದ್ದಾಗ ರೆಸ್ಟೋರೆಂಟ್‌ಗಳು, ರೆಸಾರ್ಟ್‌ಗಳು ಮತ್ತು ವಾಣಿಜ್ಯೋದ್ಯಮಿಗಳಿಂದ ಲಾಭ ಮಾಡಿಕೊಂಡಿದ್ದು, ರೆಸಾರ್ಟ್‌ಗಳ ಮ್ಯಾನೇಜರ್‌ಗಳನ್ನು ಹೆದರಿಸಿ, ಅಲ್ಲಿ ಉಳಿದುಕೊಳ್ಳುತ್ತಿದ್ದರು. ಈ ಬಗ್ಗೆಯೂ ತನಿಖೆ ನಡೆಸಬೇಕು ಎಂದು ನಿಖಿಲ್ ಆಗ್ರಹಿಸಿದ್ದಾರೆ.

'ತಮ್ಮ ಸೇವೆಯ ಅವಧಿ ಉದ್ದಕ್ಕೂ ಪೊಲೀಸ್ ಸಿಬ್ಬಂದಿ ಮತ್ತು ಹೋಂ ಗಾರ್ಡ್‌ಗಳನ್ನು ತಮ್ಮ ಮನೆ ಕೆಲಸಗಳಿಗೆ ಬಳಸಿಕೊಳ್ಳುತ್ತಾ ಬಂದಿದ್ದಾರೆ. ಇವರೆಲ್ಲರನ್ನು ಹೆದರಿಸಿ, ಬೆದರಿಸಿ, ಕಿರುಕುಳ ನೀಡಿ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಆದ್ದರಿಂದ ಇವರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು' ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಶಿಕ್ಷಣ ನೀತಿ: ಆದೇಶ ಹಿಂಪಡೆದರಷ್ಟೆ ಚರ್ಚೆಯಲ್ಲಿ ಭಾಗಿ– ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನಕ್ಕೆ ಹೊರಡಿಸಿರುವ ಆದೇಶವನ್ನು ಹಿಂಪಡೆಯದೇ ಇದ್ದರೆ ಹೊಸ ನೀತಿಯ ಕುರಿತು ವಿಧಾನಸಭೆಯಲ್ಲಿ ನಡೆಸುವ ಚರ್ಚೆಯಲ್ಲಿ ತಾವು ಭಾಗವಹಿಸುವುದಿಲ್ಲ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ಪತ್ರ ಬರೆದಿದ್ದಾರೆ.

'ವಿದ್ಯಾರ್ಥಿಗಳು, ತಜ್ಞರು, ಪ್ರಾಧ್ಯಾಪಕರು ಮತ್ತು ಪೋಷಕರ ಜತೆ ಯಾವುದೇ ರೀತಿಯ ಚರ್ಚೆ ನಡೆಸದೆ ಶಿಕ್ಷಣ ನೀತಿ ಅನುಷ್ಠಾನಕ್ಕೆ ಚಾಲನೆ ನೀಡಲಾಗಿದೆ. ಚಾಲನೆ ಕೊಟ್ಟ ಬಳಿಕ, ಚರ್ಚೆ ಮಾಡಬೇಕು ಎಂದು ಕೋರುವುದು ಸಂಸದೀಯವಾಗಿ ಸರಿಯಲ್ಲ. ನಿಜವಾಗಿಯೂ ಚರ್ಚೆ ಮಾಡಬೇಕು ಎಂಬುದು ನಿಮ್ಮ ಬಯಕೆಯಾಗಿದ್ದರೆ ಶಿಕ್ಷಣ ನೀತಿ ಅನುಷ್ಠಾನಕ್ಕೆ ಹೊರಡಿಸಿರುವ ಆದೇಶವನ್ನು ತಕ್ಷಣ ಹಿಂದಕ್ಕೆ ಪಡೆಯಬೇಕು' ಎಂದು ಶುಕ್ರವಾರ ಬರೆದಿರುವ ಪತ್ರದಲ್ಲಿ ಆಗ್ರಹಿಸಿದ್ದಾರೆ.

'ಹೊಸ ಶಿಕ್ಷಣ ನೀತಿ ಆರೋಗ್ಯಕರವಾಗಿದೆ ಮತ್ತು ಈ ಶತಮಾನಕ್ಕೆ ಅಗತ್ಯವಾಗಿದೆ ಎಂದು ಮನವರಿಕೆಯಾದರೆ ಅನುಷ್ಠಾನಕ್ಕೆ ನಾವೇ ಬೆಂಬಲಿಸುತ್ತೇವೆ. ಇಲ್ಲವಾದರೆ ಮಕ್ಕಳ ಭವಿಷ್ಯದ ಕುತ್ತಿಗೆ ಕೊಯ್ಯುವಂತಹ ಕೆಲಸದಲ್ಲಿ ಭಾಗಿಯಾದೆವು ಎಂಬ ಪಶ್ಚಾತಾಪವನ್ನು ನಾವು ಹೊರಬೇಕಾಗುತ್ತದೆ' ಎಂದು ಉಲ್ಲೇಖಿಸಿದ್ದಾರೆ.

ಹೊಸ ಶಿಕ್ಷಣ ನೀತಿಯಲ್ಲಿ ಹಲವು ಲೋಪಗಳಿದ್ದು, ಕೋಮುವಾದಿ ಕಾರ್ಯಸೂಚಿ ಹೊಂದಿದೆ ಎಂಬ ಆತಂಕ ವ್ಯಕ್ತವಾಗುತ್ತಿದೆ. ಈ ಕುರಿತು ಚರ್ಚೆ ನಡೆಯಬೇಕಿತ್ತು. ಆದರೆ, ಅದನ್ನು ಈವರೆಗೂ ಮಾಡಿಲ್ಲ ಎಂದು ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೆಎಸ್‌ಆರ್‌ಟಿಸಿ 60ರ ವರ್ಷಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಸಾರಿಗೆ ನಿಗಮಗಳ ಪುನಶ್ಚೇತನಕ್ಕೆ ತಜ್ಞರ ಸಮಿತಿ

ಪ್ರಜಾವಾಣಿ ವಾರ್ತೆ



ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶುಕ್ರವಾರ ನಡೆದ ಕೆಎಸ್‌ಆರ್‌ಟಿಸಿ 60ನೇ ವರ್ಷದ ಸಂಭ್ರಮ ಸಮಾರಂಭದಲ್ಲಿ ಅಪಘಾತ ರಹಿತ ಚಾಲನೆಗಾಗಿ ಮುಖ್ಯಮಂತ್ರಿಯವರ ಚಿನ್ನದ ಪದಕದಿಂದ ಪುರಸ್ಕೃತರಾಗಿರುವ ಸರ್ಕಾರಿ ಸ್ವಾಮ್ಯದ ಸಾರಿಗೆ ನಿಗಮಗಳ ಚಾಲಕರು ಸಾರಿಗೆ ಸಚಿವ ಬಿ. ಶ್ರೀರಾಮುಲು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಕಾಲ ಸಚಿವ ಬಿ.ಸಿ. ನಾಗೇಶ್, ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಂ. ಚಂದ್ರಪ್ಪ, ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ರಿಜ್ವಾನ್ ಅರ್ಷದ್ ಮತ್ತಿತರ ಗಣ್ಯರ ಜತೆ – ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯ ಸರ್ಕಾರಿ ಸ್ವಾಮ್ಯದ ನಾಲ್ಕು ಸಾರಿಗೆ ನಿಗಮಗಳ ಪುನಶ್ಚೇತನಕ್ಕೆ ತಜ್ಞರ ಸಮಿತಿ ನೇಮಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶುಕ್ರವಾರ ನಡೆದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) 60ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ನಾಲ್ಕು ಸಾರಿಗೆ ನಿಗಮಗಳ 60 ಮಂದಿ ಚಾಲಕರಿಗೆ ಅಪಘಾತ ರಹಿತ ಚಾಲನೆಗಾಗಿ ಮುಖ್ಯಮಂತ್ರಿಯವರ ಚಿನ್ನದ ಪದಕ ಪ್ರದಾನ ಮಾಡಿ ಅವರು ಮಾತನಾಡಿದರು.

'ವರಮಾನ ಗಳಿಸುವ ಮಾದರಿಯ ಆಧಾರದಲ್ಲಿ ಸಾರಿಗೆ ನಿಗಮಗಳು ಕಾರ್ಯನಿರ್ವಹಿಸುತ್ತಿವೆ. ಆದರೂ, ನಷ್ಟದ ಸುಳಿಗೆ ಏಕೆ ಸಿಲುಕಿವೆ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಿದೆ. ಸಮಸ್ಯೆಗೆ ಕಾರಣ ಮತ್ತು ಪುನಶ್ಚೇತನಕ್ಕೆ ಇರುವ ಅವಕಾಶಗಳ ಕುರಿತು ಅಧ್ಯಯನ ನಡೆಸುವಂತೆ ತಜ್ಞರ ಸಮಿತಿಗೆ ಸೂಚಿಸಲಾಗುವುದು. ಡಿಸೆಂಬರ್ ಅಂತ್ಯದೊಳಗೆ ಅಧ್ಯಯನ ವರದಿ ಪಡೆದು, ಮುಂದಿನ ಬಜೆಟ್‌ನಲ್ಲಿ ಅಗತ್ಯ ಯೋಜನೆಗಳನ್ನು ಪ್ರಕಟಿಸಲಾಗುವುದು' ಎಂದರು.

ಸಾರಿಗೆ ನಿಗಮಗಳು ಅತ್ಯಾಧುನಿಕ ಕಾರ್ಯಾಗಾರ ಮತ್ತು ಯಂತ್ರೋಪಕರಣಗಳನ್ನು ಹೊಂದಿವೆ. ಅವುಗಳ ಸಮರ್ಪಕ ಬಳಕೆ ಕುರಿತು ಯೋಚಿಸಬೇಕಿದೆ. ಸರ್ಕಾರಿ ಸ್ವಾಮ್ಯದ ಕಾರ್ಯಾಗಾರಗಳಲ್ಲಿ ಖಾಸಗಿ ಬಸ್‌ಗಳಿಗೂ ಸೇವೆ ನೀಡುವ ಕುರಿತು ಪರಿಶೀಲನೆ ನಡೆಯಬೇಕಿದೆ. ಇರುವ ಎಲ್ಲ ಸಂಪನ್ಮೂಲಗಳನ್ನೂ ಬಳಸಿಕೊಂಡು ಈ ಸಂಸ್ಥೆಗಳನ್ನು ಲಾಭದಾಯಕವಾಗಿ ಪರಿವರ್ತಿಸಬೇಕು ಎಂದರು.

ಹೆಚ್ಚಿನ ನೆರವು:

ಸಾರಿಗೆ ನಿಗಮಗಳಿಗೆ ಎಲ್ಲ ಅವಧಿಯಲ್ಲೂ ಸಹಕಾರ ದೊರಕಿದೆ. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ₹2,300 ಕೋಟಿ ನೀಡಲಾಗಿತ್ತು. ತಾವು ಅಧಿಕಾರ ಸ್ವೀಕರಿಸಿದ ಬಳಿಕ ₹ 130 ಕೋಟಿ ನೀಡಲಾಗಿದೆ ಎಂದು ಬೊಮ್ಮಾಯಿ ಮಾಹಿತಿ ನೀಡಿದರು.

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, 'ಸರ್ಕಾರಿ ಸ್ವಾಮ್ಯದ ಸಾರಿಗೆ ನಿಗಮಗಳು ರಾಜ್ಯದ ಸಾರಿಗೆ ಕ್ಷೇತ್ರದ ದಿಕ್ಸೂಚಿಯಾಗಿ ಬದಲಾಗಬೇಕು. ನಿಗಮಗಳು ಬಿಟ್ಟ ಮಾರ್ಗಗಳಲ್ಲಿ ಮಾತ್ರ ಖಾಸಗಿಯವರು ಬಸ್ ಓಡಿಸುವಂತಹ ಸ್ಥಿತಿ ನಿರ್ಮಾಣವಾಗಬೇಕು. ಆಗ ನಿಗಮಗಳು ಬಲಿಷ್ಠವಾಗಿ ಬೆಳೆಯಲು ಸಾಧ್ಯ' ಎಂದರು.

ಸಾರಿಗೆ ಸಚಿವ ಬಿ. ಶ್ರೀರಾಮುಲು ಮಾತನಾಡಿ, 'ನಾಲ್ಕೂ ನಿಗಮಗಳ ಎಲ್ಲ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದಾಗಿ ಮುಖ್ಯಮಂತ್ರಿಯವರು ಭರವಸೆ ನೀಡಿದ್ದಾರೆ. ಈ ದಿಸೆಯಲ್ಲಿ ನೌಕರರು ಸಂಪೂರ್ಣ ಸಹಕಾರ ನೀಡಬೇಕು' ಎಂದು ಮನವಿ ಮಾಡಿದರು.

ಸಕಾಲ ಖಾತೆ ಸಚಿವ ಬಿ.ಸಿ. ನಾಗೇಶ್, ಆನ್‌ಲೈನ್ ಮೂಲಕ ಅಹವಾಲು ಸಲ್ಲಿಸುವ ವ್ಯವಸ್ಥೆಗೆ ಚಾಲನೆ ನೀಡಿ ಮಾತನಾಡಿದರು. ಸಾರಿಗೆ ನಿಗಮಗಳ ಸಿಬ್ಬಂದಿ, ಕುಟುಂಬದವರು ಹಾಗೂ ಮಕ್ಕಳಿಗೆ ಆನ್‌ಲೈನ್ ಮೂಲಕ ಕೌಶಲ ಅಭಿವೃದ್ಧಿ ತರಬೇತಿ ನೀಡುವ ಒಪ್ಪಂದವನ್ನು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ ಮತ್ತು ಇನ್ಫೋಸಿಸ್ ಕಂಪನಿಯ ಶಿಕ್ಷಣ, ತರಬೇತಿ ಮತ್ತು ಮೌಲ್ಯಮಾಪನ ವಿಭಾಗದ ಹಿರಿಯ ಉಪಾಧ್ಯಕ್ಷ ತಿರುಮಲ ಅರೋಹಿ ವಿನಿಮಯ ಮಾಡಿಕೊಂಡರು.

ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್ ಅಧ್ಯಕ್ಷತೆ ವಹಿಸಿದ್ದರು. ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಂ. ಚಂದ್ರಪ್ಪ, ಉಪಾಧ್ಯಕ್ಷ ಎಸ್.ಎನ್. ಈಶ್ವರಪ್ಪ, ಬಿಎಂಟಿಸಿ ಅಧ್ಯಕ್ಷ ಎನ್.ಎಸ್. ನಂದೀಶ್ ರೆಡ್ಡಿ, ಎಂ.ಆರ್. ವೆಂಕಟೇಶ್, ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆ ಅಧ್ಯಕ್ಷ ವಿ.ಎಸ್. ಪಾಟೀಲ, ಉಪಾಧ್ಯಕ್ಷ ಬಸವರಾಜ ಎಸ್. ಕೇಲಗಾರ, ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ, ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಶಾರದಾ ಸಂಪತ್, ಬಿಎಂಟಿಸಿ ವ್ಯವಸ್ಥಾಪಕ ಎಂ.ಟಿ. ರೇಜು ಉಪಸ್ಥಿತರಿದ್ದರು.

ಅಂಚೆ ಲಕೋಟೆ ಬಿಡುಗಡೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 60 ವರ್ಷಗಳು ತುಂಬಿರುವ ಪ್ರಯುಕ್ತ ಅಂಚೆ ಇಲಾಖೆ ಹೊರತಂದಿರುವ ವಿಶೇಷ ಅಂಚೆ ಲಕೋಟೆಯನ್ನು ಸಮಾರಂಭದಲ್ಲಿ ಬಿಡುಗಡೆ ಮಾಡಲಾಯಿತು.

ಕೆಂಪೇಗೌಡ ಬಸ್ ನಿಲ್ದಾಣ 50 ವರ್ಷ ಪೂರೈಸಿರುವುದಕ್ಕಾಗಿ ರೂಪಿಸಿರುವ ಸ್ಮರಣ ಸಂಚಿಕೆಯನ್ನೂ ಅನಾವರಣ ಮಾಡಲಾಯಿತು.

ಬಟ್ಟೆ ಬ್ಯಾಗ್ ಖರೀದಿಯಲ್ಲಿ ₹ 6.18 ಕೋಟಿ ಅವ್ಯವಹಾರ

ರೋಹಿಣಿ ಸಿಂಧೂರಿ ವಿರುದ್ಧ ಆರೋಪ

ಪ್ರಜಾವಾಣಿ ವಾರ್ತೆ

ಮೈಸೂರು: 'ಪ್ಲಾಸ್ಟಿಕ್ ಮುಕ್ತ ನಗರ ಕಾರ್ಯಕ್ರಮದ ಅಡಿ ನಾಗರಿಕರಿಗೆ ಉಚಿತವಾಗಿ ವಿತರಿಸಲು ನಡೆದ ಬಟ್ಟೆ ಬ್ಯಾಗ್ ಖರೀದಿಯಲ್ಲಿ ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ₹ 6.18 ಕೋಟಿ ಅವ್ಯವಹಾರ ನಡೆಸಿದ್ದು, ಅವರನ್ನು ಕೂಡಲೇ ಸೇವೆಯಿಂದ ವಜಾ ಮಾಡಬೇಕು' ಎಂದು ಶಾಸಕ ಸಾ.ರಾ. ಮಹೇಶ್ ಆಗ್ರಹಿಸಿದರು.

'ಸ್ವಚ್ಛ ಭಾರತ್ ಯೋಜನೆ ಹಾಗೂ 15ನೇ ಹಣಕಾಸು ಯೋಜನೆಯಡಿ ಪ್ರತಿ ಬ್ಯಾಗಿಗೆ ₹ 52ರಂತೆ ಒಟ್ಟು ₹ 7.65 ಕೋಟಿ ವೆಚ್ಚದಲ್ಲಿ 14.71 ಲಕ್ಷ ಬ್ಯಾಗ್ ಪೂರೈಸಲು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಮಾರ್ಚ್ 4ರಂದು ಗುತ್ತಿಗೆ ನೀಡಲಾಗಿತ್ತು. ಆದರೆ ಮಾರುಕಟ್ಟೆಯಲ್ಲಿ ಬ್ಯಾಗಿನ ದರ ಕೇವಲ ₹ 8ರಿಂದ 13 ಇತ್ತು. ಆ ದರದಲ್ಲಿ ₹ 1.47 ಕೋಟಿ ಮಾತ್ರ ವೆಚ್ಚವಾಗುತ್ತದೆ' ಎಂದು ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಬ್ಯಾಗ್ ಖರೀದಿಗೆ ಪುರಸಭೆ, ಪಾಲಿಕೆ, ಗ್ರಾಮಪಂಚಾಯಿತಿ ಸಾಮಾನ್ಯ ಸಭೆಗಳ ಅನುಮತಿ ಪಡೆದಿಲ್ಲ. ಈಗ 14 ಲಕ್ಷದಷ್ಟು ಬ್ಯಾಗ್‌ಗಳು ಪೂರೈಕೆಯಾಗಿವೆ. ನಿಗಮದ ಗುತ್ತಿಗೆದಾರನಿಗೆ ಹಣ ಪಾವತಿಯಾಗಿಲ್ಲ. ಕೊಡುವುದೆಲ್ಲವನ್ನೂ ಹಿಂದಿನ ಜಿಲ್ಲಾಧಿಕಾರಿಗೆ ಕೊಟ್ಟಾಗಿದೆ. ಸಾಲ ಮಾಡಿರುವುದರಿಂದ ಬಿಲ್ ಹಣವನ್ನು ಮಂಜೂರು ಮಾಡಿಸಿಕೊಡಿ ಎಂದು ಮಹಿಳಾ ಅಧಿಕಾರಿಯೊಬ್ಬರ ಪತಿಯಾಗಿರುವ ಗುತ್ತಿಗೆದಾರ ಅಳಲು ತೋಡಿಕೊಂಡಿದ್ದಾರೆ' ಎಂದರು. ಅವರ ಹೆಸರನ್ನು ಶಾಸಕರು ಹೇಳಲಿಲ್ಲ.

'ಸಿಂಧೂರಿಯವರನ್ನು ಸೇವೆಯಿಂದ ವಜಾ ಮಾಡದಿದ್ದರೆ ಮುಖ್ಯ ಕಾರ್ಯದರ್ಶಿ ಕಚೇರಿ ಮುಂದೆ ಆಮರಣಾಂತ ಧರಣಿ ನಡೆಸುವೆ' ಎಂದರು.

'ಕೈಮಗ್ಗ ನಿಗಮದಿಂದ ದರ ನಿಗದಿ'

'ಶಾಸಕರ ಆರೋಪಗಳು ಆಧಾರರಹಿತ. ಬ್ಯಾಗ್ ಪೂರೈಕೆಯ ಗುತ್ತಿಗೆಯನ್ನು ನಿಯಮಾನುಸಾರ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ನೀಡಲಾಗಿತ್ತು. ನಿಗಮವೇ ದರ ನಿಗದಿ ಮಾಡಿದ್ದು, ನನ್ನ ಪಾತ್ರ ಇಲ್ಲ. ಪ್ರಾದೇಶಿಕ ಜವಳಿ ಪ್ರಯೋಗಾಲಯ ಸಮಿತಿಯು ಬ್ಯಾಗ್‌ಗಳ ಗುಣಮಟ್ಟ ದೃಢೀಕರಿಸಿತ್ತು. ನಾನು ಜಿಲ್ಲಾಧಿಕಾರಿಯಾಗಿದ್ದಾಗ ಒಂದು ಪೈಸೆಯನ್ನೂ ನಿಗಮಕ್ಕೆ ನೀಡಿಲ್ಲ. ಈಗ ₹ 9.59 ಲಕ್ಷ ಮಾತ್ರ ನಿಗಮಕ್ಕೆ ಪಾವತಿಯಾಗಿದೆ' ಎಂದು ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತೆ ರೋಹಿಣಿ ಸಿಂಧೂರಿ ಸ್ಪಷ್ಟನೆ ನೀಡಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	116.42	6,383	9,569
ಹಾರಂಗಿ	2,859	2,858.08	2,604	2,725
ಕಬಿನಿ	2284	2,279.99	4,111	5,000
ಹೇಮಾವತಿ	2,922	2,916.12	1,829	5,272
ಲಿಂಗನಮಕ್ಕಿ	1,819	1,812.80	7,745	-
ಸೂಪಾ (ಮೀ)	564	554.74	3,307	4,598
ಮಾಣಿ	594.36	586.12	1,319	-
ತುಂಗಭದ್ರಾ	1,633	1,632.92	15,195	10,444
ಮಲಪ್ರಭಾ	2079.50	2,078.70	1,294	1,294
ಘಟಪ್ರಭಾ	2175	2,175.00	382	382
ಭದ್ರಾ	186	185.50	3,751	3,751
ಆಲಮಟ್ಟಿ (ಮೀ)	519.60	519.60	4,119	4,119
ನಾರಾಯಣಪುರ (ಮೀ)	492.25	491.96	1,950	5,520

* ನೆಲಮಟ್ಟದಿಂದ

ಅಮಿತ್ ಮಾತು: ಹಿತ–ಅಹಿತ

ಒಂದನೇ ಪುಟದಿಂದ...

ಹುಬ್ಬಳ್ಳಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, 'ಮುಖ್ಯಮಂತ್ರಿಯಾಗಿ ಬೊಮ್ಮಾಯಿ ಒಂದು ತಿಂಗಳಲ್ಲಿ ಉತ್ತಮ ಆಡಳಿತ ನೀಡಿದ್ದಾರೆ. ಮುಖ್ಯಮಂತ್ರಿಯಾಗಿ ಯಾರು ಇರುತ್ತಾರೊ ಅವರ ನೇತೃತ್ವದಲ್ಲಿಯೇ ಮುಂದಿನ ಚುನಾವಣೆ ಎದುರಿಸುವುದು ಸಾಮಾನ್ಯ. ಅಮಿತ್ ಶಾ ಅವರು ಇದೇ ಮಾತು ಹೇಳಿದ್ದಾರೆ. ಇದರಲ್ಲಿ ವಿಶೇಷವೇನೂ ಇಲ್ಲ' ಎಂದರು.

'ಬಿ.ಎಸ್. ಯಡಿಯೂರಪ್ಪ ಹಾಗೂ ಜಗದೀಶ ಶೆಟ್ಟರ್ ಅವರ ರಾಜಕೀಯ ಅನುಭವವನ್ನು ಮುಂಬರುವ ದಿನಗಳಲ್ಲಿ ಪಕ್ಷ ಸಮರ್ಪಕವಾಗಿ ಬಳಸಿಕೊಳ್ಳಲಿದೆ. ಪಕ್ಷದಲ್ಲಿ ಯಾವ ಹಿರಿಯರನ್ನೂ ಕಡೆಗಣಿಸಿಲ್ಲ' ಎಂದೂ ಜೋಶಿ ಹೇಳಿದರು.

ಕೋವಿಡ್‌ನಿಂದ ಆರ್ಥಿಕ ಸಂಕಷ್ಟ–ದೇಣಿಗೆ ದುರ್ಬಳಕೆ ಆರೋಪ

ಮೃಗಾಲಯ ಪ್ರಾಧಿಕಾರ ಅಧ್ಯಕ್ಷರಿಗೆ ₹21 ಲಕ್ಷದ ಕಾರು!

• ಕೆ.ಓಂಕಾರ ಮೂರ್ತಿ

ಮೈಸೂರು: ಕೋವಿಡ್‌ನಿಂದ ಮೃಗಾಲಯಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ದೇಣಿಗೆಗಾಗಿ ಮನವಿ ಮಾಡುತ್ತಿದ್ದರೆ, ಕರ್ನಾಟಕ ಮೃಗಾಲಯ ಪ್ರಾಧಿಕಾರವು ಅಧ್ಯಕ್ಷರಿಗಾಗಿ ₹ 21 ಲಕ್ಷದ ಇನೋವಾ ಕ್ರಿಸ್ಟಾ ಕಾರು ಖರೀದಿಸಿರುವುದು ಪ್ರಾಣಿಪ್ರಿಯರ ಹುಬ್ಬೇರಿಸಿದೆ.

ಈಗಿನ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಈ ಕಾರು ಬಳಸುತ್ತಿದ್ದು, ಪ್ರಾಣಿಗಳ ಹೆಸರಲ್ಲಿ ಜನರಿಂದ ಸಂಗ್ರಹಿಸಿದ ದೇಣಿಗೆ ದುರ್ಬಳಕೆಯಾಗಿದೆ ಎಂಬ ಆರೋಪವೂ ಕೇಳಿಬಂದಿದೆ.

ಐದು ತಿಂಗಳ ಹಿಂದೆ ನಡೆದ ಪ್ರಾಧಿಕಾರದ ಆಡಳಿತ ಮಂಡಳಿ ಸಭೆಯಲ್ಲಿ, ಹೊಸ ಕಾರು ಖರೀದಿ ನಿರ್ಣಯ ಕೈಗೊಳ್ಳಲಾಗಿತ್ತು ಎಂದು ತಿಳಿದು ಬಂದಿದೆ. ಅಧ್ಯಕ್ಷರ ಹಳೆಯ ಕಾರನ್ನು ಇಲ್ಲಿನ ಚಾಮರಾಜೇಂದ್ರ ಮೃಗಾಲಯ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ ಅವರಿಗೆ ನೀಡಲಾಗಿದೆ.

> **ಮೈಸೂರು ಮೃಗಾಲಯಕ್ಕೆ ಬಂದ ದೇಣಿಗೆ ಹಣ ದುರುಪಯೋಗಪಡಿಸಿಕೊಂಡಿಲ್ಲ. ಮೃಗಾಲಯ ಪ್ರಾಧಿಕಾರದ ಹಣ ಬಳಸಿ ಕಾರು ಖರೀದಿಸಲಾಗಿದೆ**
>
> **ಅಜಿತ್ ಕುಲಕರ್ಣಿ,** ಕಾರ್ಯನಿರ್ವಾಹಕ ನಿರ್ದೇಶಕ, ಮೈಸೂರು ಮೃಗಾಲಯ

ಪ್ರಜಾವಾಣಿ ವಿಶೇಷ



> **ಕೋವಿಡ್‌ಗೆ ಮೊದಲೇ ಕಾರು ಖರೀದಿಗೆ ನಿರ್ಧರಿಸಲಾಗಿತ್ತು. ಪ್ರಾಧಿಕಾರ ಆಡಳಿತ ಮಂಡಳಿ ಸಭೆಯಲ್ಲಿ ಒಪ್ಪಿಗೆಯೂ ಸಿಕ್ಕಿತ್ತು. ಕಾರು ಬಂದು ತಿಂಗಳಾಯಿತು**
>
> **ಎಲ್.ಆರ್.ಮಹದೇವಸ್ವಾಮಿ,** ಅಧ್ಯಕ್ಷ, ಕರ್ನಾಟಕ ಮೃಗಾಲಯ ಪ್ರಾಧಿಕಾರ

'ಇದುವರೆಗೆ ಬಳಸುತ್ತಿದ್ದ ಕಾರು ಹಳೆಯದ್ದಾಗಿದ್ದು, 2.35 ಲಕ್ಷ ಕಿ.ಮೀ ಸಂಚರಿಸಿದೆ. ಬಳಕೆಗೆ ಯೋಗ್ಯವಾಗಿಲ್ಲ. ರಾಜ್ಯದ ಎಲ್ಲಾ ಮೃಗಾಲಯಗಳಿಗೆ ಭೇಟಿ ನೀಡುತ್ತಿದ್ದು, ಹೊಸ ಕಾರಿನ ಅಗತ್ಯವಿದೆ' ಎಂದು ಮಹಾದೇವಸ್ವಾಮಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಇದೇ ವೇಳೆ, 'ಬಳಕೆಗೆ ಯೋಗ್ಯವಲ್ಲವೆಂದು ಅಧ್ಯಕ್ಷರೇ ಹೇಳಿದ ಮೇಲೆ ಅದನ್ನು ಕಾರ್ಯನಿರ್ವಾಹಕ ನಿರ್ದೇಶಕರಿಗೆ ನೀಡಿದ್ದೇಕೆ' ಎಂಬ ಪ್ರಶ್ನೆಯನ್ನು ಸಾರ್ವಜನಿಕರು ಎತ್ತಿದ್ದಾರೆ.

ಕೋವಿಡ್ ಲಾಕ್‌ಡೌನ್ ವೇಳೆ ಪ್ರವಾಸಿಗರಿಗೆ ಪ್ರವೇಶ ನಿರ್ಬಂಧ ವಿಧಿಸಿದ್ದರಿಂದ ರಾಜ್ಯದ 9 ಮೃಗಾಲಯಗಳಲ್ಲಿ ಆದಾಯ ನಷ್ಟ ಉಂಟಾಗಿತ್ತು. ಪ್ರಾಧಿಕಾರಕ್ಕೆ 2018–19ರಲ್ಲಿ ₹ 58.84 ಲಕ್ಷ, 2019–20ರಲ್ಲಿ ₹ 66.49 ಲಕ್ಷ ಆದಾಯ ಬಂದಿದ್ದರೆ, 2020–21ರಲ್ಲಿ ಕೇವಲ ₹ 24.26 ಲಕ್ಷ ಆದಾಯವಷ್ಟೇ ಬಂದಿದೆ. ಅದೇ ಕಾರಣಕ್ಕಾಗಿ ಪ್ರಾಣಿ ದತ್ತು ಪಡೆದು ದೇಣಿಗೆ ನೀಡುವಂತೆ ನಟ ದರ್ಶನ್ ನೆರವು ಪಡೆದು ಮನವಿ ಮಾಡಿತ್ತು.

ಕಾರು ಇರಲಿಲ್ಲ: '2014–15ರಲ್ಲಿ ಅಂದಿನ ಅಧ್ಯಕ್ಷರಿಗಾಗಿ ಕಾರು ಖರೀದಿಸಲಾಗಿತ್ತು. ಆದರೆ, ನನಗೆ ಕಾರು ಇಲ್ಲ. ಹೀಗಾಗಿ, ಹಳೆಯ ಕಾರು ನನಗೆ ನೀಡಿ, ಅಧ್ಯಕ್ಷರಿಗೆ ಹೊಸ ಕಾರು ನೀಡಲಾಗಿದೆ. ತಾಂತ್ರಿಕವಾಗಿ ನೋಡುವುದಾದರೆ ಕಾರ್ಯನಿರ್ವಾಹಕ ನಿರ್ದೇಶಕರಿಗೂ ಹೊಸ ಕಾರು ಖರೀದಿಸಬೇಕು' ಎಂದು ಅಜಿತ್ ಕುಲಕರ್ಣಿ ತಿಳಿಸಿದರು.

'ಜೂನ್‌ನಲ್ಲಿ ಪ್ರಾಣಿ ದತ್ತು ಪ್ರಕ್ರಿಯೆಯಿಂದ ನಮಗೆ ಸಿಕ್ಕಿದ್ದು ₹ 1.5 ಕೋಟಿ. ಆದರೆ, ಮೃಗಾಲಯ ನಿರ್ವಹಣೆಗೆ ತಿಂಗಳಿಗೆ ₹ 2 ಕೋಟಿ ಬೇಕು' ಎಂದರು.

ಜೇನುತುಪ್ಪ ಮತ್ತು ಹುಣಸೇಹಣ್ಣನ್ನು ಮಿಶ್ರಣ ಮಾಡಿ, ದಿನಕ್ಕೆ 4–5 ಬಾರಿ ಬಾಯಿಹುಣ್ಣಿಗೆ ಸವರಿಕೊಂಡರೆ, ಬಾಯಿಹುಣ್ಣು ವಾಸಿಯಾಗುತ್ತದೆ



ಲಿಂಗ ಸೂಕ್ಷ್ಮತೆಯತ್ತ ಒಂದು ಪುಟ್ಟ ಹೆಜ್ಜೆ..



ಎಸ್ಸೆಚ್

'ಅತ್ಯಾಚಾರದ ಸುದ್ದಿಗಳನ್ನು ಕೇಳಿದಾಗಲೆಲ್ಲ ಆಘಾತದ ಜೊತೆ ಚಿಂತೆಯೂ ಹೆಚ್ಚಾಗ್ತಾ ಇದೆ' ಎನ್ನುವ ಗೃಹಿಣಿ ಸೀಮಾಳ ಆತಂಕಕ್ಕೆ ಕಾರಣಗಳೂ ಸಾಕಷ್ಟಿವೆ. ಆರು ವರ್ಷ ವಯಸ್ಸಿನ ಮಗನ ತಾಯಿಯಾದ ಆಕೆಗೆ ಮುಂದೆ ತನ್ನ ಮಗ ಏನಾಗಿಬಿಡ್ತಾನೋ ಎಂಬ ಚಿಂತೆ.

'ನಮ್ಮ ಸುತ್ತಮುತ್ತ ನಡೀತಾ ಇರುವ ಘಟನೆಗಳು ಭಯ ಹುಟ್ಟಿಸಿಬಿಟ್ಟಿವೆ. ಒಬ್ಬ ಮನುಷ್ಯಳಾಗಿ ತೊಂದರೆಗೀಡಾದ ಬೇರೆ ಹೆಣ್ಣುಮಕ್ಕಳ ಬಗ್ಗೆ ಕಾಳಜಿ ಒಂದು ಕಡೆಯಾದರೆ, ಒಬ್ಬಳು ತಾಯಿಯಾಗಿ ನನ್ನ ಮಗ ಬೇರೆ ಹೆಣ್ಣುಮಕ್ಕಳನ್ನು ಗೌರವಿಸುವಂತಹ ಉತ್ತಮ ವ್ಯಕ್ತಿಯನ್ನಾಗಿ ಮಾಡಬೇಕಾದ ಹೊಣೆಗಾರಿಕೆ ಇನ್ನೊಂದು ಕಡೆ' ಎನ್ನುವ ಸೀಮಾ, ಗಂಡುಮಕ್ಕಳಿಗೆ ಲಿಂಗ ಸೂಕ್ಷ್ಮತೆಯನ್ನು ಚಿಕ್ಕಂದಿನಿಂದಲೇ ಬೆಳೆಸಬೇಕಾಗಿದೆ ಎಂಬುದರ ಬಗ್ಗೆ ಖಚಿತ ನಿಲುವನ್ನೂ ಹೊಂದಿದ್ದಾಳೆ.

ಹೌದು, ಗಂಡು ಮಕ್ಕಳಿಗೆ ಚಿಕ್ಕಂದಿನಿಂದಲೇ ಮಹಿಳೆಯರನ್ನು ಗೌರವಿಸುವಂತಹ ಸಂಸ್ಕಾರವನ್ನು ತಂದೆ- ತಾಯಿ ನೀಡಿದರೆ ಸಮಾಜದಲ್ಲಿ ಹೆಣ್ಣುಮಕ್ಕಳ ಮೇಲೆ ನಡೆಯುವ ದೌರ್ಜನ್ಯವನ್ನು ಕೆಲವುಮಟ್ಟಿಗಾದರೂ ಕಡಿಮೆ ಮಾಡಬಹುದು ಎಂಬಂತಹ ಚರ್ಚೆ ಕಳೆದ ಕೆಲವು ವರ್ಷಗಳಿಂದ ನಡೆಯುತ್ತಿರುವುದು ಆಶಾದಾಯಕ ಬೆಳವಣಿಗೆ. ನಮ್ಮ ಸುತ್ತಲೂ ಇರುವ ಪ್ರತಿಯೊಬ್ಬರೂ ಸುರಕ್ಷಿತರಾಗಿರಬೇಕು, ಅವರಲ್ಲಿ ಭದ್ರತೆಯ ಭಾವನೆಯಿರಬೇಕು, ಒಂದು ಉತ್ತಮವಾದ, ಲಿಂಗ ಸಮಾನತೆ ಇರುವ, ಸುಭದ್ರ ಸಮಾಜದ ಸೃಷ್ಟಿಗೆ ಅನುವಾಗುವಂತಹ ಗಂಡು ಮಕ್ಕಳನ್ನು ಬೆಳೆಸಬೇಕು ಎಂಬ ಚಿಂತನೆಗೆ ತಾಯಿ ಮಾತ್ರವಲ್ಲ, ತಂದೆ ಕೂಡ ಪ್ರಮುಖ ಪಾತ್ರ ವಹಿಸಬೇಕು ಎಂಬ ಚಿಂತನೆಗಳು ಗರಿಗೆದರುತ್ತಿವೆ.

ಅವಳ ಮೇಲೇಕೆ ದೂರು?

ಎಂತಹ ಸಮಾಜದಲ್ಲಿ ನಾವು ಬದುಕುತ್ತಿದ್ದೇವೆಂದರೆ, ಮಹಿಳೆಯರು ಆಧುನಿಕ ಉಡುಪು ಧರಿಸಿದರೂ, ಕತ್ತಲೆಯಾದ ಮೇಲೆ ಹೊರಗೆ ಅಡ್ಡಾಡಿದರೂ ಅವರನ್ನೇ ಆಕ್ಷೇಪಿಸುವ, ಟೀಕಿಸುವ, ಮೂದಲಿಸುವ ಮಂದಿಯೇ ಹೆಚ್ಚು. ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದರೆ, ಅತ್ಯಾಚಾರ ಸಂಭವಿಸಿದರೆ, ಅವಮಾನಿಸಿದರೆ ಅಥವಾ ಅವರನ್ನು ಹಿಂಬಾಲಿಸುತ್ತ ಕಿರುಕುಳ ನೀಡಿದರೆ ಹಲವರು ನಿರ್ಲಿಪ್ತವಾಗಿದ್ದರೆ, ಇನ್ನು ಕೆಲವರು ಹೆಣ್ಣುಮಕ್ಕಳದ್ದೇ ತಪ್ಪು ಎಂದು ಬಿಂಬಿಸಿಬಿಡುತ್ತಾರೆ. 'ಆಕೆ ಅಷ್ಹೊತ್ತಿನಲ್ಲಿ ಒಂಟಿಯಾಗಿ ಅಲ್ಲಿಗೆ ಹೋಗಿದ್ದೇಕೆ?', 'ಬಾಯ್‌ಫ್ರೆಂಡ್ ಜೊತೆ ಹೊತ್ತಲ್ಲದ ಹೊತ್ತಿನಲ್ಲಿ ತಿರುಗಿದರೆ ಇನ್ನೇನಾಗುತ್ತದೆ?', 'ಶಿಸ್ತಾಗಿ ಬಟ್ಟೆ ಹಾಕದೆ, ಲಂಗುಲಗಾಮಿಲ್ಲದೇ ಓಡಾಡಿದರೆ ಹುಡುಗರಾದರೂ ಏನು ಮಾಡುತ್ತಾರೆ?'... ಎಂಬಂತಹ ತರಹೇವಾರಿ ಮಾತುಗಳು, ಸೂಕ್ಷ್ಮತೆ ಇಲ್ಲದ ಹೇಳಿಕೆಗಳು ರಾರಾಜಿಸುತ್ತವೆ.

> ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಇತ್ತೀಚೆಗೆ ಜಾಸ್ತಿಯಾಗುತ್ತಿದೆ. ಇದನ್ನು ತಡೆಯುವ ನಿಟ್ಟಿನಲ್ಲಿ ಮಹಿಳೆಯರನ್ನು ಗೌರವಿಸುವುದು, ಲಿಂಗ ಸೂಕ್ಷ್ಮತೆ ಬೆಳೆಸಿಕೊಳ್ಳುವುದನ್ನು ಗಂಡು ಮಕ್ಕಳಿಗೆ ಕಲಿಸಬೇಕಾಗಿದೆ.

'ಪೋಷಕರು ತಾವು ಹೇಳಿದಂತೆ ಮಕ್ಕಳು ಕೇಳಬೇಕು, ಅದರಂತೆ ಆಗಬೇಕು ಎಂಬುದನ್ನು ಬಿಟ್ಟು ತಮ್ಮಂತೆಯೇ ಅಂದರೆ ಮಕ್ಕಳಿಗೆ ತಾವೇ ಆದರ್ಶಪ್ರಾಯರಾಗಬೇಕು ಎಂದುಕೊಂಡರೆ ಒಳ್ಳೆಯ ಸಮಾಜ ನಿರ್ಮಾಣ ಸಾಧ್ಯ. ಹೆಂಡತಿ, ತಾಯಿ, ಸಹೋದರಿ, ಇತರ ಮಹಿಳೆಯರನ್ನು ಗೌರವಿಸುವುದು, ಅವರೂ ಸಮಾನರು ಎಂಬುದನ್ನು ಮನಗಾಣುವುದು, ದೈಹಿಕವಾಗಿ ತಾವು ಬಲಾಢ್ಯರು ಎಂಬ ಅಹಂ ಬಿಟ್ಟು ಕರುಣೆಯಿಂದ ವರ್ತಿಸಿದರೆ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಖಂಡಿತ ಕಡಿಮೆಯಾಗುತ್ತ ಹೋಗುತ್ತದೆ' ಎನ್ನುತ್ತಾರೆ ಆಪ್ತ ಸಮಾಲೋಚಕಿ ಪ್ರಮೀಳಾ ಎಸ್.

ನಾವೆಷ್ಟೇ ಪ್ರಗತಿಪರರು ಎಂದುಕೊಂಡರೂ ಮಕ್ಕಳ ಎದುರು ಪ್ರೀತಿ- ಪ್ರೇಮ, ಲೈಂಗಿಕ ವಿಷಯಗಳ ಬಗ್ಗೆ ಮಾತನಾಡಲು ಹಿಂಜರಿಯುತ್ತೇವೆ; ಗುಟ್ಟು ಮಾಡುತ್ತೇವೆ. ಆದರೆ ತಂತ್ರಜ್ಞಾನವೆಂಬುದು ಇವನ್ನೆಲ್ಲ ಮಕ್ಕಳ ಅಂಗೈಯಲ್ಲಿ ತಂದಿರಿಸಿದೆ. ಇಂತಹ ಮಾಹಿತಿಗಳನ್ನು, ಕೆಲವೊಮ್ಮೆ ಪೋಷಕರಿಗೆ ಗೊತ್ತಿರುವುದಕ್ಕಿಂತ ಹೆಚ್ಚು ವಿವರಗಳನ್ನು ತಿಳಿದುಕೊಂಡುಬಿಡುತ್ತಾರೆ. ಅಂತರ್ಜಾಲ, ವಿವಿಧ ಮಾಧ್ಯಮಗಳ ಮೂಲಕ ಯಾವುದು ಸಹಜ, ಯಾವುದನ್ನು ಒಪ್ಪಿಕೊಳ್ಳಬೇಕು ಎಂಬುದನ್ನು ತಿಳಿದುಕೊಳ್ಳಬಹುದು, ನಿಜ.

ಮಕ್ಕಳ ಜೊತೆ ಮುಕ್ತವಾಗಿ ಮಾತನಾಡಿ

'ಆದರೆ ಮಕ್ಕಳು ಅಂತರ್ಜಾಲದಲ್ಲಿ ಓದುವಂತಹ, ನೋಡುವಂತಹ ವಿಷಯಗಳು, ಮಾಹಿತಿ ಹೆಚ್ಚಾಗಿ ಸಿದ್ಧಮಾದರಿಯಾದ ಲಿಂಗ ಅಸೂಕ್ಷ್ಮತೆ ಮನೋಭಾವವನ್ನು ಉದ್ದೀಪಿಸುವಂತಹವು' ಎನ್ನುವ ಪ್ರಮೀಳಾ, 'ಮಕ್ಕಳ ಜೊತೆ ಹೆಚ್ಚು ಹೆಚ್ಚಾಗಿ ಮಾತುಕತೆ ನಡೆಸಿ. ನಿಮ್ಮ ಗಂಡು ಮಕ್ಕಳ ಜೊತೆ ಪ್ರೀತಿ–ಪ್ರೇಮ, ಡೇಟಿಂಗ್, ದೈಹಿಕ ಸಾಮೀಪ್ಯ ಅದೂ ಒಪ್ಪಿತ ಲೈಂಗಿಕ ಸಂಬಂಧದ ಬಗ್ಗೆ ಮಾತನಾಡಿ. ಅಂತರ್ಜಾಲದಲ್ಲಿ, ಸಾಮಾಜಿಕ ಮಾಧ್ಯಮದಲ್ಲಿ ವೈಭವೀಕರಿಸುವ ಲೈಂಗಿಕ ವಿಷಯಗಳ ಹಿಂದಿನ ನಿಜಾಂಶದ ಬಗ್ಗೆ ವಿವರಿಸಿ. ಮಹಿಳೆಯರು ಭೋಗದ ವಸ್ತುಗಳಲ್ಲ, ಅವರನ್ನು ಸಮಾನವಾಗಿ ಕಾಣಬೇಕು ಎಂದು ತಿಳಿಹೇಳಿ' ಎಂದು ಸಲಹೆ ನೀಡುತ್ತಾರೆ.

ಹೆಣ್ಣುಮಕ್ಕಳನ್ನು ಗೌರವಿಸುವುದು ಎಂದರೆ ಲಿಂಗ ಸೂಕ್ಷ್ಮತೆ ಬೆಳೆಸಿಕೊಳ್ಳುವುದು, ಆಕ್ರಮಣಕಾರಿ ಮನೋಭಾವ ತ್ಯಜಿಸುವುದು, ಅವರು ಎರಡನೇ ದರ್ಜೆ ನಾಗರಿಕರಲ್ಲ ಎಂದು ಮನದಟ್ಟು ಮಾಡುವುದು. ಹಾಗೆಯೇ ಇಂತಹ ಮನೋಭಾವದಿಂದ ಬೀಗುವುದು, ಮೇಲರಿಮೆ ಬೆಳೆಸಿಕೊಳ್ಳುವುದೂ ಸರಿಯಲ್ಲ. ಇದನ್ನು ಗಂಡು ಮಕ್ಕಳಿಗೆ ಚಿಕ್ಕಂದಿನಿಂದಲೇ ಕಲಿಸಿದರೆ ಸೂಕ್ತ. ಹೆಣ್ಣುಮಕ್ಕಳಿಗೆ ಅಗೌರವ ತೋರಿದರೆ ಗಂಡುಮಕ್ಕಳನ್ನು ಖಂಡಿಸಿದರೆ ತಪ್ಪೇನಿಲ್ಲ. ತಾಯಿ, ಸಹೋದರಿ ಹಾಗೂ ಇತರ ಮಹಿಳೆಯರ ಜೊತೆ ಹೇಗೆ ನಡೆದುಕೊಳ್ಳುತ್ತಾರೆ ಎಂಬುದನ್ನು ಅವಲೋಕಿಸಿ, ಅವರ ನಡವಳಿಕೆ ತಪ್ಪೆನಿಸಿದರೆ ಸರಿಪಡಿಸಿ. ಚಿಕ್ಕಂದಿನಲ್ಲಿ ಅವರ ನಡವಳಿಕೆಯು ಮುಂದೆ ಅವರು ಮಹಿಳೆಯರ ಜೊತೆ ಹೇಗೆ ನಡೆದುಕೊಳ್ಳುತ್ತಾರೆ ಎಂಬುದರ ಸಂಕೇತ.

ಬೆಲ್ಲ... ತಿನ್ನಲೂ ರುಚಿ ಆರೋಗ್ಯಕ್ಕೂ ಉತ್ತಮ

ಮನೆ ಮದ್ದು

ಡಾ. ಬ್ರಹ್ಮಾನಂದ ನಾಯಕ



ಬೆಲ್ಲ... ಇದನ್ನು ಕೇಳಿದಾಕ್ಷಣ ಬಾಯಲ್ಲಿ ನೀರೂರುತ್ತದೆ. ಬೆಲ್ಲ ಕಬ್ಬಿನ ರಸದಿಂದ ಪಡೆಯುವ ಸಂಸ್ಕರಿಸದ ಸಕ್ಕರೆಯ ಜನಪ್ರಿಯ ಸಾಂಪ್ರದಾಯಿಕ ರೂಪ. ನೈಸರ್ಗಿಕ ಸಿಹಿಕಾರಕ ಅಂಶ ಹೊಂದಿರುವ ಬೆಲ್ಲ ಅದ್ಭುತವಾದ ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ ಹಾಗೂ ಇದು ಸಕ್ಕರೆಗೆ ಬದಲಿಯಾಗಿದೆ. ಪುರಾತನ ಆಯುರ್ವೇದ ಕಾಲದಿಂದಲೂ ಬೆಲ್ಲವನ್ನು ವೈದ್ಯಕೀಯ ಉಪಯೋಗಗಳಿಗಾಗಿ ಬಳಸುತ್ತಿದ್ದರು.

ಸಕ್ಕರೆಯು ಆರೋಗ್ಯದ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತದೆ ಎನ್ನುವುದು ತಜ್ಞರ ಅಭಿಪ್ರಾಯ. ಸಕ್ಕರೆಯು ಪೋಷಕಾಂಶ, ಖನಿಜ ಹಾಗೂ ಸಸ್ಯ ರಾಸಾಯನಿಕ ಅಂಶಗಳನ್ನು ಹೊಂದಿರುವುದಿಲ್ಲ. ಆ ಕಾರಣಕ್ಕೆ ಸಕ್ಕರೆ ಬದಲಾಗಿ ಬೆಲ್ಲವನ್ನು ಬಳಸಲಾಗುತ್ತದೆ.

ಬೆಲ್ಲ ಹಾಗೂ ಆರೋಗ್ಯ

ಬೆಲ್ಲವು ಹಲವು ರೀತಿಯಲ್ಲಿ ಆರೋಗ್ಯಕ್ಕೆ ಪ್ರಯೋಜನಕಾರಿ. ಹಲವು ಜಾನಪದ ಹಾಗೂ ಆಯರ್ವೇದ ಔಷಧಿ ತಯಾರಿಕೆಯಲ್ಲಿ ಬೆಲ್ಲವನ್ನು ಬಳಸಲಾಗುತ್ತದೆ. ಇದರಲ್ಲಿ ಆ್ಯಂಟಿಆಕ್ಸಿಡೆಂಟ್ ಅಂಶ ಅಧಿಕವಿದ್ದು, ಮೂತ್ರವರ್ಧಕ ಗುಣಲಕ್ಷಣಗಳನ್ನು ಹೊಂದಿದೆ. ಭಾರತೀಯ ಸಾಂಪ್ರದಾಯಿಕ ಸಿಹಿಕಾರಕವಾದ ಬೆಲ್ಲವು ಉಸಿರಾಟದ ಸಮಸ್ಯೆಗಳಿಗೆ ಅತ್ಯುತ್ತಮ ಪರಿಹಾರವಾಗಿದೆ. ಬ್ರಾಂಕೈಟಿಸ್ ಹಾಗೂ ಆಸ್ತಮಾ ಚಿಕಿತ್ಸೆಗೆ ಇದನ್ನು ಬಳಸಲಾಗುತ್ತದೆ. ಜೊತೆಗೆ ಜೀರ್ಣಕಾರಿ ಸಮಸ್ಯೆ, ನೆಗಡಿ, ಕೆಮ್ಮಿಗೂ ಇದು ಉತ್ತಮ ಔಷಧಿ.

ನೈಸರ್ಗಿಕ ಸೂಕ್ಷ್ಮ ಪೋಷಕಾಂಶಗಳು

ಬೆಲ್ಲವು ದೇಹಕ್ಕೆ ಬೇಕಾಗುವ ಖನಿಜಾಂಶಗಳನ್ನು ಪೂರೈಸುತ್ತದೆ. ಬೆಲ್ಲವನ್ನು ಸಂಸ್ಕರಿಸದ ಕಾರಣ ಇದು ತನ್ನಲ್ಲಿ ನೈಸರ್ಗಿಕ ಅಂಶಗಳನ್ನು ಉಳಿಸಿಕೊಳ್ಳುತ್ತದೆ. ಅಲ್ಲದೇ ಇದರಲ್ಲಿ ಕಬ್ಬಿಣ, ಕ್ಯಾಲ್ಸಿಯಂ, ಸತು ಹಾಗೂ ಮ್ಯಾಂಗನಿಸ್ ಅಂಶವು ಅಧಿಕವಿದೆ.

ಹಸಿವು ಹೆಚ್ಚಿಸಿ, ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ

ಬೆಲ್ಲದಲ್ಲಿ ಜೀರ್ಣಕಾರಿ ಉತ್ತೇಜಕ ಅಂಶವಿದ್ದು ಇದು ಜೀರ್ಣಕ್ರಿಯೆಯನ್ನು ಹೆಚ್ಚಿಸಿ ಹಸಿವು ಹಾಗೂ ಜೀರ್ಣಕ್ರಿಯೆಯನ್ನು ಹೆಚ್ಚುವಂತೆ ಮಾಡುತ್ತದೆ. ಬೆಲ್ಲದಲ್ಲಿರುವ ಸಿಹಿಕಾರಕ ಅಂಶವು ಹೊಟ್ಟೆಯಲ್ಲಿ ಅಸಿಟಿಕ್ ಆಮ್ಲವಾಗಿ ಬದಲಾಗುತ್ತದೆ. ಇದು ಹಸಿವು ಹೆಚ್ಚಲು ಸಹಕಾರಿಯಾಗಿದೆ.

ಮಲಬದ್ಧತೆ ನಿವಾರಣೆಗೆ ಸಹಕಾರಿ

ಬೆಲ್ಲದಲ್ಲಿ ಮೆಗ್ನಿಶಿಯಂನಂತಹ ಖನಿಜಾಂಶಗಳು ಹೇರಳವಾಗಿವೆ. ಬೆಲ್ಲವು ದೇಹಕ್ಕೆ ಬೇಕಾಗುವ ಶೇ 40 ಮೆಗ್ನಿಶಿಯಂ ಖನಿಜಾಂಶವನ್ನು ಬಿಡುಗಡೆ ಮಾಡುತ್ತದೆ. ಇದು ಕರುಳಿನ ಆರೋಗ್ಯವನ್ನು ವೃದ್ಧಿಸುವಂತೆ ಮಾಡುತ್ತದೆ. ಬೆಲ್ಲದಲ್ಲಿರುವ ಸತು ಹಾಗೂ ಸೆಲೆನಿಯಂ ಅಂಶವು ಉತ್ಕರ್ಷಣ ನಿರೋಧಕ ಗುಣವನ್ನು ಹೊಂದಿದೆ.

ಸಾಮಾನ್ಯ ಶೀತ ಹಾಗೂ ದೀರ್ಘಕಾಲದ ಕೆಮ್ಮಿಗೆ ಪರಿಹಾರ

ಸಾಮಾನ್ಯ ಶೀತ ಹಾಗೂ ದೀರ್ಘಕಾಲದ ಕೆಮ್ಮು ನಿವಾರಣೆಗೆ ಬೆಲ್ಲ ಜನಪ್ರಿಯ ಆಯುರ್ವೇದ ಔಷಧಿ. ಇದು ಗಂಟಲಿನ ಕಿರಿಕಿರಿಯನ್ನು ನಿವಾರಿಸುತ್ತದೆ. ಕೆಮ್ಮು, ಅಸ್ತಮಾ ಚಿಕಿತ್ಸೆಯಲ್ಲೂ ಬೆಲ್ಲದ ಮಹತ್ವ ದೊಡ್ಡದು. ಬೆಲ್ಲದ ನಿರಂತರ ಸೇವನೆಯು ದೇಹದಿಂದ ವಿಷವನ್ನು ಹೊರಹಾಕುತ್ತದೆ. ಧೂಮಪಾನ, ದೂಳಿನ ವಾತಾವರಣದಲ್ಲಿ ಕೆಲಸ ಮಾಡುವವರು ಬೆಲ್ಲ ಸೇವಿಸುವುದು ಉತ್ತಮ ಎಂದು ಅಧ್ಯಯನವೊಂದು ಸಾಬೀತು ಪಡಿಸಿದೆ. ಒಣಶುಂಠಿ ಹಾಗೂ ಕಾಳುಮೆಣಸಿನೊಂದಿಗೆ ಬೆಲ್ಲವನ್ನು ಸೇವಿಸುವುದು ಪ್ರಬಲ ಔಷಧಿ.

ಮೂತ್ರನಾಳ ಸಮಸ್ಯೆಗೂ ಪರಿಹಾರ

ಕಬ್ಬು ಒಂದು ಉತ್ತಮ ಮೂತ್ರವರ್ಧಕ. ಮೂತ್ರ ಹರಿವಿನಲ್ಲಿ ಸಮಸ್ಯೆ ಇರುವವರು ಹೆಚ್ಚು ಹೆಚ್ಚು ಬೆಲ್ಲ ಸೇವಿಸಬೇಕು. ಜೊತೆಗೆ ಇದು ಮೂತ್ರಕೋಶದ ಉರಿಯೂತ ಕಡಿಮೆ ಮಾಡುವ ಮೂಲಕ ಸರಾಗ ಮೂತ್ರ ವಿಸರ್ಜನೆಗೆ ಸಹಾಯ ಮಾಡುತ್ತದೆ. ಆಯುರ್ವೇದ ವೈದ್ಯರು ಮೂತ್ರದ ಹರಿವನ್ನು ಸುಧಾರಿಸಲು ಬಿಸಿಹಾಲಿನಲ್ಲಿ ಕರಗಿಸಿದ ಬೆಲ್ಲವನ್ನು ಕುಡಿಯಲು ಶಿಫಾರಸು ಮಾಡುತ್ತಾರೆ.

ಮೈಗ್ರೇನ್ ಹಾಗೂ ತಲೆನೋವಿಗೂ ಮದ್ದು

ಬೆಲ್ಲದೊಂದಿಗೆ ಹಸುವಿನ ತುಪ್ಪವನ್ನು ಮಿಶ್ರಣ ಮಾಡಿ ಸೇವಿಸುವುದರಿಂದ ಮೈಗ್ರೇನ್ ಹಾಗೂ ತಲೆನೋವನ್ನು ನಿವಾರಿಸಬಹುದು. 10 ಗ್ರಾಂ ಬೆಲ್ಲ, 5 ಮಿಲಿಲೀಟರ್ ಹಸುವಿನ ತುಪ್ಪವನ್ನು ಬೆರೆಸಿ ಪ್ರತಿದಿನ ಬೆಳಿಗ್ಗೆ ಹಾಗೂ ಮಲಗುವ ಮೊದಲು ಸೇವಿಸುವುದು ಒಳ್ಳೆಯದು.

(ಲೇಖಕರು ಆಯುರ್ವೇದ ವೈದ್ಯರು, ಆಯುರ್ವೇದಿಸಂ, ಬೆಂಗಳೂರು)

ಗಣೇಶನ ಹಬ್ಬಕ್ಕೆ ಡ್ರೈಫ್ರೂಟ್ಸ್ ಕರಿಗಡುಬು

ವೇದಾವತಿ ಎಚ್. ಎಸ್.

ನಳಪಾಕ

ಕರಿಗಡುಬು

ಬೇಕಾಗುವ ಸಾಮಗ್ರಿಗಳು: ಕಣಕಕ್ಕೆ: ಮೈದಾ – 1 ಕಪ್, ಚಿರೋಟಿ ರವೆ – ಅರ್ಧ ಕಪ್, ಉಪ್ಪು ಚಿಟಿಕೆ, ತುಪ್ಪ – 2 ಚಮಚ, ನೀರು ಸ್ವಲ್ಪ.

ಹೂರಣಕ್ಕೆ: ಹುರಿಗಡಲೆ – 1 ಕಪ್, ಸಕ್ಕರೆ – ಮುಕ್ಕಾಲು ಕಪ್, ಗಸಗಸೆ – 1 ಟೀ ಚಮಚ, ಕೊಬ್ಬರಿತುರಿ – ಅರ್ಧ ಕಪ್, ಗೋಡಂಬಿ – 20, ಬಾದಾಮಿ – 20, ಪಿಸ್ತಾ – 20, ಏಲಕ್ಕಿ ಪುಡಿ – ಅರ್ಧ ಟೀ ಚಮಚ.

ತಯಾರಿಸುವ ವಿಧಾನ: ಬೌಲಿನಲ್ಲಿ ಮೈದಾಹಿಟ್ಟು, ಚಿರೋಟಿ ರವೆ, ಉಪ್ಪನ್ನು ಹಾಕಿ ಮಿಶ್ರಣ ಮಾಡಿ. ಎರಡು ಚಮಚ ತುಪ್ಪವನ್ನು ಬಿಸಿ ಮಾಡಿ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಅಗತ್ಯವಿರುವಷ್ಟು ನೀರನ್ನು ಹಾಕಿ ಪೂರಿ ಹಿಟ್ಟಿನ ಹದಕ್ಕೆ ಕಲೆಸಿಕೊಳ್ಳಿ. ಕಲೆಸಿಕೊಂಡ ಹಿಟ್ಟನ್ನು 20 ನಿಮಿಷ ಮುಚ್ಚಿಡಿ.



ಹುರಿಗಡಲೆ ಮತ್ತು ಸಕ್ಕರೆಯನ್ನು ನುಣ್ಣಗೆ ಪುಡಿ ಮಾಡಿಕೊಳ್ಳಿ. ಒಣಕೊಬ್ಬರಿಯನ್ನು ಬಾಣಲೆಗೆ ಹಾಕಿ 1 ನಿಮಿಷ ಹುರಿಯಿರಿ. ಗಸಗಸೆಯನ್ನು ಕೊಬ್ಬರಿಯೊಂದಿಗೆ ಕೆಲವು ಸೆಕೆಂಡು ಹುರಿಯಿರಿ. ಹುರಿದ ಕೊಬ್ಬರಿ ಮತ್ತು ಗಸಗಸೆಯನ್ನು ಮಿಕ್ಸಿಯಲ್ಲಿ ಹಾಕಿ ತರಿತರಿಯಾಗಿ ಪುಡಿ ಮಾಡಿ. ಬಾದಾಮಿ, ಗೋಡಂಬಿ, ಪಿಸ್ತಾವನ್ನು 2 ನಿಮಿಷ ಹುರಿಯಿರಿ. ಇವುಗಳನ್ನು ಮಿಕ್ಸಿಯಲ್ಲಿ ಹಾಕಿ ತರಿ ತರಿಯಾಗಿ ಪುಡಿ ಮಾಡಿಕೊಳ್ಳಿ. ಪುಡಿ ಮಾಡಿಕೊಂಡ ಮಿಶ್ರಣವನ್ನು ಬೌಲಿಗೆ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಕಣಕದ ಹಿಟ್ಟನ್ನು ಚೆನ್ನಾಗಿ ನಾದಿಕೊಳ್ಳಿ. ಚಿಕ್ಕ ಚಿಕ್ಕ ಉಂಡೆಗಳನ್ನು ತಯಾರಿಸಿಕೊಳ್ಳಿ. ಉಂಡೆಗಳನ್ನು ತೆಳ್ಳಗೆ ಮತ್ತು ದುಂಡಗೆ ಲಟ್ಟಿಸಿಕೊಳ್ಳಿ. ಹೂರಣವನ್ನು ಒಂದರಿಂದ 2 ಚಮಚ ಹಾಕಿ. ಅಂಚಿನ ಸುತ್ತಲೂ ನೀರನ್ನು ಸವರಿ. ಅಂಚನ್ನು ಗಟ್ಟಿಯಾಗಿ ಅಂಟಿಸಿ. ಅಂಚಿನ ಕೊನೆಯನ್ನು ನಿಮಗೆ ಬೇಕಾದ ಹಾಗೆ ಅಲಂಕರಿಸಿ. ನಂತರ ಕಾದ ಎಣ್ಣೆಗೆ ತಯಾರಿಸಿಕೊಂಡ ಕರಿಗಡುಬು ಹಾಕಿ. ಎರಡೂ ಬದಿಯನ್ನು ಕೆಂಬಣ್ಣ ಬರುವರೆಗೆ ಕರಿಯಿರಿ.

ಪ್ರಜಾವಾಣಿ ನೋಡಿಯೊ — ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮೋದಕ




ಬೇಕಾಗುವ ಸಾಮಗ್ರಿಗಳು: ಹಿಟ್ಟು ತಯಾರಿಸಿಕೊಳ್ಳಲು: ಅಕ್ಕಿ – 1 ಕಪ್, ಉಪ್ಪು – ಕಾಲು ಟೀ ಚಮಚ.

ಹೂರಣಕ್ಕೆ: ತೆಂಗಿನಕಾಯಿಯ ಬಿಳಿಯ ಭಾಗ – 1 ಕಪ್, ಬೆಲ್ಲದ ಪುಡಿ – ಅರ್ಧ ಕಪ್, ಏಲಕ್ಕಿಪುಡಿ – ಅರ್ಧ ಟೀ ಚಮಚ.

ತಯಾರಿಸುವ ವಿಧಾನ: ಅಕ್ಕಿಯನ್ನು 1 ಗಂಟೆ ನೆನೆಸಿಡಿ. ನಂತರ ಕಾಲು ಕಪ್ ನೀರು ಮತ್ತು ಉಪ್ಪನ್ನು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ರುಬ್ಬಿಕೊಂಡ ಮಿಶ್ರಣವನ್ನು ಬಾಣಲೆಗೆ ಹಾಕಿ. ಒಂದೂವರೆ ಕಪ್ ನೀರನ್ನು ಸೇರಿಸಿ. ಹಿಟ್ಟು ಗಟ್ಟಿಯಾದ ನಂತರ ಸಣ್ಣ ಉರಿಯಲ್ಲಿ ಐದು ನಿಮಿಷ ಮುಚ್ಚಿಡಿ. ನಂತರ ಮುಚ್ಚಳವನ್ನು ತೆಗೆದು ಒಲೆಯನ್ನು ಆರಿಸಿ. ಕಾಲು ಟೀ ಚಮಚ ತುಪ್ಪವನ್ನು ಹಾಕಿ. ಹಿಟ್ಟನ್ನು ಚೆನ್ನಾಗಿ ನಾದಿಕೊಳ್ಳಿ. ತೆಂಗಿನತುರಿಯನ್ನು ಬಾಣಲೆಗೆ ಹಾಕಿ. ಬೆಲ್ಲದ ಪುಡಿಯನ್ನು ಸೇರಿಸಿ. ಮಧ್ಯಮ ಉರಿಯಲ್ಲಿ ಮಿಶ್ರಣ ಮಾಡಿ. ಬೆಲ್ಲ ಕರಗಿ ಒಂದೆಳೆ ಪಾಕ ಬಂದಾಗ ಏಲಕ್ಕಿ ಪುಡಿಯನ್ನು ಹಾಕಿ ಮಿಶ್ರಣ ಮಾಡಿ. ಒಲೆಯನ್ನು ಆರಿಸಿ. ಅಕ್ಕಿಹಿಟ್ಟಿನಿಂದ ಚಿಕ್ಕ ಉಂಡೆಗಳನ್ನು ತಯಾರಿಸಿಕೊಳ್ಳಿ. ಕೊನೆಯ ಅಂಚನ್ನು ಒತ್ತುತ್ತಾ ಹೋಗಿ ಬಟ್ಟಲು ಆಕಾರದಲ್ಲಿ ತಯಾರಿಸಿಕೊಳ್ಳಿ. ನಂತರ ಮೂರು ಬೆರಳಿನಿಂದ ಅಂಚಿನ ತುದಿಯನ್ನು ಒತ್ತಿಕೊಳ್ಳಿ. ಮಧ್ಯದಲ್ಲಿ ಹೂರಣವನ್ನು ತುಂಬಿ. ಮೋದಕವನ್ನು ನಿಧಾನ ತಿರುಗಿಸುತ್ತಾ ಗಟ್ಟಿಯಾಗಿ ಮುಚ್ಚಿ. ತಯಾರಿಸಿದ ಮೋದಕವನ್ನು ಹಬೆ ಮಡಿಕೆಯಲ್ಲಿಟ್ಟು 10 ನಿಮಿಷ ಬೇಯಿಸಿ. ಮೋದಕ ನೈವೇದ್ಯಕ್ಕೆ ರೆಡಿ.

ಗಸಗಸೆ ಪಾಯಸ



ಬೇಕಾಗುವ ಸಾಮಗ್ರಿಗಳು: ಗಸಗಸೆ – 50 ಗ್ರಾಂ, ಅಕ್ಕಿ – 2 ಟೇಬಲ್ ಚಮಚ, ಬಾದಾಮಿ – 5, ಗೋಡಂಬಿ – 5, ಏಲಕ್ಕಿ ಬೀಜ– 4, ಒಣಕೊಬ್ಬರಿತುರಿ – ಅರ್ಧ ಕಪ್, ತೆಂಗಿನತುರಿ – 1 ಕಪ್, ಬೆಲ್ಲ – 2 ಕಪ್, 10 ರಿಂದ 15 ಕೇಸರಿದಳವನ್ನು 2 ಟೇಬಲ್ ಚಮಚ ಬಿಸಿ ಹಾಲಿನಲ್ಲಿ ನೆನೆಸಿಡಿ. ಹಾಲು ಅರ್ಧ ಲೀಟರ್, 1 ಟೀ ಚಮಚ ತುಪ್ಪ, ಹುರಿದು ಪಾಯಸಕ್ಕೆ ಹಾಕಲು ಗೋಡಂಬಿ 10 ರಿಂದ 15, ಒಣದ್ರಾಕ್ಷಿ 20 ರಿಂದ 25.


ತಯಾರಿಸುವ ವಿಧಾನ: ಬಾಣಲೆಯಲ್ಲಿ ಗಸಗಸೆ ಮತ್ತು ಅಕ್ಕಿಯನ್ನು ಹಾಕಿ ಹುರಿಯಿರಿ. ನಂತರ ಚಿಕ್ಕದಾಗಿ ಕತ್ತರಿಸಿದ ಬಾದಾಮಿ ಮತ್ತು ಗೋಡಂಬಿಯನ್ನು ಹುರಿಯಿರಿ. ಎಲ್ಲವನ್ನೂ ಮಿಕ್ಸಿಯಲ್ಲಿ ಹಾಕಿ. ಏಲಕ್ಕಿ ಸಿಪ್ಪೆ ತೆಗೆದು ಅವುಗಳೊಂದಿಗೆ ಸೇರಿಸಿ ನುಣ್ಣಗೆ ಪುಡಿ ಮಾಡಿಕೊಳ್ಳಿ. ಇದರ ಜೊತೆಗೆ ಒಣಕೊಬ್ಬರಿ, ತೆಂಗಿನತುರಿ ಮತ್ತು ಅರ್ಧ ಕಪ್ ನೀರನ್ನು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಪಾತ್ರೆಗೆ ಅರ್ಧ ಲೀಟರ್ ನೀರನ್ನು ಹಾಕಿ. ರುಬ್ಬಿಕೊಂಡ ಮಿಶ್ರಣವನ್ನು ಸೇರಿಸಿ. ಚೆನ್ನಾಗಿ ಮಿಶ್ರಣ ಮಾಡಿ. ಬೆಲ್ಲವನ್ನು ಸೇರಿಸಿ ಮಧ್ಯಮ ಉರಿಯಲ್ಲಿ ಕುದಿಸಿ. ಬೆಲ್ಲ ಕರಗಿ ಕುದಿ ಬಂದ ನಂತರ ಹಾಲು ಮತ್ತು ನೆನೆಸಿಟ್ಟ ಕೇಸರಿ ಹಾಲನ್ನು ಸೇರಿಸಿ. ಸಣ್ಣ ಉರಿಯಲ್ಲಿ ಕುದಿಸಿ. ಕುದಿ ಬಂದ ನಂತರ ಒಲೆಯನ್ನು ಆರಿಸಿ.

ಬಾಣಲೆಗೆ 1 ಟೀ ಚಮಚ ತುಪ್ಪವನ್ನು ಹಾಕಿ ಬಿಸಿ ಮಾಡಿಕೊಳ್ಳಿ. ಗೋಡಂಬಿ ಮತ್ತು ದ್ರಾಕ್ಷಿಯನ್ನು ಕೆಂಬಣ್ಣ ಬರುವರೆಗೆ ಹುರಿಯಿರಿ. ಪಾಯಸಕ್ಕೆ ಸೇರಿಸಿ. ರುಚಿಕರವಾದ ಮತ್ತು ಆರೋಗ್ಯಕರವಾದ ಗಸಗಸೆ ಪಾಯಸ ಸವಿಯಲು ಸಿದ್ಧ.

ಲೇಖಕಿ: 'ಮನೆ ಅಡುಗೆ ವಿಥ್ ವೇದಾ' ಯೂಟ್ಯೂಬ್ ಚಾನೆಲ್ ನಿರ್ವಾಹಕಿ

ಉಭಯಲಿಂಗ ಪ್ರೇಮಕ್ಕೆ ಚಿಕಿತ್ಸೆ ಇದೆಯೇ?

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

• 27ರ ಯುವಕ. ನನಗೆ ಹುಡುಗ ಮತ್ತು ಹುಡುಗಿಯರಿಬ್ಬರೂ ಲೈಂಗಿಕವಾಗಿ ಇಷ್ಟವಾಗುತ್ತಾರೆ. ನಾನು ಉಭಯಲಿಂಗ ಪ್ರೇಮಿ ಇರಬಹುದೇ? ಇಂಥವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದು ಓದಿದ್ದೇನೆ. ನನಗೆ ಏನೂ ತೋಚದೆ ತುಂಬಾ ಬೇಸರದಲ್ಲಿದ್ದೇನೆ. ಈ ಸಮಸ್ಯೆಗೆ ಏನಾದರೂ ಚಿಕಿತ್ಸೆ ಇದೆಯೇ?

ಹೆಸರು, ಊರು ತಿಳಿಸಿಲ್ಲ.

ಸಲಿಂಗ ಪ್ರೇಮದಂತೆ ಉಭಯಲಿಂಗ ಪ್ರೇಮವೂ ಅಸಹಜವಲ್ಲ, ಕಾಯಿಲೆಯೂ ಅಲ್ಲ. ಕೇವಲ ಪ್ರಕೃತಿಯೇ ನೀಡಿರುವ ಆಯ್ಕೆ. ಇಂಥವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎನ್ನುವುದೂ ತಪ್ಪುಮಾಹಿತಿ. ಕೆಲವರು ಇದಕ್ಕೆ ಅಂಟಿರುವ ಸಾಮಾಜಿಕ ಕಳಂಕದಿಂದ ನೊಂದು ಆತ್ಮಹತ್ಯೆಗೆ ಶರಣಾಗಿರಬಹುದು. ಉಭಯಲಿಂಗ ಪ್ರೇಮಿಗಳಿಗೆ ಒಂದೇ ಸಂಗಾತಿಯೊಡನೆ ಮದುವೆಯಂತಹ ಬದ್ಧಸಂಬಂಧವನ್ನು ರೂಪಿಸಿಕೊಳ್ಳುವುದು ಕಷ್ಟವಾಗುತ್ತದೆ. ಸಂಗಾತಿಯನ್ನು ಬದಲಾಯಿಸುತ್ತಿರುವುದು ಅಥವಾ ಭಿನ್ನಭಿನ್ನ ಸಂಗಾತಿಗಳೊಡನೆ ಬೆರೆಯವುದು ಲೈಂಗಿಕ ರೋಗಗಳಿಗೆ ಆಹ್ವಾನ ನೀಡಿದಂತಾಗುವುದಲ್ಲದೆ, ಭಾವನಾತ್ಮಕ ಅಸ್ಥಿರತೆಗೆ ಕಾರಣವಾಗಬಹುದು. ಈ ಎಲ್ಲಾ ವಿಚಾರಗಳನ್ನು ನಿಭಾಯಿಸಲು ತಜ್ಞ ಲೈಂಗಿಕ ಮನೋಚಿಕಿತ್ಸಕರ ಸಹಾಯ ಪಡೆಯಬಹುದು. ಆತುರದ ನಿರ್ಧಾರಗಳಿಂದ ಅನಾಹುತಗಳಿಗೆ ಅವಕಾಶ ಕೊಡಬೇಕಾಗಿಲ್ಲ.

• ವಿವಾಹಿತ ಯುವಕ. ಕೆಲವೊಮ್ಮೆ ಬೇರೆ ಹುಡುಗಿಯರ ಆಕರ್ಷಣೆಯುಂಟಾಗಿ ಹೆಂಡತಿಯಿಂದ ದೂರವಾಗುತ್ತೇನೆ. ಯಾರ ಜೊತೆಯೂ ಸಂಪರ್ಕಮಾಡಿಲ್ಲ. ನನಗೆ ಲೈಂಗಿಕ ಶಕ್ತಿ ಕಡಿಮೆಯಿದೆ. ಬೇರೆ ಆಕರ್ಷಣೆಗಳನ್ನು ತಪ್ಪಿಸುವುದು ಹೇಗೆ?

ಮಹದ್, ಊರಿನ ಹೆಸರಿಲ್ಲ.

ಇತರ ಸ್ತ್ರೀಯರ ಬಗೆಗೆ ಆಕರ್ಷಣೆಯುಂಟಾದರೂ ಅದಕ್ಕೆ ಮನಗೊಡದಿರುವ ನಿಮ್ಮ ಪ್ರಾಮಾಣಿಕತೆಗೆ ಮೆಚ್ಚುತ್ತೇನೆ. ಹೀಗೆ ಆಕರ್ಷಣೆಯುಂಟಾಗುವುದು ಏಕೆಂದು ಗೊತ್ತೇ? ನಿಮ್ಮ ಕಲ್ಪನೆಯ ಲೈಂಗಿಕ ಸುಖ ಹೆಂಡತಿಯಿಂದ ದೊರೆಯುತ್ತಿಲ್ಲ. ನಿಮಗೆ ಆಕರ್ಷಕ ಎನ್ನಿಸುವ ಲೈಂಗಿಕತೆ ಹೇಗಿರುತ್ತದೆ? ಹಾಗೆಯೇ ಪತ್ನಿಗೂ ಅವಳದ್ದೇ ಆದ ಆಯ್ಕೆಗಳಿರಬಹುದಲ್ಲವೇ? ನಿಮ್ಮನಿಮ್ಮ ಆಯ್ಕೆಗಳನ್ನು ಗುರುತಿಸಿಕೊಂಡು ಮುಕ್ತವಾಗಿ ಚರ್ಚೆಮಾಡಿ. ಇಬ್ಬರಿಗೂ ಆಕರ್ಷಕವೆನ್ನಿಸುವ ಲೈಂಗಿಕತೆಯನ್ನು ಹುಡುಕಿಕೊಂಡಾಗ ಹೊರಗಿನ ಆಕರ್ಷಣೆಗಳೂ ಕಡಿಮೆಯಾಗುತ್ತವೆ, ಲೈಂಗಿಕ ಶಕ್ತಿಯೂ ತುಂಬಿಕೊಳ್ಳುತ್ತದೆ.

• 30ರ ಯುವಕ. ಪ್ರೀತಿಸುವ ಹುಡುಗಿಯ ಜೊತೆ ಸಂಭೋಗ ಮಾಡುವಾಗ ಉದ್ರೇಕ ಕಡಿಮೆ ಇರುತ್ತದೆ ಮತ್ತು ಬೇಗನೆ ಸ್ಖಲನವಾಗುತ್ತದೆ. ಚೇರ್‌ಪೈನ್ ಇದೆ. ಪರಿಹಾರವೇನು?


ರಮೇಶ್, ಊರಿನ ಹೆಸರಿಲ್ಲ.

ಚೇರ್‌ಪೈನ್ ಎಂದು ಯಾವುದಕ್ಕೆ ಹೇಳುತ್ತಿದ್ದೀರೋ ಗೊತ್ತಾಗಲಿಲ್ಲ. ವೈದ್ಯರನ್ನು ಸಂಪರ್ಕಿಸಿ. ತೃಪ್ತಿಕರ ಲೈಂಗಿಕ ಸುಖ ಪಡೆಯುವುದಕ್ಕೆ ಪ್ರೀತಿಸುವ ವ್ಯಕ್ತಿಯ ಜೊತೆಗೆ ಸುರಕ್ಷಿತ ವಾತಾವರಣವೂ ಅಗತ್ಯವಾಗಿರುತ್ತದೆ. ಆಗ ಮಾತ್ರ ನಿರಾತಂಕದಿಂದ ಲೈಂಗಿಕ ಕ್ರಿಯೆಯಲ್ಲಿ ಒಳಗೊಳ್ಳಲು ಸಾಧ್ಯ. ನಿಮ್ಮ ಸಮಸ್ಯೆಗಳಿಗೆ ಮಾನಸಿಕ ಆತಂಕ, ಒತ್ತಡಗಳೇ ಕಾರಣ. ಪ್ರೀತಿಸುವ ಹುಡುಗಿಯ ಜೊತೆಗೆ ಇನ್ನೂ ವಿವಾಹವಾಗಿಲ್ಲವೇ? ನಿಮ್ಮಿಬ್ಬರ ನಡುವಿನ ಬಾಂಧವ್ಯ ಹೇಗಿದೆ? ಇಂತಹ ಅಂಶಗಳು ನಿಮ್ಮ ಆತಂಕಕ್ಕೆ ಕಾರಣವಾಗಿರಬಹುದು. ಸಮಸ್ಯೆಗಳು ನಿಮ್ಮೊಬ್ಬರಿಗೆ ಮಾತ್ರ ಸಂಬಂಧಿಸಿದ್ದು ಎಂದುಕೊಳ್ಳದೆ ಪ್ರಿಯತಮೆಯೊಡನೆ ಮುಕ್ತವಾಗಿ ಚರ್ಚೆಮಾಡಿ. ಇದರಿಂದ ನಿಮ್ಮ ಸಮಸ್ಯೆಗಳ ಭಾರ ಕಡಿಮೆಯಾಗುವುದಲ್ಲದೆ ಇಬ್ಬರ ಬಾಂಧವ್ಯದ ಬೆಸುಗೆಯೂ ಬಿಗಿಯಾಗುತ್ತದೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು
ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. bhoomika@prajavani.co.in

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,340
ಇಂದಿನ ಅಂತ್ಯ	17,323
▲	89
ದಿನದ ಗರಿಷ್ಠ	17,340

ವಿನಿಮಯ ದರ

$ ಡಾಲರ್	73.02
£ ಪೌಂಡ್	101.07
€ ಯುರೊ	86.7
¥ ಯೆನ್ (100ಕ್ಕೆ)	66.56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹420
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹421

ಖಾದ್ಯ ತೈಲ ಮುಂಬೈ

(10 ಕೆಜಿಗೆ)


ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1400(1390)
ಸೂರ್ಯಕಾಂತಿ (ರಿಫೈನ್ಡ್)	₹1450 (1460)
ಪಾಮೋಲಿನ್	₹1360 (1255)

18 ತಿಂಗಳಲ್ಲಿ ಅತ್ಯಂತ ತೀವ್ರಗತಿಯ ಬೆಳವಣಿಗೆ

ಸೇವಾ ವಲಯ: ದಾಖಲೆಯ ಏರಿಕೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಆಗಸ್ಟ್‌ನಲ್ಲಿ 18 ತಿಂಗಳಲ್ಲಿನ ಅತ್ಯಂತ ವೇಗದ ಬೆಳವಣಿಗೆ ಸಾಧಿಸಿವೆ. ಸೇವಾ ಚಟುವಟಿಕೆಗಳಿಗೆ ಬೇಡಿಕೆ ಹೆಚ್ಚಾಗಿದೆ.

ಸೇವಾ ವಲಯದ ಚಟುವಟಿಕೆಗಳ ಮಟ್ಟವನ್ನು ತಿಳಿಸುವ ಇಂಡಿಯಾ ಸರ್ವಿಸಸ್ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು ಜುಲೈನಲ್ಲಿ 45.4ರಷ್ಟು ಇದ್ದಿದ್ದು ಆಗಸ್ಟ್‌ನಲ್ಲಿ 56.7ಕ್ಕೆ ಏರಿಕೆ ಕಂಡಿದೆ. ಸೇವಾ ವಲಯದ ಚಟುವಟಿಕೆಗಳು ನಾಲ್ಕು ತಿಂಗಳಲ್ಲಿ ಇದೇ ಮೊದಲ ಬಾರಿಗೆ ಚೇತರಿಕೆ ಕಂಡುಕೊಂಡಿವೆ.



50 ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಸೂಚ್ಯಂಕ ಇದ್ದರೆ ಅದನ್ನು ಚೇತರಿಕೆ ಎಂದು, 50ಕ್ಕಿಂತ ಕಡಿಮೆ ಇದ್ದರೆ ಅದನ್ನು ಕುಸಿತ ಎಂದು ಕರೆಯಲಾಗುತ್ತದೆ. 'ಹೆಚ್ಚೆಚ್ಚು ಜನ ಕೋವಿಡ್ ಲಸಿಕೆ ಪಡೆದುಕೊಳ್ಳುತ್ತಿರುವ ಕಾರಣ ಹಲವು ಕಂಪನಿಗಳು ಮತ್ತೆ ಕಾರ್ಯ ಆರಂಭಿಸಿವೆ, ಗ್ರಾಹಕರ ವಿಶ್ವಾಸ ಹೆಚ್ಚಾಗಿದೆ' ಎಂದು ಐಎಚ್‌ಎಸ್ ಮಾರ್ಕಿಟ್ ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ ಲಿಮಾ ಹೇಳಿದ್ದಾರೆ.

ಸೇವಾ ವಲಯದ ಕಂಪನಿಗಳು ಆಗಸ್ಟ್‌ನಲ್ಲಿ ಸ್ವೀಕರಿಸಿದ ಹೊಸ ಕಾರ್ಯಾದೇಶಗಳ ಸಂಖ್ಯೆಯು ಜಾಸ್ತಿ ಆಗಿದೆ. ಆದರೆ ಹೊಸ ರಫ್ತು ವಹಿವಾಟಿನಲ್ಲಿ ಇಳಿಕೆ ಆಗಿದೆ. 'ಮುಂದಿನ ದಿನಗಳು ಇನ್ನಷ್ಟು ಚೆನ್ನಾಗಿರಲಿವೆ. ನಿರ್ಬಂಧಗಳನ್ನು ತೆರವು ಮಾಡುವುದು ಮುಂದುವರಿದರೆ, ಕೋವಿಡ್‌ನ ಅಲೆಗಳನ್ನು ತಡೆಯಲು ಸಾಧ್ಯವಾದರೆ ಅರ್ಥ ವ್ಯವಸ್ಥೆಯ ಚೇತರಿಕೆಯು ಸ್ಥಿರವಾಗಿ ಇರಲಿದೆ ಎಂದು ಕಂಪನಿಗಳು ಹೇಳುತ್ತಿವೆ' ಎಂದೂ ಡಿ ಲಿಮಾ ಹೇಳಿದ್ದಾರೆ.

ಆಗಸ್ಟ್‌ನಲ್ಲಿ ಸೇವಾ ವಲಯದ ಕಂಪನಿಗಳು ತಮ್ಮ ನೌಕರರ ಸಂಖ್ಯೆಯನ್ನು ಕಡಿತ ಮಾಡಿವೆ. ಆದರೆ ನೌಕರರ ಸಂಖ್ಯೆಯನ್ನು ಕಡಿತಗೊಳಿಸುವ ಪ್ರಮಾಣವು ಜನವರಿಗೆ ಹೋಲಿಸಿದರೆ ಆಗಸ್ಟ್‌ನಲ್ಲಿ ಕಡಿಮೆ ಇತ್ತು. ಇಂಧನ ದರ ಹೆಚ್ಚಾಗಿರುವುದು, ಸಾಗಾಟದ ಮೇಲಿನ ವೆಚ್ಚಗಳು ಜಾಸ್ತಿ ಆಗಿರುವುದು ತಮ್ಮ ವೆಚ್ಚಗಳನ್ನೂ ಹೆಚ್ಚಿಸಿವೆ ಎಂದು ಸೇವಾ ವಲಯದ ಕಂಪನಿಗಳು ಹೇಳಿವೆ. ಮೂರು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಸೇವಾ ವಲಯವು ತಯಾರಿಕಾ ವಲಯಕ್ಕಿಂತ ಹೆಚ್ಚಿನ ಸಾಧನೆ ತೋರಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600- 650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000 -1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	395
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46500
ಹಳತು	42500-50500
ಭದ್ರಾವತಿ	
ರಾಶಿ	48199-59099
ಚಿತ್ರದುರ್ಗ	
ಆಪಿ	54629-55039
ಬೆಟ್ಟೆ	38610-39069
ಕೆಂಪುಗೋಟು	32509-32999
ರಾಶಿ	54119-54559
ದಾವಣಗೆರೆ	
ರಾಶಿ	50779-60029
ಹೊನ್ನಾಳಿ	
ರಾಶಿ	54499-54499
ಕಾರ್ಕಳ	
ಹೊಸತು	40000-46500
ಹಳತು	46000-50500
ಕುಮಟಾ	
ಚಿಪ್ಪು	33509-36019
ಕೋಕ	23099-35089
ಫ್ಯಾಕ್ಟರಿ	16509-22469
ಹಳೆಚಾಲಿ	42099-43119
ಹೊಸಚಾಲಿ	40969-42900
ಕುಂದಾಪುರ	
ಹೊಸಚಾಲಿ	36000-46000
ಪುತ್ತೂರು	
ಹೊಸತು	32000-46500
ಶಿವಮೊಗ್ಗ	
ಬೆಟ್ಟೆ	52099-58769
ಗೊರಬಲು	17059-42399
ರಾಶಿ	49009-58569
ಸಿದ್ದಾಪುರ	
ಬಿಳಿಗೋಟು	32689-39399
ಚಾಲಿ	40689-43309
ಕೋಕ	28699-37699
ಕೆಂಪುಗೋಟು	31899-36689
ರಾಶಿ	41209-51639
ತಟ್ಟಿಬೆಟ್ಟೆ	33689-44809
ಶಿರಸಿ	
ಬೆಟ್ಟೆ	34000-47999
ಬಿಳಿಗೋಟು	30099-39869
ಚಾಲಿ	40899-43308
ರಾಶಿ	26090-51509
ಯಲ್ಲಾಪುರ	
ಬಿಳಿಗೋಟು	32899-36612
ಕೋಕ	23312-34869
ಚಾಲಿ	38395-43570
ಕೆಂಪುಗೋಟು	31700-37699
ರಾಶಿ	47399-53599
ತಟ್ಟಿಬೆಟ್ಟೆ	38599-46619
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	267-479
ದ್ವಿತಳಿ (ಬಿ.ವಿ)	233-521

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14,100	13,000	13,100	194.35ಸೆಂಟ್ಸ್
ಎಸಿ	6,300	4,800	5,275	
ಆರ್‌ಪಿ	6,250	5,700	6,250	ಲಂಡನ್
ಆರ್‌ಸಿ	3,560	3,500	3,620	2056ಡಾಲರ್ಸ್

ಲೋಪ ಸರಿಪಡಿಸಲಿರುವ ಮಾರುತಿ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ಕಾರು ತಯಾರಿಕಾ ಕಂಪನಿಯಾದ ಮಾರುತಿ ಸುಜುಕಿ ಇಂಡಿಯಾ (ಎಂಎಸ್‌ಐ), ತನ್ನ ವಿವಿಧ ಮಾದರಿಗಳ ಕಾರುಗಳಲ್ಲಿನ ಮೋಟರ್ ಜನರೇಟರ್‌ನಲ್ಲಿನ ಲೋಪವನ್ನು ಸರಿಪಡಿಸಿಕೊಡಲಿದೆ.



ಸಿಯಾಜ್, ಎರ್ಟಿಗಾ, ವಿತಾರಾ ಬ್ರೆಜಾ, ಎಸ್–ಕ್ರಾಸ್ ಮತ್ತು ಎಕ್ಸ್‌ಎಲ್6 ಮಾದರಿಯ ಒಟ್ಟು 1,81,754 ಕಾರುಗಳ ಮೋಟರ್ ಜನರೇಟರ್‌ನಲ್ಲಿ ಲೋಪ ಇದೆಯೇ ಎಂಬುದನ್ನು ಪರಿಶೀಲಿಸಿ, ಲೋಪವನ್ನು ಸರಿಪಡಿಸಿಕೊಡಲಿದೆ. ಈ ಮಾದರಿಗಳ ಪೆಟ್ರೋಲ್ ಎಂಜಿನ್ ಕಾರುಗಳಲ್ಲಿ ಈ ಲೋಪವನ್ನು ಕಂಪನಿ ಗುರುತಿಸಿದೆ.

2018ರ ಮೇ 4ರಿಂದ 2020ರ ಅಕ್ಟೋಬರ್ 27ರವರೆಗೆ ತಯಾರಾದ ಈ ಮಾದರಿಗಳ ಕಾರುಗಳಲ್ಲಿ ಲೋಪ ಇದೆಯೇ ಎಂಬುದನ್ನು ಪರಿಶೀಲಿಸಲಾಗುವುದು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. 'ಗ್ರಾಹಕರ ಹಿತವನ್ನು ಗಮನದಲ್ಲಿ ಇಟ್ಟುಕೊಂಡು, ಈ ಕಾರುಗಳನ್ನು ಸ್ವಯಂಪ್ರೇರಿತವಾಗಿ ನಾವು ಪರಿಶೀಲಿಸುತ್ತೇವೆ. ಲೋಪ ಇದ್ದಲ್ಲಿ ಮೋಟರ್ ಜನರೇಟರ್‌ಅನ್ನು ಬದಲಿಸಿ ಕೊಡುವ ಕೆಲಸ ಮಾಡಲಿದ್ದೇವೆ' ಎಂದುಹೇಳಿದೆ.

ಯಾರು ತಮ್ಮ ಕಾರನ್ನು ಕಂಪನಿಯ ವರ್ಕ್‌ಶಾಪ್‌ಗೆ ತರಬೇಕು ಎಂಬ ಬಗ್ಗೆ ಗ್ರಾಹಕರಿಗೇ ಸಂದೇಶ ರವಾನಿಸಲಾಗುತ್ತದೆ. ಲೋಪ ಇರುವ ಮೋಟರ್ ಜನರೇಟರ್ ಬದಲಿಸಿ ಕೊಡುವ ಕಾರ್ಯವು ನವೆಂಬರ್ ಮೊದಲ ವಾರದಿಂದ ಶುರುವಾಗಲಿದೆ. ಅಲ್ಲಿಯವರೆಗೆ ಗ್ರಾಹಕರು ನೀರು ತುಂಬಿಕೊಂಡಿರುವಲ್ಲಿ ಕಾರು ಚಲಾಯಿಸಬಾರದು, ಕಾರಿನ ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ ಬಿಡಿಭಾಗಗಳ ಮೇಲೆ ನೀರನ್ನು ನೇರವಾಗಿ ಸಿಂಪಡಿಸಬಾರದು ಎಂದು ಕಂಪನಿ ಸೂಚಿಸಿದೆ.

ಕಾರಿನ ಎಂಜಿನ್‌ಗೆ ಹೆಚ್ಚಿನ ಶಕ್ತಿಯನ್ನು ನೀಡುವಲ್ಲಿ ಮೋಟರ್ ಜನರೇಟರ್ ಸಹಾಯ ಮಾಡುತ್ತದೆ. ಈ ಮಾದರಿಗಳ ಕಾರಿನ ಮಾಲೀಕರು, ತಮ್ಮ ಕಾರು ಕೂಡ ತಪಾಸಣೆಗೆ ಒಳಪಡಲಿದೆಯೇ ಎಂಬುದನ್ನು ಕಂಪನಿಯ ವೆಬ್‌ಸೈಟ್‌ಗೆ ಭೇಟಿ ನೀಡಿ, ಕಾರಿನ ಚಾಸಿ ಸಂಖ್ಯೆ ನಮೂದಿಸಿ ಪರಿಶೀಲಿಸಬಹುದು.

ಮುಂಬೈ ಧಾರಣೆ

ಶೇಂಗಾ

3-9-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	1360 (1345)
ಪಾಮ್ ವಾರದ ಡೆಲಿವರಿ	1258 (1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1410)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,250 (47,050)
ಬೆಳ್ಳಿ ಕೆ.ಜಿ
63,700 (63,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೊಬ್ಬರಿ ಧಾರಣೆ

ಅರಸೀಕೆರೆ	₹15000-16350
ತುರುವೇಕೆರೆ	₹16300-16300

ರಿಲಯನ್ಸ್ ಮಾರುಕಟ್ಟೆ ಮೌಲ್ಯ ₹15 ಲಕ್ಷ ಕೋಟಿ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಕಂಪನಿಯ ಮಾರುಕಟ್ಟೆ ಬಂಡವಾಳದ ಮೌಲ್ಯವು ಶುಕ್ರವಾರ ದಾಖಲೆಯ ₹ 15 ಲಕ್ಷ ಕೋಟಿಗೆ ಏರಿಕೆ ಕಂಡಿದೆ. ಮಾರುಕಟ್ಟೆ ಬಂಡವಾಳದ ಲೆಕ್ಕಾಚಾರದಲ್ಲಿ ಈ ಮಟ್ಟವನ್ನು ತಲುಪಿರುವ ಭಾರತದ ಮೊದಲ ಕಂಪನಿ ಆರ್‌ಐಎಲ್.

ಕಂಪನಿಯ ಷೇರು ಮೌಲ್ಯವು ಈ ವರ್ಷದಲ್ಲಿ ಶೇ 20ರಷ್ಟು ಹೆಚ್ಚಳ ಆಗಿದೆ.

58 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್

ಮುಂಬೈ: ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಶುಕ್ರವಾರ ಇದೇ ಮೊದಲ ಬಾರಿಗೆ 58 ಸಾವಿರದ ಗಡಿಯನ್ನು ದಾಟಿ ವಹಿವಾಟು ಕೊನೆಗೊಳಿಸಿದೆ. ವಿದೇಶಿ ಬಂಡವಾಳ ಹೂಡಿಕೆ ನಿರಂತರವಾಗಿ ಆಗುತ್ತಿರುವುದು, ಅರ್ಥ ವ್ಯವಸ್ಥೆಯ ಆರೋಗ್ಯವನ್ನು ಹೇಳುವ ಕೆಲವು ಸೂಚಕಗಳು ಶುಭ ಸಮಾಚಾರ ನೀಡಿದ್ದರಿಂದ ಹೂಡಿಕೆದಾರರು ಉತ್ತೇಜಿತರಾಗಿರುವುದು ಹಾಗೂ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಷೇರು ಮೌಲ್ಯ ಏರಿಕೆ ಕಂಡಿದ್ದು ಶುಕ್ರವಾರದ ಜಿಗಿತಕ್ಕೆ ಕಾರಣವಾದವು.

277 ಅಂಶ ಏರಿಕೆ ಕಂಡ ಸೆನ್ಸೆಕ್ಸ್ 58,129 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ದಿನದ ವಹಿವಾಟಿನ ನಡುವಿನಲ್ಲಿ 58,194 ಅಂಶಗಳಿಗೆ ಏರಿಕೆ ಕಂಡಿತ್ತು. 57 ಸಾವಿರದ ಗಡಿಯಿಂದ 58 ಸಾವಿರಕ್ಕೆ ತಲುಪಲು ಸೆನ್ಸೆಕ್ಸ್ ಕೇವಲ ಮೂರು ದಿನ ತೆಗೆದುಕೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 89 ಅಂಶ ಏರಿಕೆ ಕಂಡು, 17,340ರಲ್ಲಿ ವಹಿವಾಟು ಕೊನೆಗೊಂಡಿತು.

ಈ ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ ಒಟ್ಟು 2,005 ಅಂಶ ಏರಿದೆ. ನಿಫ್ಟಿ 618 ಅಂಶ ಏರಿದೆ. ಲೋಹ ಮತ್ತು ಆಟೊಮೊಬೈಲ್ ವಲಯದ ಷೇರುಗಳ ಮೌಲ್ಯ ಹೆಚ್ಚಾಗಿದ್ದು ಸೂಚ್ಯಂಕಗಳ ಗಳಿಕೆಯ ಓಟಕ್ಕೆ ನೆರವಾಯಿತು ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಬಿನೋದ್ ಮೋದಿ ಹೇಳಿದ್ದಾರೆ. ಮಿಡ್ ಕ್ಯಾಪ್ ಹಾಗೂ ಸ್ಮಾಲ್ ಕ್ಯಾಪ್ ಕಂಪನಿಗಳ ಷೇರುಗಳ ಖರೀದಿ ಕೂಡ ಜೋರಾಗಿ ನಡೆದಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 0.51ರಷ್ಟು ಹೆಚ್ಚಳವಾಗಿದೆ. ಪ್ರತಿ ಬ್ಯಾರೆಲ್‌ಗೆ 73.40 ಅಮೆರಿಕನ್ ಡಾಲರ್‌ಗೆ ತಲುಪಿದೆ.

ಮತ್ತೆ ಸಮಯ ಕೇಳಿದ ಕೇಂದ್ರ ಸರ್ಕಾರ: ಸುಪ್ರೀಂ ಕೋರ್ಟ್ ಅಸಮಾಧಾನ

ಮಾರ್ಗಸೂಚಿ ವಿಳಂಬಕ್ಕೆ ಆಕ್ರೋಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ಸಾಂಕ್ರಾಮಿಕದಿಂದ ಮೃತಪಟ್ಟವರಿಗೆ ಮರಣ ಪ್ರಮಾಣಪತ್ರ ನೀಡುವ ಪ್ರಕ್ರಿಯೆಯನ್ನು ಸರಳಗೊಳಿಸುವ ಕೆಲಸವು ವಿಳಂಬವಾಗುತ್ತಿರುವುದಕ್ಕೆ, ಕೇಂದ್ರ ಸರ್ಕಾರದ ವಿರುದ್ಧ ಸುಪ್ರೀಂ ಕೋರ್ಟ್ ಶುಕ್ರವಾರ ಅಸಮಾಧಾನ ವ್ಯಕ್ತಪಡಿಸಿದೆ.

'ನಾವು ಈ ಹಿಂದೆಯೇ ಈ ಬಗ್ಗೆ ಆದೇಶ ಹೊರಡಿಸಿದ್ದೇವೆ. ಈಗಾಗಲೇ ಒಂದು ಸಲ ಸಮಯಾವಕಾಶವನ್ನೂ ವಿಸ್ತರಿಸಿದ್ದೇವೆ. ಇನ್ನು ಮುಂದೆ ರೂಪಿಸುತ್ತೇವೆ ಎಂದರೆ, ನೀವು ಮಾರ್ಗಸೂಚಿ ರೂಪಿಸುವುದರೊಳಗಾಗಿ ಕೋವಿಡ್ ಮೂರನೇ ಅಲೆಯೂ ಬಂದು ಹೋಗುತ್ತದೆ' ಎಂದು ನ್ಯಾಯಮೂರ್ತಿ ಎಂ.ಆರ್.ಶಾ ನೇತೃತ್ವದ ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿತು.

'ಈ ಪ್ರಕ್ರಿಯೆಯು ಜಾರಿಯಲ್ಲಿದೆ. ಶೀಘ್ರದಲ್ಲೇ ಅಂತಿಮಗೊಳಿಸಲಿದ್ದೇವೆ. ಅಂತಿಮ ಪ್ರಮಾಣಪತ್ರ ಸಲ್ಲಿಸಲು ಇನ್ನೂ ಸ್ವಲ್ಪ ಸಮಯ ನೀಡಬೇಕು' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನ್ಯಾಯಾಲಯಕ್ಕೆ ಮನವಿ ಮಾಡಿದಾಗ, ನ್ಯಾಯಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿತು.

ಆರು ವಾರಗಳ ಒಳಗಾಗಿ ಮಾರ್ಗಸೂಚಿ ರೂಪಿಸುವಂತೆ ಸುಪ್ರೀಂ ಕೋರ್ಟ್, ಪ್ರಧಾನಿ ನೇತೃತ್ವದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ಜೂನ್ 30ರಂದು ನಿರ್ದೇಶಿಸಿತ್ತು.

ಆದರೆ, ಕೋವಿಡ್‌ನಿಂದ ಮೃತಪಟ್ಟವರಿಗೆ ಪರಿಹಾರ ನೀಡುವ ಸಂಬಂಧ ಸಮಗ್ರ ಯೋಜನೆ ರೂಪಿಸಬೇಕಿದ್ದು, ನಾಲ್ಕು ವಾರಗಳ ಹೆಚ್ಚುವರಿ ಸಮಯಾವಕಾಶ ನೀಡಬೇಕು ಎಂದು ಕೇಂದ್ರ ಸರ್ಕಾರವು ಆಗಸ್ಟ್ 16ರಂದು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿತ್ತು. ಈ ಮನವಿಯನ್ನು ಸುಪ್ರೀಂ ಕೋರ್ಟ್ ಮಾನ್ಯ ಮಾಡಿತ್ತು.

ಜೂನ್ 30ರಂದು ನೀಡಿದ ನ್ಯಾಯಾಲಯದ ಆದೇಶದ ಅನುಪಾಲನಾ ವರದಿ (ಸೆ.11ರವರೆಗೆ) ಮತ್ತು ಸೆ.3ರವರೆಗೆ ಆಗಿರುವ ಕೆಲಸವೇನು ಎಂಬ ಬಗ್ಗೆಯೂ ಪ್ರಮಾಣಪತ್ರ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಪೀಠವು ಸೂಚಿಸಿತು.

ಕೇರಳದಲ್ಲಿ ಕೋವಿಶೀಲ್ಡ್ ಲಸಿಕೆ ಕೊರತೆ: ಆರೋಗ್ಯ ಸಚಿವೆ

ತಿರುವನಂತಪುರ (ಪಿಟಿಐ): ರಾಜ್ಯದ ಆರು ಜಿಲ್ಲೆಗಳಲ್ಲಿ ಕೋವಿಶೀಲ್ಡ್ ಲಸಿಕೆ ದಾಸ್ತಾನು ಸಂಪೂರ್ಣ ಮುಗಿದಿದೆ. ರಾಜ್ಯವು ಲಸಿಕೆ ಕೊರತೆ ಎದುರಿಸುತ್ತಿದೆ. ಕೇಂದ್ರದಿಂದ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಪೂರೈಸುವಂತೆ ರಾಜ್ಯ ಸರ್ಕಾರ ಕೋರಿಕೆ ಸಲ್ಲಿಸಿದೆ ಎಂದು ರಾಜ್ಯ ಆರೋಗ್ಯ ಸಚಿವೆ ವೀಣಾ ಜಾರ್ಜ್ ಶುಕ್ರವಾರ ತಿಳಿಸಿದ್ದಾರೆ.

ಕೊಲ್ಲಂ, ಕೊಟ್ಟಾಯಂ, ಎರ್ನಾಕುಲಂ, ತ್ರಿಶೂರ್, ಕೋಯಿಕೋಡ್ ಮತ್ತು ಕಣ್ಣೂರು ಜಿಲ್ಲೆಗಳು ಲಸಿಕೆ ಕೊರತೆ ಎದುರಿಸುತ್ತಿವೆ. ರಾಜ್ಯಕ್ಕೆ ಮೀಸಲಾದ ಲಸಿಕೆಯಲ್ಲಿ 1.4 ಲಕ್ಷ ಡೋಸ್‌ಗಳು ಮಾತ್ರ ಉಳಿದಿವೆ. ನಾವು ಈಗಾಗಲೇ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಪೂರೈಸುವಂತೆ ಕೇಂದ್ರಕ್ಕೆ ಮನವಿ ಮಾಡಿದ್ದೇವೆ ಎಂದು ಜಾರ್ಜ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಆದಾಗ್ಯೂ, ಎಲ್ಲ ಜಿಲ್ಲೆಗಳಲ್ಲಿ ಕೋವ್ಯಾಕ್ಸಿನ್ ಸೀಮಿತ ದಾಸ್ತಾನು ಇದೆ. ಆದರೆ, ಕೋವ್ಯಾಕ್ಸಿನ್ ತೆಗೆದುಕೊಳ್ಳಲು ಅನೇಕ ಜನರು ಹಿಂಜರಿಯುತ್ತಿದ್ದಾರೆ. ದೇಶಿಯ ಲಸಿಕೆಗಳನ್ನು ಹಾಕಿಸಿಕೊಳ್ಳಲು ಚಿಂತಿಸಬೇಕಾಗಿಲ್ಲ. ಎರಡೂ ಲಸಿಕೆಗಳು ಪರಿಣಾಮಕಾರಿ ಹಾಗೂ ಸುರಕ್ಷಿತವಾಗಿವೆ ಎಂದು ಅವರು ಹೇಳಿದರು. ಗುರುವಾರ ಒಂದೇ ದಿನದಲ್ಲಿ ರಾಜ್ಯವು ಮತ್ತೊಮ್ಮೆ 30,000ಕ್ಕೂ ಹೆಚ್ಚು ಹೊಸ ಸೋಂಕುಗಳಿಗೆ ಸಾಕ್ಷಿಯಾಗಿತ್ತು. 188 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ.

ಆದಾಯ ತೆರಿಗೆ ಪೋರ್ಟಲ್‌ನಲ್ಲಿನ ತೊಂದರೆಗೆ ಆರ್‌ಎಸ್‌ಎಸ್ ಮುಖವಾಣಿ ಕಿಡಿ

'ಇನ್ಫೊಸಿಸ್‌ನಿಂದಾಗಿ ಸರ್ಕಾರದ ವಿಶ್ವಾಸಕ್ಕೆ ಧಕ್ಕೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ನೂತನ ಆದಾಯ ತೆರಿಗೆ ಪೋರ್ಟಲ್‌ನಲ್ಲಿ ಆಗುತ್ತಿರುವ ತೊಂದರೆಗಳ ಸಂಬಂಧ ಆರ್‌ಎಸ್‌ಎಸ್ ಮುಖವಾಣಿ 'ಪಾಂಚಜನ್ಯ'ವು, ಈ ಪೋರ್ಟಲ್ ಅಭಿವೃದ್ಧಿಪಡಿಸಿರುವ ಇನ್ಫೊಸಿಸ್ ವಿರುದ್ಧ ಕಿಡಿಕಾರಿದೆ.

ಸೆಪ್ಟೆಂಬರ್ 5ರ ಸಂಚಿಕೆಯಲ್ಲಿ 'ಗೌರವ ಮತ್ತು ಆಘಾತ' ಎಂಬ ಲೇಖನವನ್ನು ಪಾಂಚಜನ್ಯ ಪ್ರಕಟಿಸಿದೆ. 'ತೆರಿಗೆ ಪೋರ್ಟಲ್‌ನಲ್ಲಿ ಜನರು ಎದುರಿಸುತ್ತಿರುವ ತೊಂದರೆಗಳ ಕಾರಣದಿಂದ ಇನ್ಫೊಸಿಸ್‌ನ ಗೌರವ, ಘನತೆ ಅಪಾಯದಲ್ಲಿದೆ.

'ನೂತನ ಆದಾಯ ತೆರಿಗೆ ಪೋರ್ಟಲ್‌ನಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಬಹಳ ತೊಂದರೆಯಾಗಿದೆ. ಇನ್ಫೊಸಿಸ್ ಅಭಿವೃದ್ಧಿಪಡಿಸಿರುವ ಸರಕು ಮತ್ತು ಸೇವಾ ತೆರಿಗೆ ಪೋರ್ಟಲ್ (ಜಿಎಸ್‌ಟಿ ಪೋರ್ಟಲ್) ಸಹ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದರಿಂದ ಉದ್ಯಮಿಗಳಿಗೆ ಭಾರಿ ತೊಂದರೆಯಾಗಿದೆ' ಎಂದು ಪಾಂಚಜನ್ಯ ಹರಿಹಾಯ್ದಿದೆ.

> **ದೇಶದ ಆರ್ಥಿಕತೆಯನ್ನು ಉದ್ದೇಶಪೂರ್ವಕವಾಗಿ ಧ್ವಂಸಮಾಡಲು ಇನ್ಫೊಸಿಸ್ ಮ್ಯಾನೇಜ್‌ಮೆಂಟ್ ಯತ್ನಿಸುತ್ತಿದೆ ಎಂಬ ಆರೋಪವು ಗಟ್ಟಿಯಾಗಿ ಕೇಳುತ್ತಿದೆ ಪಾಂಚಜನ್ಯ,** ಆರ್‌ಎಸ್‌ಎಸ್ ಮುಖವಾಣಿ

ಇದು ಈ ವಾರದ ಸಂಚಿಕೆಯ ಮುಖಪುಟ ಲೇಖನವಾಗಿದ್ದು, ಮುಖಪುಟದಲ್ಲಿ ಇನ್ಫೊಸಿಸ್ ಸಂಸ್ಥಾಪಕ ಅಧ್ಯಕ್ಷ ಎನ್.ಆರ್.ನಾರಾಯಣಮೂರ್ತಿ ಅವರ ಚಿತ್ರವನ್ನು ಪಾಂಚಜನ್ಯ ಪ್ರಕಟಿಸಿದೆ.

'ಈ ಪೋರ್ಟಲ್‌ನಲ್ಲಿ ಆಗುತ್ತಿರುವ ತೊಂದರೆಯಿಂದ ಜನರು ಸರ್ಕಾರದ ಮೇಲಿನ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ. ಇನ್ಫೊಸಿಸ್ ಸೇವೆ ನೀಡುತ್ತಿರುವ ವಿದೇಶಗಳಲ್ಲಿ ಹೀಗೆ ಆಗಿದ್ದಿದ್ದರೆ, ಏಳುತ್ತಿದ್ದ ಪ್ರಶ್ನೆಗಳು ಅಪಾರ' ಎಂದು ಪಾಂಚಜನ್ಯ ಹೇಳಿದೆ.

'ಈ ಪೋರ್ಟಲ್ ಅಭಿವೃದ್ಧಿಪಡಿಸಲು ಕರೆಯಲಾಗಿದ್ದ ಟೆಂಡರ್‌ನಲ್ಲಿ, ಇನ್ಫೊಸಿಸ್ ಅತ್ಯಂತ ಕಡಿಮೆ ಮೊತ್ತವನ್ನು ನಮೂದಿಸಿತ್ತು. ಎಲ್-1 ಬಿಡ್ಡರ್ ಆಗಿದ್ದ ಕಾರಣ ಸರ್ಕಾರವು ಇನ್ಫೊಸಿಸ್‌ಗೆ ಗುತ್ತಿಗೆ ನೀಡಿದೆ. ಪ್ರತಿಷ್ಠಿತ ಕಂಪನಿ ಆಗಿರುವ ಕಾರಣ ತಕ್ಷಣವೇ ಗುತ್ತಿಗೆ ನೀಡಲಾಗಿದೆ. ಆದರೆ ಪೋರ್ಟಲ್ ಸರಿಯಾಗಿ ಅಭಿವೃದ್ಧಿ ಮಾಡಿಲ್ಲ' ಎಂದು ನಿಯತಕಾಲಿಕವು ಹೇಳಿದೆ.

ಸೆಪ್ಟೆಂಬರ್ 15ರ ಒಳಗೆ ತೊಂದರೆಗಳನ್ನು ಸರಿಪಡಿಸಿ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇನ್ಫೊಸಿಸ್‌ಗೆ ತಾಕೀತು ಮಾಡಿದ್ದಾರೆ.

ಎಡಪಂಥೀಯರಿಗೆ ದೇಣಿಗೆಗೆ ಆಕ್ಷೇಪ

'ಎಡಪಂಥೀಯ ಸಂಘಟನೆಗಳು, ಫ್ಯಾಕ್ಟ್‌ಚೆಕ್ ಜಾಲತಾಣಗಳು ಮತ್ತು ಎಡಪಂಥೀಯ ಸುದ್ದಿ ಪೋರ್ಟಲ್‌ಗಳಿಗೆ ಇನ್ಫೊಸಿಸ್ ದೇಣಿಗೆ ನೀಡುತ್ತಿದೆ. ಇವು ಜಾತಿ ಆಧಾರಿತ ದ್ವೇಷವನ್ನು ಹುಟ್ಟುಹಾಕುತ್ತಿವೆ' ಎಂದು ಪಾಂಚಜನ್ಯ ಕಿಡಿಕಾರಿದೆ.

'ದೇಶ ವಿರೋಧಿ ಮತ್ತು ಅರಾಜಕತಾವಾದಿ ಸಂಘಟನೆಗಳಿಗೆ ದೇಣಿಗೆ ಏಕೆ ನೀಡುತ್ತಿದ್ದೀರಿ ಎಂದು ಇನ್ಫೊಸಿಸ್ ಪ್ರವರ್ತಕರನ್ನು ಏಕೆ ಪ್ರಶ್ನಿಸಬಾರದು' ಎಂದು ಪ್ರಶ್ನಿಸಿದೆ.

ಅಫ್ಗಾನಿಸ್ತಾನದ ಬೆಳವಣಿಗೆ ಕಾದು ನೋಡುವ ತಂತ್ರದ ಮೊರೆಹೋದ ಪಶ್ಚಿಮದ ದೇಶಗಳು

ತಾಲಿಬಾನ್ ಸರ್ಕಾರ ರಚನೆ ವಿಳಂಬ

ಕಾಬೂಲ್ (ಎಎಫ್‌ಪಿ): ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಯಾವ ರೀತಿಯ ಸರ್ಕಾರ ರಚಿಸಲಿದೆ ಎಂಬುದನ್ನು ಇಡೀ ಜಗತ್ತು ಗಮನಿಸುತ್ತಿದೆ.

ಇದು ತಾಲಿಬಾನ್ ಮೇಲೆಯೂ ಒತ್ತಡ ಹೇರಿದೆ. ಹಾಗಾಗಿ ಸರ್ಕಾರ ರಚನೆಯ ವಿವರಗಳನ್ನು ತಾಲಿಬಾನ್ ಶುಕ್ರವಾರವೂ ಬಹಿರಂಗಪಡಿಸಿಲ್ಲ.

ಶುಕ್ರವಾರ ಮಧ್ಯಾಹ್ನದ ಪ್ರಾರ್ಥನೆ ಬಳಿಕ ಸರ್ಕಾರ ರಚನೆಯ ಘೋಷಣೆ ಆಗಬಹುದು ಎಂಬ ನಿರೀಕ್ಷೆ ಇತ್ತು. ಆದರೆ, ಶನಿವಾರದವರೆಗೆ ಈ ಘೋಷಣೆ ಹೊರಬೀಳದು ಎಂದು ತಾಲಿಬಾನ್ ವಕ್ತಾರರು ತಿಳಿಸಿದ್ದಾರೆ.

ಕಳೆದ 20 ವರ್ಷಗಳಲ್ಲಿ ತಾಲಿಬಾನ್ ಬಂಡುಕೋರ ಸಂಘಟನೆಯಷ್ಟೇ ಆಗಿತ್ತು. ಈಗ, ಬಂಡುಕೋರತನವನ್ನು ಬಿಟ್ಟು ಆಳ್ವಿಕೆಯ ಗತಿಗೆ ಸಂಘಟನೆಯು ಬದಲಾಗಬೇಕಿದೆ.

ದೇಶದ ಆರ್ಥಿಕ ದುಃಸ್ಥಿತಿಯ ಜತೆಗೆ, ಆಳ್ವಿಕೆಯ ಮನೋಧರ್ಮ ರೂಢಿಸಿಕೊಳ್ಳುವುದು ಕೂಡ ದೊಡ್ಡ ಸವಾಲೇ ಆಗಿದೆ. ಜತೆಗೆ, ಪಂಜ್‌ಶಿರ್ ಪ್ರಾಂತ್ಯದಲ್ಲಿ ನ್ಯಾಷನಲ್ ರೆಸಿಸ್ಟೆನ್ಸ್ ಫ್ರಂಟ್ ಜತೆಗೆ ಕದನ ತೀವ್ರಗೊಂಡಿದೆ.

ಪಶ್ಚಿಮದ ದೇಶಗಳು ಕಾಯ್ದು ನೋಡುವ ತಂತ್ರದ ಮೊರೆ ಹೋಗಿವೆ. ಹೊಸ ಸರ್ಕಾರದ ಜತೆಗೆ ಸಂಪರ್ಕ ಇರಿಸುವ ವಿಚಾರದಲ್ಲಿಯೂ ಮುಕ್ತ ಮನಸ್ಥಿತಿ ಇದೆ ಎಂದು ಹಲವು ದೇಶಗಳು ಹೇಳಿವೆ.



ಅಫ್ಗಾನಿಸ್ತಾನದ ಮಹಿಳಾ ಹಕ್ಕುಗಳ ಹೋರಾಟಗಾರರು ಮತ್ತು ಸಾಮಾಜಿಕ ಕಾರ್ಯಕರ್ತರು ಮಹಿಳೆಯರ ಶಿಕ್ಷಣ ಮತ್ತು ಹಕ್ಕುಗಳನ್ನು ಉಳಿಸಬೇಕು ಎಂದು ತಾಲಿಬಾನ್‌ಗೆ ಒತ್ತಾಯಿಸಿ ಕಾಬೂಲ್‌ನಲ್ಲಿ ಶುಕ್ರವಾರ ಪ್ರತಿಭಟಿಸಿದರು ರಾಯಿಟರ್ಸ್ ಚಿತ್ರ

ಮಹಿಳೆಯರ ಪ್ರತಿಭಟನೆ

ಹೊಸ ಸರ್ಕಾರದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಇಲ್ಲ ಎಂಬುದು ಅಫ್ಗಾನಿಸ್ತಾನದ ಮಹಿಳಾ ಸಮುದಾಯದ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ಕಾಬೂಲ್‌ನಲ್ಲಿ ಸುಮಾರು 30 ಮಹಿಳೆಯರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ. ಹೆರಾತ್‌ನಲ್ಲಿ 50ಕ್ಕೂ ಹೆಚ್ಚು ಮಹಿಳೆಯರು ಗುರುವಾರ ಪ್ರತಿಭಟನೆ ನಡೆಸಿದ್ದರು.

ತಾಲಿಬಾನ್ ನೇತೃತ್ವದ ಆಳ್ವಿಕೆಯಲ್ಲಿ ಮಹಿಳೆಯರ ಹಕ್ಕುಗಳು ಮೊಟಕಾಗಲಿವೆ ಎಂಬುದು ತೀವ್ರ ಕಳವಳಕ್ಕೆ ಕಾರಣವಾಗಿದೆ.

ಐರೋಪ್ಯ ಒಕ್ಕೂಟದ ಷರತ್ತು

ತಾಲಿಬಾನ್ ನೇತೃತ್ವದ ಅಫ್ಗಾನಿಸ್ತಾನದ ಜತೆಗೆ ಸಂಪರ್ಕ ಹೊಂದಬೇಕಿದ್ದರೆ ಆ ದೇಶವು ಕೆಲವು ಷರತ್ತುಗಳನ್ನು ಪಾಲಿಸಬೇಕು ಎಂದು ಐರೋಪ್ಯ ಒಕ್ಕೂಟವು ಶುಕ್ರವಾರ ಹೇಳಿದೆ.

ದೇಶವು ಭಯೋತ್ಪಾದನೆ ಬೆಂಬಲಿಸಬಾರದು, ದೇಶದ ಜನರಿಗೆ ಮಾನವೀಯ ನೆರವು ಒದಗಿಸಲು ಅಡ್ಡಿ ಮಾಡಬಾರದು, ಮಾನವ ಹಕ್ಕುಗಳನ್ನು ಕಾಪಾಡಬೇಕೆಂಬ ಷರತ್ತುಗಳನ್ನು ಒಡ್ಡಲಾಗಿದೆ. ದೇಶವು ತಾಲಿಬಾನ್ ವಶವಾಗುತ್ತಿದ್ದಂತೆ 27 ದೇಶಗಳ ಒಕ್ಕೂಟವು ತಮ್ಮ ರಾಯಭಾರಿಗಳನ್ನು ತೆರವು ಮಾಡಿದ್ದವು. ಆದರೆ, ಈಗ ತಾಲಿಬಾನ್‌ಗೆ ಸಹಕರಿಸಲು ಸಿದ್ಧ ಎಂದು ಒಕ್ಕೂಟ ಹೇಳಿದೆ.

ಟಿ.ವಿ ವಾಹಿನಿ: ಧಾರಾವಾಹಿ, ಹಾಸ್ಯಕ್ಕೆ ಕೊಕ್

ದುಬೈ (ಎಎಫ್‌ಪಿ): ಅಫ್ಗಾನಿಸ್ತಾನದ ಬಹು ಜನಪ್ರಿಯ ಟಿವಿ ವಾಹಿನಿಯೊಂದು ಹಾಸ್ಯ ಧಾರಾವಾಹಿ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಿದೆ. ಅದರ ಬದಲಿಗೆ, ತಾಲಿಬಾನ್ ಆಡಳಿತಕ್ಕೆ ಹೊಂದುವಂಥ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ.

ಇಸ್ಲಾಂ ಕಾನೂನು ಅಥವಾ ರಾಷ್ಟ್ರೀಯ ಹಿತಕ್ಕೆ ವಿರುದ್ಧವಾಗಿ ಮಾಧ್ಯಮಗಳು ಇರಬಾರದು ಎಂದು ತಾಲಿಬಾನ್‌ನಿಂದ ನಿರ್ದೇಶನ ಬಂದಿರುವುರಿಂದ, ಈ ವಾಹಿನಿಯು ಸ್ವಯಂಪ್ರೇರಿತವಾಗಿ ಈ ಬದಲಾವಣೆಗೆ ಮುಂದಾಗಿದೆ.

ಆದರೆ, ಇನ್ನೂ ಕೆಲವು ಸಂಸ್ಥೆಗಳಲ್ಲಿ ಮಹಿಳೆಯರೇ ರೇಡಿಯೊ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದಾರೆ. ಎಲ್ಲರನ್ನೂ ಒಳಗೊಳ್ಳುವ ವ್ಯವಸ್ಥೆಯ ಭರವಸೆಯನ್ನು ತಾಲಿಬಾನ್ ನೀಡಿದ್ದರಿಂದ, ಈ ಸಂಸ್ಥೆಗಳು ಮಹಿಳೆಯರನ್ನು ಕೆಲಸದಿಂದ ತೆಗೆದುಹಾಕಿಲ್ಲ; ಎಷ್ಟರ ಮಟ್ಟಿಗೆ ಮಾಧ್ಯಮ ಸ್ವಾತಂತ್ರ್ಯ ಸಿಗಲಿದೆ ಎಂಬುದನ್ನು ಪರೀಕ್ಷಿಸುತ್ತಿವೆ.

ಸ್ವರ ಕಳೆದುಕೊಂಡ ಮಹಿಳಾ ವಾದ್ಯವೃಂದ

ಪೂರ್ಣ ಮಹಿಳೆಯರೇ ಇದ್ದ ಆರ್ಕೆಸ್ಟ್ರಾ ತಂಡ 'ಝೋಹ್ರಾ' ಅಫ್ಗಾನಿಸ್ತಾನದಲ್ಲಿ ಕಳೆದ ಎರಡು ದಶಕಗಳಿಂದ ನಡೆಯುತ್ತಿರುವ ಸಾಮಾಜಿಕ ಬದಲಾವಣೆಯ ಸಂಕೇತವಾಗಿತ್ತು. ಆದರೆ ತಾಲಿಬಾನ್ ಅಫ್ಗಾನಿಸ್ತಾನವನ್ನು ವಶಪಡಿಸಿಕೊಂಡ ನಂತರ ಮಹಿಳೆಯರ ಸಂಗೀತ ತಂಡವು ಮೌನಕ್ಕೆ ಜಾರಿದೆ.

ಜೊತೆಗೆ, ಇನ್ನು ಮುಂದೆ ಅಫ್ಗಾನಿಸ್ತಾನದಲ್ಲಿ ಸಂಗೀತ ಮೊಳಗುವುದೂ ಅನುಮಾನವಾಗಿದೆ. ಅಫ್ಗಾನಿಸ್ತಾನವು ತಾಲಿಬಾನ್ ಕೈವಶವಾದ ಸುದ್ದಿ ತಿಳಿದಾಗಲೇ ಬೆದರಿದ್ದಾಗಿ ಅಫ್ಗಾನಿಸ್ತಾನದ ಮಹಿಳಾ ವಾದ್ಯವೃಂದದ ನೆಗಿನ್ ಖ್ಪಾಲ್ವಾಕ್ (24) ಹೇಳಿದ್ದಾರೆ.

ಕೈದಿಗಳ ಬಿಡುಗಡೆ: ಮಹಿಳಾ ನ್ಯಾಯಾಧೀಶರಿಗೆ ಜೀವಭಯ

ದಿ ಹೇಗ್ (ರಾಯಿಟರ್ಸ್): ತಾಲಿಬಾನ್ ತೆಕ್ಕೆಗೆ ಬಂದಿರುವ ಅಫ್ಗಾನಿಸ್ತಾನದ, 250ಕ್ಕೂ ಮಹಿಳಾ ನ್ಯಾಯಾಧೀಶರು ಜೀವ ಭಯದಲ್ಲಿದ್ದಾರೆ.

ಈ ಹಿಂದೆ ಅವರು, ಯಾವ ಅಪರಾಧಿಗಳಿಗೆ ಶಿಕ್ಷೆ ವಿಧಿಸಿ ಜೈಲಿಗಟ್ಟಿದ್ದರೋ ಆ ಕೈದಿಗಳೆಲ್ಲ ಈಗ ತಾಲಿಬಾನ್ ಆಡಳಿತದಲ್ಲಿ ಬಿಡುಗಡೆಯಾಗಿದ್ದಾರೆ. ಅಲ್ಲದೇ ತಮ್ಮನ್ನು ಕಾರಾಗೃಹವಾಸಕ್ಕೆ ತಳ್ಳಿದ ಮಹಿಳಾ ನ್ಯಾಯಾಧೀಶರಿಗಾಗಿ ಹುಡುಕಾಟ ನಡೆಸಿದ್ದಾರೆ. ಅವರ ಕಣ್ತಪ್ಪಿಸಿ ದೇಶದಿಂದ ಪರಾರಿಯಾಗುವುದೇ ಈ ಮಹಿಳಾ ನ್ಯಾಯಾಧೀಶರಿಗೆ ದೊಡ್ಡ ಸವಾಲಾಗಿದೆ.

ಕಳೆದ ವಾರಗಳಲ್ಲಿ ಕೆಲವರು ಅಲ್ಲಿಂದ ಪರಾರಿಯಾಗುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಉಳಿದವರನ್ನು ಪಾರು ಮಾಡುವ ಪ್ರಯತ್ನಗಳು ನಡೆದಿವೆ ಎನ್ನುತ್ತಾರೆ ಈ ದಿಸೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತರು.

ನ್ಯಾಯಾಂಗ ವ್ಯವಸ್ಥೆಯಲ್ಲಿದ್ದ ಮಹಿಳೆಯರೇ ಅವರ ಮೊದಲ ಗುರಿಯಾಗಿದ್ದಾರೆ. ಅಲ್ಲಿ, ಜನವರಿಯಲ್ಲಿ ಸುಪ್ರೀಂ ಕೋರ್ಟ್‌ನ ಇಬ್ಬರು ಮಹಿಳಾ ನ್ಯಾಯಮೂರ್ತಿಗಳನ್ನು ಗುಂಡಿಟ್ಟು ಕೊಲ್ಲಲಾಗಿತ್ತು.

ಹೀಗಾಗಿ, ಈಗ ತಾಲಿಬಾನ್ ಪಡೆಯದೇ ಆಡಳಿತ ಇರುವಾಗ, ತಪ್ಪಿಸಿಕೊಳ್ಳುವ ಮಾರ್ಗ ತಿಳಿಯದೇ ಸಂಕಷ್ಟದಲ್ಲಿದ್ದಾರೆ. ಯಾವುದೇ ಕ್ಷಣದಲ್ಲಾದರೂ ಬಂದೂಕಿನ ಬಾಯಿಗೆ ಆಹಾರವಾಗುವ ಭಯ ಅವರನ್ನು ಆವರಿಸಿದೆ.

'ತಾಲಿಬಾನ್ ಪಡೆಯು ಎಲ್ಲಾ ಕೈದಿಗಳನ್ನು ಬಿಡುಗಡೆ ಮಾಡಿದ್ದು, ಮಹಿಳಾ ನ್ಯಾಯಾಧೀಶರ ಜೀವಕ್ಕೆ ಕುತ್ತಾಗಿದೆ' ಎನ್ನುತ್ತಾರೆ ಯುರೋಪ್‌ಗೆ ಪರಾರಿಯಾಗಿರುವ, ತಾವಿರುವ ಸ್ಥಳದ ಮಾಹಿತಿಯನ್ನು ಬಿಟ್ಟುಕೊಡದ ನ್ಯಾಯಾಧೀಶೆಯೊಬ್ಬರು.

'ನನ್ನನ್ನು ಹುಡುಕಿಕೊಂಡು ನಾಲ್ಕೈದು ಮಂದಿ ಮನೆಗೆ ಬಂದಿದ್ದರು. ಮನೆಯಲ್ಲಿದ್ದವರಿಗೆ 'ನ್ಯಾಯಾಧೀಶೆ ಎಲ್ಲಿ' ಎಂದು ಕೇಳಿದ್ದರು. ಅವರೆಲ್ಲರೂ, ನಾನು ಜೈಲಿಗೆ ಕಳುಹಿಸಿದವರೇ' ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ಚುನಾವಣೆಯಲ್ಲಿ ಸ್ಪರ್ಧಿಸಲು ನಿರಾಕರಣೆ

ಸಂಸತ್ತಿನಲ್ಲಿ ಪಕ್ಷಕ್ಕೆ ಬಹುಮತವಿದೆ. ಹಾಗಾಗಿ ಎಲ್‌ಡಿಪಿಯ ಮುಖ್ಯಸ್ಥರಾಗಿ ಆಯ್ಕೆಯಾಗಲಿರುವ ವ್ಯಕ್ತಿಯೇ ಹೊಸ ಪ್ರಧಾನಿಯಾಗುವ ನಿರೀಕ್ಷೆ ಇದೆ

ಸ್ಥಾನ ತ್ಯಜಿಸಲಿರುವ ಜಪಾನ್ ಪ್ರಧಾನಿ ಸುಗಾ?

ಟೋಕಿಯೊ: ಜಪಾನ್ ಪ್ರಧಾನಿ ಯೋಶಿಹಿದೆ ಸುಗಾ ಅವರು ಆಡಳಿತರೂಢ ಲಿಬರಲ್ ಡೆಮಾಕ್ರಟಿಕ್ ಪಕ್ಷದ (ಎಲ್‌ಡಿಪಿ) ನಾಯಕತ್ವ ಸ್ಥಾನದ ಚುನಾವಣೆಯಲ್ಲಿ ಸ್ಪರ್ಧಿಸಲು ನಿರಾಕರಿಸಿದ್ದಾರೆ. ಈ ಮೂಲಕ ಅವರು ಇದೇ ತಿಂಗಳ ಅಂತ್ಯದಲ್ಲಿ ಪ್ರಧಾನಿ ಸ್ಥಾನದಿಂದ ಕೆಳಗಿಳಿಯುವ ಸುಳಿವು ನೀಡಿದ್ದಾರೆ ಎಂದು ಎನ್‌ಎಚ್‌ಕೆ ಸುದ್ದಿವಾಹಿನಿ ವರದಿ ಮಾಡಿದೆ.



'ಸೆಪ್ಟೆಂಬರ್ 29ರಂದು ಲಿಬರಲ್ ಡೆಮಾಕ್ರಟಿಕ್ ಪಕ್ಷದ ನಾಯಕತ್ವಕ್ಕೆ ನಡೆಯಲಿರುವ ಚುನಾವಣೆಯಲ್ಲಿ ಭಾಗಿಯಾಗುವುದಿಲ್ಲ ಎಂಬುದಾಗಿ ಸುಗಾ ಅವರು ಪಕ್ಷದ ಕಾರ್ಯನಿರ್ವಾಹಕರಿಗೆ ತಿಳಿಸಿದ್ದಾರೆ' ಎಂದು ವರದಿ ಹೇಳಿದೆ.

ಯೋಶಿಹಿದೆ ಸುಗಾ ಅವರು ಕೋವಿಡ್ ವಿರುದ್ಧ ನಿಧಾನ ಗತಿಯಲ್ಲಿ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ ಹಾಗೂ ಸಾರ್ವಜನಿಕರ ಆರೋಗ್ಯವನ್ನು ಕಡೆಗಣಿಸಿ, ಪಿಡುಗಿನ ನಡುವೆಯೂ ಒಲಿಂಪಿಕ್ಸ್ ಆಯೋಜಿಸಿದ್ದರು ಎಂಬ ಟೀಕೆಗಳು ಕೇಳಿ ಬಂದಿವೆ.

ಓವಲ್ ಟೆಸ್ಟ್: ಇಂಗ್ಲೆಂಡ್ ವಿರುದ್ಧ ಭಾರತ ತಂಡಕ್ಕೆ ಕೈಗೂಡದ ಮುನ್ನಡೆ

ಪೋಪ್–ವೋಕ್ಸ್ ಆಟದ ಸೊಬಗು

ಲಂಡನ್ (ಪಿಟಿಐ): ಓಲಿ ಪೋಪ್ ಮತ್ತು ಕ್ರಿಸ್ ವೋಕ್ಸ್ ಅವರ ಅಮೋಘ ಅರ್ಧಶತಕಗಳ ಬಲದಿಂದ ಆತಿಥೇಯ ಇಂಗ್ಲೆಂಡ್ ತಂಡವು ಭಾರತದ ಎದುರಿನ ನಾಲ್ಕನೇ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಮುನ್ನಡೆ ಸಾಧಿಸಿತು.

ದ ಓವಲ್‌ನಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಶುಕ್ರವಾರ ಇಂಗ್ಲೆಂಡ್ ತಂಡವು 84 ಓವರ್‌ಗಳಲ್ಲಿ 290 ರನ್ ಗಳಿಸಿ ಆಲೌಟ್ ಆಯಿತು. 99 ರನ್‌ಗಳ ಮುನ್ನಡೆ ಪಡೆಯಿತು.

ಎರಡನೇ ಇನಿಂಗ್ಸ್ ಆರಂಭಿಸಿರುವ ಭಾರತ ದಿನದಾಟದ ಅಂತ್ಯಕ್ಕೆ ವಿಕೆಟ್ ನಷ್ಟವಿಲ್ಲದೆ 43 ರನ್ ಗಳಿಸಿದೆ. ಇಂಗ್ಲೆಂಡ್‌ನ ಮೊದಲ ಇನಿಂಗ್ಸ್ ಮೊತ್ತವನ್ನು ಹಿಂದಿಕ್ಕಬೇಕಾದರೆ ತಂಡ ಇನ್ನೂ 56 ರನ್ ಗಳಿಸಬೇಕಾಗಿದೆ.

ಉಮೇಶ್ ಯಾದವ್ (76ಕ್ಕೆ3) ಮತ್ತು ಜಸ್‌ಪ್ರೀತ್ ಬೂಮ್ರಾ (67ಕ್ಕೆ2) ಅವರ ಶಿಸ್ತಿನ ದಾಳಿಯಿಂದಾಗಿ ಆತಿಥೇಯ ಇಂಗ್ಲೆಂಡ್ ಅಲ್ಪಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿತ್ತು. ಆದರೆ, ಪೋಪ್ (81; 159ಎ) ಮತ್ತು ವೋಕ್ಸ್ (50; 60ಎ) ತಂಡದ ಆತಂಕವನ್ನು ದೂರ ಮಾಡಿದರು.


ಉಮೇಶ್ ಯಾದವ್ –ಎಪಿ ಚಿತ್ರ

ಅವರಿಗೆ ಜಾನಿ ಬೆಸ್ಟೊ (37) ಮತ್ತು ಮೋಯಿನ್ ಅಲಿ (35) ಉತ್ತಮ ಜೊತೆ ನೀಡಿದರು.

ಗುರುವಾರ ಭಾರತ ತಂಡವು 191 ರನ್‌ಗಳಿಗೆ ಆಲೌಟ್ ಆಗಿತ್ತು. ದಿನದಾಟದ ಕೊನೆಗೆ ಇಂಗ್ಲೆಂಡ್ 17 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 53 ರನ್ ಗಳಿಸಿತ್ತು. ಶುಕ್ರವಾರ ಬೆಳಿಗ್ಗೆ ಕ್ರೇಗ್ ಓವರ್ಟನ್ ಮತ್ತು ಡೇವಿಡ್ ಮಲಾನ್ ಬೇಗನೆ ಔಟಾದಾಗ ತಂಡದ ಮೊತ್ತ 100ರ ಗಡಿಯನ್ನೂ ದಾಟಿರಲಿಲ್ಲ.

ಈ ಹಂತದಲ್ಲಿ ಜೊತೆಯಾದ ಪೋಪ್ ಮತ್ತು ಜಾನಿ ಆರನೇ ವಿಕೆಟ್ ಜೊತೆಯಾಟದಲ್ಲಿ 89 ರನ್‌ಗಳನ್ನು ಸೇರಿಸಿದರು. ಇದು ತಂಡಕ್ಕೆ ಬಲ ತುಂಬಿತು.

ಬೆಸ್ಟೊ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಮೊಹಮ್ಮದ್ ಸಿರಾಜ್ ಈ ಜೊತೆಯಾಟವನ್ನು ಮುರಿದರು. ಆದರೆ ಕ್ರೀಸ್‌ನಲ್ಲಿದ್ದ ಪೋಪ್ ಅವರು ಮೋಯಿನ್ ಅಲಿ ಜೊತೆಗೆ ಏಳನೇ ವಿಕೆಟ್ ಜೊತೆಯಾಟದಲ್ಲಿ 73 ರನ್ ಸೇರಿಸುವಲ್ಲಿ ಯಶಸ್ವಿಯಾದರು. ಸ್ಪಿನ್ನರ್ ರವೀಂದ್ರ ಜಡೇಜ ಬೌಲಿಂಗ್‌ನಲ್ಲಿ ಮೋಯಿನ್ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು.

ಕ್ರೀಸ್‌ಗೆ ಬಂದ ಕ್ರಿಸ್ ವೋಕ್ಸ್ ಭರ್ಜರಿಯಾಗಿ ಬ್ಯಾಟ್ ಬೀಸಿದರು. ಪೋಪ್ ಜೊತೆಗೆ ಮತ್ತೊಂದು ದೊಡ್ಡ ಜೊತೆಯಾಟವಾಡುವತ್ತ ಸಾಗಿದ್ದರು. ಆದರೆ, ಶಾರ್ದೂಲ್ ಠಾಕೂರ್ ಎಸೆತವನ್ನು ತಪ್ಪಾಗಿ ಅಂದಾಜಿಸಿ ಆಡಿದ ಪೋಪ್ ಕ್ಲೀನ್ ಬೌಲ್ಡ್ ಆದರು. ಆದರೆ ಮುಂದಿನ ಹಂತದಲ್ಲಿ ವೋಕ್ಸ್ ಬೀಸಾಟ ರಂಗೇರಿತು. ಅದರಿಂದಾಗಿ ಮುನ್ನಡೆಯ ಅಂತರ ಹೆಚ್ಚಾಯಿತು.

ಕ್ರಿಸ್ ರನ್‌ಔಟ್ ಆಗುವುದರೊಂದಿಗೆ ಇಂಗ್ಲೆಂಡ್ ಇನಿಂಗ್ಸ್‌ಗೆ ತೆರೆ ಬಿತ್ತು.


ಒಲಿ ಪೋಪ್ ಅವರ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 191 (61.3ಓವರ್)

ಇಂಗ್ಲೆಂಡ್ (ಮೊದಲ ಇನಿಂಗ್ಸ್) 290 (84 ಓವರ್) (ಗುರುವಾರ 17 ಓವರ್‌ಗಳಲ್ಲಿ 3 ವಿಕೆಟ್‌ಗೆ 53)

ಡೇವಿಡ್ ಸಿ ಶರ್ಮಾ ಬಿ ಯಾದವ್ 31 (67ಎ, 4X5), ಕ್ರೇಗ್ ಸಿ ಕೊಹ್ಲಿ ಬಿ ಯಾದವ್ 1 (12ಎ), ಪೋಪ್ ಬಿ ಶಾರ್ದೂಲ್ 81 (159ಎ, 4X6), ಬೇಸ್ಟೊ ಎಲ್‌ಬಿಡಬ್ಲ್ಯು ಬಿ ಸಿರಾಜ್ 37 (77ಎ, 4X7), ಮೋಯಿನ್ ಸಿ ಶರ್ಮಾ ಬಿ ಜಡೇಜ 35 (71ಎ, 4X7), ವೋಕ್ಸ್ ರನೌಟ್ (ಪಂತ್/ಬೂಮ್ರಾ) 50 (60ಎ, 4X11), ರಾಬಿನ್ಸನ್ ಬಿ ಜಡೇಜ 5 (6ಎ), ಆ್ಯಂಡರ್ಸನ್ ಔಟಾಗದೆ 1

ಇತರೆ (ಬೈ 1, ಲೆಗ್‌ಬೈ 14, ನೋಬಾಲ್ 8) 23

ವಿಕೆಟ್ ಪತನ: 4–53 (ಕ್ರೇಗ್ ಓವರ್ಟನ್, 18.4), 5–62 (ಡೇವಿಡ್ ಮಲಾನ್, 24.3), 6–151 (ಜಾನಿ ಬೇಸ್ಟೊ, 46.5), 7–222 (ಮೋಯಿನ್ ಅಲಿ, 67.2), 8–250 (ಒಲಿ ಪೋಪ್, 76.1), 9–255 (ಒಲಿ ರಾಬಿನ್ಸನ್, 77.1), 10–290 (ಕ್ರಿಸ್ ವೋಕ್ಸ್, 83.6)

ಬೌಲಿಂಗ್: ಉಮೇಶ್ ಯಾದವ್ 19–2–76–3, ಜಸ್‌ಪ್ರೀತ್ ಬೂಮ್ರಾ 21–6–67–2, ಶಾರ್ದೂಲ್ ಠಾಕೂರ್ 15–2–54–1, ಮೊಹಮ್ಮದ್ ಸಿರಾಜ್ 12–4–42–1, ರವೀಂದ್ರ ಜಡೇಜ 17–1–36–2

ಭಾರತ (ಎರಡನೇ ಇನಿಂಗ್ಸ್) ವಿಕೆಟ್ ನಷ್ಟವಿಲ್ಲದೆ 43 (16 ಓವರ್)

ರೋಹಿತ್ ಬ್ಯಾಟಿಂಗ್ 20 (56 ಎ, 4X2), ರಾಹುಲ್ ಬ್ಯಾಟಿಂಗ್ 22 (41 ಎ, 4X4)

ಇತರೆ (ನೋಬಾಲ್ 1) 1

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 6–1–13–0, ಒಲಿ ರಾಬಿನ್ಸನ್ 4–0–21–0, ಕ್ರಿಸ್ ವೋಕ್ಸ್ 5–1–8–0, ಕ್ರೇಗ್ ಓವರ್ಟನ್ 1–0–1–0



ಸನ್ಮಾನಿತರಾದ ಶ್ರೀಹರಿ ನಟರಾಜ್ ಮತ್ತು ಅಂಕಿತಾ ಅವರೊಂದಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಕರ್ನಾಟಕ ಒಲಿಂಪಿಕ್ಸ್ ಅಸೋಸಿಯೇಷನ್ ಅಧ್ಯಕ್ಷ ಕೆ. ಗೋವಿಂದರಾಜು

ಕ್ರಿಕೆಟ್: ಬಾಂಗ್ಲಾ ಜಯಭೇರಿ

ಢಾಕಾ (ಎಎಫ್‌ಪಿ): ಬಾಂಗ್ಲಾದೇಶ ಕ್ರಿಕೆಟ್ ತಂಡವು ಶುಕ್ರವಾರ ನಡೆದ ನ್ಯೂಜಿಲೆಂಡ್ ವಿರುದ್ಧದ ಟ್ವೆಂಟಿ20 ಸರಣಿಯ ಎರಡನೇ ಪಂದ್ಯದಲ್ಲಿ ನಾಲ್ಕು ರನ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 6ಕ್ಕೆ141 (ಮೊಹಮ್ಮದ್ ನೈಮ್ 39, ಲಿಟನ್ ದಾಸ್ 33, ಮೆಹಮುದುಲ್ಲಾ ಔಟಾಗದೆ 37, ರಚಿನ್ ರವಿಂದ್ರ 22ಕ್ಕೆ3), ನ್ಯೂಜಿಲೆಂಡ್:20 ಓವರ್‌ಗಳಲ್ಲಿ 5ಕ್ಕೆ137 (ಟಾಮ್ ಲಥಾಮ್ 65, ಮೆಹದಿ ಹಸನ್ 12ಕ್ಕೆ2, ಶಕೀಬ್ ಅಲ್ ಹಸನ್ 29ಕ್ಕೆ2).

ಚುನಾವಣಾ ಹಿಂಸಾಚಾರ ತನಿಖೆ: ಮಂಜುಳಾ ಚೆಲ್ಲೂರ್ ಮೇಲ್ವಿಚಾರಣೆ



ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೋತ್ತರ ಹಿಂಸಾಚಾರ ಕುರಿತು ಎಸ್‌ಐಟಿ ನಡೆಸುತ್ತಿರುವ ತನಿಖೆಯ ಮೇಲ್ವಿಚಾರಣೆಯನ್ನು ಕಲ್ಕತ್ತ ಹೈಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್ ನಡೆಸಲಿದ್ದಾರೆ.

'ವಿಧಾನಸಭೆ ಚುನಾವಣೆ ನಂತರ ನಡೆದ ಅತ್ಯಾಚಾರ ಹಾಗೂ ಕೊಲೆ ಪ್ರಕರಣಗಳನ್ನು ಹೊರತುಪಡಿಸಿ ಇತರ ಎಲ್ಲ ಹಿಂಸಾಚಾರ ಪ್ರಕರಣಗಳ ಮೇಲ್ವಿಚಾರಣೆಯನ್ನು ನಿವೃತ್ತ ಮುಖ್ಯನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್ ನಡೆಸುವರು' ಎಂದು ಕಲ್ಕತ್ತ ಹೈಕೋರ್ಟ್‌ನ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ನ್ಯಾಯಪೀಠ ಶುಕ್ರವಾರ ತಿಳಿಸಿತು.

ಚುನಾವಣೋತ್ತರ ಹಿಂಸಾಚಾರ ಕುರಿತು ಸ್ವತಂತ್ರ ತನಿಖೆ ನಡೆಸುವಂತೆ ಕೋರಿ ಹಲವರು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸಿದ್ದರು. ಎಲ್ಲ ಅರ್ಜಿಗಳ ವಿಚಾರಣೆ ನಡೆಸಿದ್ದ ಹೈಕೋರ್ಟ್ ಪೀಠ, ಅತ್ಯಾಚಾರ, ಕೊಲೆ ಸೇರಿ ಎಲ್ಲ ಆರೋಪಗಳ ಕುರಿತು ತನಿಖೆ ನಡೆಸುವಂತೆ ಸಿಬಿಐಗೆ ನಿರ್ದೇಶನ ನೀಡಿ ಆಗಸ್ಟ್ 19ರಂದು ಆದೇಶಿಸಿತ್ತು.

ಈ ಆದೇಶ ಹೊರಡಿಸಿದ ದಿನದಿಂದ ಆರು ವಾರಗಳ ಒಳಗಾಗಿ ತನಿಖಾ ವರದಿ ಸಲ್ಲಿಸುವಂತೆ ಸಿಬಿಐ ಹಾಗೂ ಎಸ್‌ಐಟಿಗೆ ನ್ಯಾಯಪೀಠ ಸೂಚಿಸಿದೆ.

ಜಿಲ್ಲೆಗೊಂದು ಅಂತರರಾಷ್ಟ್ರೀಯ ಕ್ರೀಡಾಂಗಣ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಜಿಲ್ಲೆಯಲ್ಲೂ ಒಂದು ಅಂತರರಾಷ್ಟ್ರೀಯ ಕ್ರೀಡಾಂಗಣ ನಿರ್ಮಿಸಲಾಗುವುದು. ಈಗಾಗಲೇ ಇರುವ ಜಿಲ್ಲಾ ಕ್ರೀಡಾಂಗಣಗಳನ್ನು ಉನ್ನತೀಕರಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಜಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಸಮಾರಂಭದಲ್ಲಿ ಟೋಕಿಯೊ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದ ರಾಜ್ಯದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನದ ಚೆಕ್ ವಿತರಿಸಿ ಅವರು ಮಾತನಾಡಿದರು.

ಶಾಲೆಗಳ ಹಂತದಲ್ಲೇ ಕ್ರೀಡಾ ಚಟುವಟಿಕೆಗಳನ್ನು ಉತ್ತೇಜಿಸಲಾಗುವುದು. ತಾಲ್ಲೂಕು ಮಟ್ಟದಲ್ಲೂ ಕ್ರೀಡಾ ಮೂಲಸೌಕರ್ಯ ಅಭಿವೃದ್ಧಿಪಡಿಸಲಾಗುವುದು. 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ರಾಜ್ಯದಿಂದ 75 ಕ್ರೀಡಾಪಟುಗಳನ್ನು ಕಳುಹಿಸುವ ಗುರಿ ಇದೆ. ಅದಕ್ಕೆ ಪೂರಕವಾಗಿ ಕ್ರೀಡಾ ಮೂಲಸೌಕರ್ಯ ಅಭಿವೃದ್ಧಿಗೆ ಬಜೆಟ್‌ನಲ್ಲಿ ವಿಶೇಷ ಯೋಜನೆಗಳನ್ನು ಪ್ರಕಟಿಸಲಾಗುವುದು ಎಂದರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡುತ್ತಿರುವುದು ಸ್ವಾಗತಾರ್ಹ ನಡೆ. ಇದು ರಾಜ್ಯಪಾಲ ರಲ್ಲಿರುವ ಕ್ರೀಡಾ ಸ್ಫೂರ್ತಿ ಮತ್ತು ಕ್ರೀಡಾ ಮನೋಭಾವಕ್ಕೆ ಸಾಕ್ಷಿ ಎಂದು ಹೇಳಿದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದ ಕ್ರೀಡಾಪಟುಗಳಾದ ಅದಿತಿ ಅಶೋಕ್ (ಗಾಲ್ಫ್), ಶ್ರೀಹರಿ ನಟರಾಜ್ (ಈಜು), ಫವಾದ್ ಮಿರ್ಜಾ (ಈಕ್ವೆಸ್ಟ್ರಿಯನ್) ಮತ್ತು ಭಾರತ ಮಹಿಳಾ ಹಾಕಿ ತಂಡದ ಸಹಾಯಕ ಕೋಚ್ ಅಂಕಿತಾ ಬಿ.ಎಸ್. ಅವರನ್ನು ಸನ್ಮಾನಿಸಿ, ತಲಾ ₹ 1 ಲಕ್ಷ ಪ್ರೋತ್ಸಾಹಧನ ನೀಡಿ ಗೌರವಿಸಲಾಯಿತು. ಕ್ರೀಡಾ ಸಚಿವ ಕೆ.ಸಿ. ನಾರಾಯಣ ಗೌಡ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ. ಗೋವಿಂದರಾಜು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

ಬಿಲಿಯರ್ಡ್ಸ್: ಉಮಾದೇವಿಗೆ ಚಾಂಪಿಯನ್ ಪಟ್ಟ

ಬೆಂಗಳೂರು: ಅನುಭವಿ ಆಟಗಾರ್ತಿ ಆರ್. ಉಮಾದೇವಿ ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯ ರಾಜ್ಯ ರ‍್ಯಾಂಕಿಂಗ್ ಮಹಿಳೆಯರ ಬಿಲಿಯರ್ಡ್ಸ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

ಶುಕ್ರವಾರ ನಡೆದ ಸ್ಪರ್ಧೆಯಲ್ಲಿ ಉಮಾದೇವಿ 2–1(55–75, 75–35, 75–32)ರಿಂದ ಚಿತ್ರಾ ಮಗಿಮೈರಾಜ್ ವಿರುದ್ಧ ಗೆದ್ದರು. ಉಮಾದೇವಿ ಅವರು 12ನೇ ಬಾರಿ ಈ ಪ್ರಶಸ್ತಿ ಜಯಿಸಿದ್ದಾರೆ.

ಹೈಜಂಪ್‌ನಲ್ಲಿ ಬೆಳ್ಳಿ ಪದಕ ಗಳಿಸಿದ ಉತ್ತರಪ್ರದೇಶದ ಅಥ್ಲೀಟ್; ಆರ್ಚರಿಯಲ್ಲಿ ರೋಚಕ ಗೆಲುವು

ಗೆದ್ದ ಪ್ರವೀಣ; ಹರ್ವಿಂದರ್ 'ಕಿಂಗ್'

ಟೋಕಿಯೊ (ಪಿಟಿಐ): ಕೋವಿಡ್‌ನಿಂದ ಸೃಷ್ಟಿಯಾದ 'ಲಾಕ್‌ಡೌನ್' ಪರಿಸ್ಥಿತಿಯಲ್ಲೂ ಛಲ ಬಿಡಲಿಲ್ಲ. ತನ್ನದೇ ರೀತಿಯಲ್ಲಿ ವಿಶೇಷ ಸೌಲಭ್ಯ ಸೃಷ್ಟಿಸಿ ಅಭ್ಯಾಸ ಮುಂದುವರಿಯಿತು. ಹೀಗಿದ್ದೂ ಪದಕ ಗೆಲ್ಲುವ ನಿರೀಕ್ಷೆ ಇರಲಿಲ್ಲ. ಆದರೆ ಪ್ರವೀಣ್ ಕುಮಾರ್ ಶುಕ್ರವಾರ ಪದಕ ಗೆಲ್ಲುವುದರೊಂದಿಗೆ ಏಷ್ಯಾ ಮಟ್ಟದ ದಾಖಲೆಯನ್ನೂ ನಿರ್ಮಿಸಿದರು.

18ನೇ ವಯಸ್ಸಿನಲ್ಲೇ ಪ್ಯಾರಾಲಿಂಪಿಕ್ಸ್‌ನ ಹೈಜಂಪ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದ ಉತ್ತರಪ್ರದೇಶದ ಗೌತಮ ಬುದ್ಧ ನಗರ ಜಿಲ್ಲೆಯ ರೈತಮ ಪುತ್ರ ಪ್ರವೀಣ್ ಕುಮಾರ್ ಅವರು ಕೋವಿಡ್‌ನಿಂದಾಗಿ ಕ್ರೀಡಾಂಗಣಗಳು ಮುಚ್ಚಿದ್ದರಿಂದ ಗಾಬರಿಯಾಗಿದ್ದರು. ಏಪ್ರಿಲ್‌ನಲ್ಲಿ ಅವರಿಗೆ ಕೋವಿಡ್ ಸೋಂಕು ಕೂಡ ಉಂಟಾಯಿತು. ಆ ಆಘಾತದಿಂದ ಚೇತರಿಸಿಕೊಂಡ ನಂತರ ಅಭ್ಯಾಸ ಮಾಡುವ ಹುಮ್ಮಸ್ಸು ಇತ್ತು. ಆದರೆ ಲ್ಯಾಂಡಿಂಗ್ ಪಿಟ್ ಇರಲಿಲ್ಲ. ಕೊನೆಗೆ ಹೊಂಡವೊಂದನ್ನು ತೋಡಿ ಅದರಲ್ಲಿ ಮೆದುವಾದ ಮಣ್ಣು ತುಂಬಿಸಿ ಜಿಗಿದು ಅಭ್ಯಾಸ ಮಾಡಿದರು.

ದೆಹಲಿಯ ಮೋತಿಲಾಲ್ ನೆಹರು ಕಾಲೇಜಿನಲ್ಲಿ ದ್ವಿತೀಯ ವರ್ಷದ ಪದವಿ ವಿದ್ಯಾರ್ಥಿಯಾಗಿರುವ ಪ್ರವೀಣ್ ಕುಮಾರ್ ಅವರಿಗೆ ಸತ್ಯಪಾಲ್ ಕೋಚಿಂಗ್ ನೀಡುತ್ತಿದ್ದಾರೆ. 2019ರಲ್ಲಿ ಜೂನಿಯರ್ ಪ್ಯಾರಾ ಅಥ್ಲೆಟಿಕ್ಸ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಮತ್ತು ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾನ್‌ಪ್ರಿಯಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.

ಹರ್ವಿಂದರ್‌ಗೆ 'ಮೊದಲ' ಪದಕ: ರೋಚಕ ಶೂಟ್ ಆಫ್‌ನಲ್ಲಿ ಗೆಲುವು ಸಾಧಿಸಿದ ಹರ್ವಿಂದರ್ ಸಿಂಗ್ ಭಾರತಕ್ಕೆ ಆರ್ಚರಿಯಲ್ಲಿ ಮೊದಲ ಪದಕ ತಂದು ಕೊಟ್ಟರು. ಶುಕ್ರವಾರ ನಡೆದ ಪುರುಷರ ವೈಯಕ್ತಿಕ ರಿಕರ್ವ್ ವಿಭಾಗದ ಸ್ಪರ್ಧೆಯಲ್ಲಿ ಅವರು ಕೊರಿಯಾದ ಕಿಮ್ ಮಿನ್ ಸು ಎದುರು ಜಯ ಗಳಿಸಿದರು.

23 ವರ್ಷದ ಹರ್ವಿಂದರ್ ಸಿಂಗ್ 2018ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದು ಪ್ರಮುಖ ಪ್ಯಾರಾಲಿಂಪಿಕ್ ಕ್ರೀಡಾಕೂಟವೊಂದರಲ್ಲಿ ಪದಕ ಗೆದ್ದ ಸಾಧನೆ ಮಾಡಿದ್ದರು. ಹರಿಯಾಣದ ಕೈತಾಲ್‌ನಲ್ಲಿರುವ ಗುಹ್ಲಾ ಚೀಕಾ ಗ್ರಾಮದಲ್ಲಿ ಜನಿಸಿ ಬೆಳೆದ ಅವರು ಪಟಿಯಾಲದ ಪಂಜಾಬ್ ವಿಶ್ವವಿದ್ಯಾಲಯದಲ್ಲಿ ವಾಣಿಜ್ಯ ವಿಷಯದಲ್ಲಿ ಪದವಿ ಗಳಿಸಿದ್ದಾರೆ.

ಒಂದೂವರೆ ವರ್ಷದ ಮಗುವಾಗಿದ್ದಾಗ ಹರ್ವಿಂದರ್ ಅವರಿಗೆ ಡೆಂಗಿಯಾಗಿತ್ತು. ಚಿಕಿತ್ಸೆ ನೀಡಿದ ಸ್ಥಳೀಯ ವೈದ್ಯರೊಬ್ಬರು ನೀಡಿದ ಚುಚ್ಚುಮದ್ದಿನಿಂದಾಗಿ ಅವರ ಕಾಲುಗಳು ಸ್ವಾದೀನ ಕಳೆದುಕೊಂಡಿದ್ದವು.


ಪ್ರವೀಣಕುಮಾರ್



> **ಮತ್ತೊಂದು ಪದಕವೇನೋ ಬಂತು. ಆದರೆ ಈಗಲೂ ಪೂರ್ಣ ತೃಪ್ತಿ ಇಲ್ಲ. ಫೈನಲ್‌ನಲ್ಲಿ ಸ್ವಲ್ಪ ಗಾಬರಿಯಾಗಿದ್ದೆ. ಹೀಗಾಗಿ ಚಿನ್ನ–ಬೆಳ್ಳಿ ಗೆಲ್ಲುವ ಅವಕಾಶ ತಪ್ಪಿತು.**
> **ಅವನಿ ಲೇಖರಾ** ಕಂಚು ಗೆದ್ದ ಶೂಟರ್

> **ಶಾಲಾ ದಿನಗಳಲ್ಲಿ ಕ್ರೀಡೆಗೇ ಒತ್ತು ಕೊಡುತ್ತಿದ್ದೆ. ಮೊದಮೊದಲು ವಾಲಿಬಾಲ್ ಆಡುತ್ತಿದ್ದೆ. ನಂತರ ಹೈಜಂಪ್ ಅಭ್ಯಾಸ ಆರಂಭಿಸಿದೆ.**
> **ಪ್ರವೀಣ್ ಕುಮಾರ್** ಪದಕ ಗೆದ್ದ ಅಥ್ಲೀಟ್

ಲೇಖರಾಗೆ 'ಡಬಲ್' ಸಂಭ್ರಮ

10 ಮೀಟರ್ಸ್ ಏರ್ ರೈಫಲ್‌ನಲ್ಲಿ ಚಿನ್ನ ಗೆದ್ದು ನಾಲ್ಕು ದಿನಗಳ ಒಳಗೆ ಅವನಿ ಲೇಖರಾ ಮತ್ತೊಂದು ಪದಕಕ್ಕೆ ಮುತ್ತು ನೀಡಿದರು. ಶುಕ್ರವಾರ ನಡೆದ 50 ಮೀ ರೈಫಲ್–3 ಪೊಸಿಷನ್‌ನಲ್ಲಿ ಕಂಚಿನ ಪದಕ ಅವರ ಕೊರಳಿಗೇರಿತು.

19 ವರ್ಷದ ಅವನಿ ಅವರಿಗೆ ಇದು ಚೊಚ್ಚಲ ಪ್ಯಾರಾಲಿಂಪಿಕ್ಸ್. ಪ್ರಬಲ ಪೈಪೋಟಿ ಇದ್ದ ಸ್ಪರ್ಧೆಯಲ್ಲಿ ಉಕ್ರೇನ್‌ನ ಐರಿನಾ ಶೆಟ್ನಿಕ್ ಅವರನ್ನು ಹಿಂದಿಕ್ಕಿ ಅವನಿ ಪದಕ ಗಳಿಸಿದರು. ಈ ಮೂಲಕ ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಭಾರತದ ಮೊದಲ ಅಥ್ಲೀಟ್ ಎನಿಸಿಕೊಂಡರು. ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಮೊದಲ ಭಾರತೀಯ ಕ್ರೀಡಾಪಟು ಎಂಬ ಶ್ರೇಯವೂ ಅವರದಾಗಿದೆ. ಜೋಗಿಂದರ್ ಸಿಂಗ್ ಸೋಧಿ, ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗಳಿಸಿದ ಭಾರತದ ಏಕೈಕ ಕ್ರೀಡಾಪಟು ಆಗಿದ್ದರು. 1984ರಲ್ಲಿ ಅವರು ಬೆಳ್ಳಿ ಮತ್ತು ಕಂಚು ಗೆದ್ದಿದ್ದರು. ದೇವೇಂದ್ರ ಜಜಾರಿಯ ಮೂರು ಪದಕ ಗಳಿಸಿದ್ದಾರೆ. ಆದರೆ ಈ ಮೂರು ಪದಕಗಳು ಮೂರು ಕೂಟಗಳಲ್ಲಿ ಬಂದಿವೆ. ಶುಕ್ರವಾರದ ಸ್ಪರ್ಧೆಯಲ್ಲಿ ಚೀನಾದ ಜಾಂಗ್ ಕೂಪಿಂಗ್ ಚಿನ್ನ ಗಳಿಸಿದರು. ಜರ್ಮನಿಯ ಹಿಲ್‌ಟ್ರಾಪ್ ನಟಾಶ ಬೆಳ್ಳಿ ಪದಕ ಗೆದ್ದುಕೊಂಡರು.



ಪ್ರಮೋದ್ ಭಗತ್ ಮತ್ತು ಪಲಕ್ ಕೊಹ್ಲಿ –ರಾಯಿಟರ್ಸ್ ಚಿತ್ರ

ಪ್ರಮೋದ್–ಪಲಕ್ ಸೆಮಿಫೈನಲ್‌ಗೆ

ಭಾರತದ ಪ್ರಮೋದ್ ಭಗತ್ ಮತ್ತು ಪಲಕ್ ಕೊಹ್ಲಿ ಅವರು ಬ್ಯಾಡ್ಮಿಂಟನ್‌ನ ಮಿಶ್ರ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದರು. ನೋಯ್ಡಾದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿರುವ ಸುಹಾಸ್ ಯತಿರಾಜ್ ಅವರು ಸಿಂಗಲ್ಸ್ ವಿಭಾಗದಲ್ಲಿ ಅಂತಿಮ ನಾಲ್ಕರ ಘಟ್ಟ ತಲುಪಿದರು.

ಪ್ರಮೋದ್ ಮತ್ತು ಪಲಕ್ ಥಾಯ್ಲೆಂಡ್‌ನ ಸಿರಿಪಾಂಗ್ ತಿಮರೊಮ್ ಮತ್ತು ನಿಪಾಡ ಸೆನ್ಸುಪಾ ಅವರನ್ನು 21-15, 21-19ರಲ್ಲಿ ಮಣಿಸಿದರು. ಸುಹಾಸ್ ಕ್ವಾರ್ಟರ್ ಫೈನಲ್‌ನಲ್ಲಿ ವಿಶ್ವದ ಮೂರನೇ ಕ್ರಮಾಂಕದ ಆಟಗಾರ ಇಂಡೊನೇಷ್ಯಾದ ಹ್ಯಾರಿ ಸುಸಾಂತೊ ಅವರನ್ನು 21–6, 21–12ರಲ್ಲಿ ಸೋಲಿಸಿದರು. ಕೇವಲ 19 ನಿಮಿಷಗಳಲ್ಲಿ ಪಂದ್ಯ ಮುಕ್ತಾಯಗೊಂಡಿತ್ತು. ಪುರುಷರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ತರುಣ್ ಧಿಲಾನ್ ಕೊರಿಯಾದ ಶಿನ್ ಕ್ಯುಂಗ್ ವಿರುದ್ಧ 21–18, 15–21, 21–17ರಲ್ಲಿ ಜಯ ಗಳಿಸಿದರೆ ಮನೋಜ್ ಸರ್ಕಾರ್ 21–16, 21–9ರಲ್ಲಿ ಉಕ್ರೇನ್‌ನ ಅಲೆಕ್ಸಾಂಡ್ರ ಚಿರ್ಕೊವ್ ಎದುರು ಜಯ ಗಳಿಸಿ ಸೆಮಿಫೈನಲ್ ಪ್ರವೇಶಿಸಿದರು.

ಪ್ರಿಯಾ ಮೋಹನ್ ಅವರಿಗೆ ಅಭಿನಂದನೆ

ಬೆಂಗಳೂರು: ಕೀನ್ಯಾದ ನೈರೋಬಿಯಲ್ಲಿ ಈಚೆಗೆ ನಡೆದ 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಸ್ಪ್ರಿಂಟರ್ ಪ್ರಿಯಾ ಮೋಹನ್ ಅವರನ್ನು ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಅವರು ಶುಕ್ರವಾರ ಅಭಿನಂದಿಸಿದರು.

ಉದ್ಯಮಿ ದಯಾನಂದ ಪೈ ಅವರು ಪ್ರಿಯಾ ಅವರಿಗೆ ₹ 5 ಲಕ್ಷ ಮೊತ್ತದ ಚೆಕ್ ನೀಡಿ ಪುರಸ್ಕರಿಸಿದರು. ಕ್ರೀಡಾಕೂಟದಲ್ಲಿ 4x400 ಮೀಟರ್ಸ್ ಮಿಶ್ರ ರಿಲೆಯಲ್ಲಿ ಕಂಚಿನ ಪದಕ ಗೆದ್ದ ಭಾರತ ತಂಡದಲ್ಲಿ ಪ್ರಿಯಾ ಇದ್ದರು. 400 ಮೀಟರ್ಸ್ ಓಟದ ಸ್ಪರ್ಧೆಯಲ್ಲೂ ಪಾಲ್ಗೊಂಡಿದ್ದರು.

ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಸಂಬಂಧಿಸಿ ಬೆಂಗಳೂರು ನಗರ ವಿಶ್ವವಿದ್ಯಾಲಯವು ಮೌಂಟ್ ಕಾರ್ಮೆಲ್ ಕಾಲೇಜಿನ ಸಹಯೋಗದಲ್ಲಿ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಚಾರಸಂಕಿರಣದ ಉದ್ಘಾಟನಾ ಸಮಾರಂಭದಲ್ಲಿ ಪ್ರಿಯಾ ಅವರನ್ನು ಸನ್ಮಾನಿಸಲಾಯಿತು.


ಪ್ರಿಯಾ ಮೋಹನ್

ಕುಸ್ತಿ ಟ್ರಯಲ್ಸ್: ಹಿಂದೆ ಸರಿದ ವಿನೇಶಾ

ನವದೆಹಲಿ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್‌ಗೆ ಭಾರತ ತಂಡದ ಆಯ್ಕೆಯಾಗಿ ನಡೆಯುತ್ತಿರುವ ಟ್ರಯಲ್ಸ್‌ನ ಮಧ್ಯದಲ್ಲೇ ವಿನೇಶಾ ಫೋಗಟ್ ಅವರು ಹಿಂದೆ ಸರಿದಿದ್ದಾರೆ. ಆದರೆ ಅವರ ಸಹೋದರ ಸಂಬಂಧಿ ಸಂಗೀತಾ ಫೋಗಟ್ ಉತ್ತಮ ಸಾಮರ್ಥ್ಯ ತೋರಿ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ.

ಟ್ರಯಲ್ಸ್ ಆರಂಭವಾಗಿದೆ. ಇತ್ತೀಚೆಗೆ ಭಾರತ ಕುಸ್ತಿ ಫೆಡರೇಷನ್‌ನಿಂದ ಅಶಿಸ್ತಿನ ಕಾರಣದಿಂದ ವಿನೇಶಾ ಫೋಗಟ್ ಅಮಾನತುಗೊಂಡಿದ್ದರು. ಬಳಿಕ ಎಚ್ಚರಿಕೆ ನೀಡಿ ಟ್ರಯಲ್ಸ್‌ನಲ್ಲಿ ಭಾಗ ವಹಿಸಲು ಅವರಿಗೆ ಅನುಮತಿ ನೀಡಲಾಗಿತ್ತು.


ಅಮೆರಿಕ ಓಪನ್: ಪ್ಲಿಸ್ಕೋವ ದಾಖಲೆ ಏಸ್

ನ್ಯೂಯಾರ್ಕ್ (ರಾಯಿಟರ್ಸ್): ಸೋಲಿನ ಪ್ರಪಾತದಿಂದ ಎದ್ದು ನಿಂತ ಜೆಕ್ ಗಣರಾಜ್ಯದ ಆಟಗಾರ್ತಿ, ನಾಲ್ಕನೇ ಶ್ರೇಯಾಂಕಿತೆ ಕರೋಲಿನಾ ಪ್ಲಿಸ್ಕೋವ ಅವರು ದಾಖಲೆ ಸಂಖ್ಯೆಯ ಏಸ್ ಸಿಡಿಸಿ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತು ಪ್ರವೇಶಿಸಿದರು.

ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಅಮಾಂಡ ಅನಿಸಿಮೋವ ಎದುರು ಅವರು 7-5, 6-7(5), 7-6(7) ಗೆಲುವು ಸಾಧಿಸಿದರು. 24 ಏಸ್ ಸಿಡಿಸಿ ಅವರು ಮಿಂಚಿದರು. 2019ರಲ್ಲಿ ಜೂಲಿಯಾ ಜಾರ್ಜ್ 21 ಏಸ್ ಸಿಡಿಸಿ ಅತಿ ಹೆಚ್ಚು ಏಸ್‌ಗಳ ಸಾಧನೆ ಮಾಡಿದ್ದರು.

ಮೊದಲ ಸೆಟ್‌ನಲ್ಲಿ ಪ್ಲಿಸ್ಕೋವ ಉತ್ತಮ ಆರಂಭ ಕಂಡಿದ್ದರು. ಆದರೆ ನಂತರ ತಿರುಗೇಟು ನಿಡಿದ ಎದುರಾಳಿ ಒಂದು ಹಂತದಲ್ಲಿ ಗೆಲುವಿನತ್ ಹೆಜ್ಜೆ ಹಾಕಿದ್ದರು. ಪಟ್ಟು ಬಿಡದ ಪ್ಲಿಸ್ಕೋವ ಚೇತರಿಸಿಕೊಂಡು ಗೆಲುವು ಸಾಧಿಸಿದರು. ಎರಡನೇ ಸೆಟ್‌ನಲ್ಲೂ ಜಿದ್ದಾಜಿದ್ದಿಯ ಪೈಪೋಟಿ ಕಂಡುಬಂತು. ವಿಶ್ವ ರ‍್ಯಾಂಕಿಂಗ್‌ನಲ್ಲಿ 75ನೇ ಸ್ಥಾನದಲ್ಲಿರುವ ಅನಿಸಿಮೋವ ಟೈಬ್ರೇಕರ್‌ನಲ್ಲಿ ಗೆದ್ದು ಸಮಬಲ ಸಾಧಿಸುವಲ್ಲಿ ಯಶಸ್ವಿಯಾದರು.

ನ್ಯೂಜರ್ಸಿಯಲ್ಲಿ ಜನಿಸಿ ಬೆಳೆದಿರುವ 20 ವರ್ಷದ ಅನಿಸಿಮೋವ ಅವರಿಗೆ ಆರ್ಥರ್ ಆ್ಯಶ್ ಕ್ರೀಡಾಂಗಣದಲ್ಲಿ ಸ್ಥಳೀಯ ಪ್ರೇಕ್ಷಕರ ಉತ್ತಮ ಬೆಂಬಲ ಲಭಿಸಿತು. ಹೀಗಾಗಿ ನಿರ್ಣಾಯಕ ಸೆಟ್‌ನಲ್ಲಿ ಪ್ಲಿಸ್ಕೋವ ಒತ್ತಡದಲ್ಲೇ ಆಡಬೇಕಾಯಿತು. ಆದರೂ ಅವರಿಂದ ಜಯ ಕಸಿದುಕೊಳ್ಳಲು ಅನಿಸಿಮೋವಗೆ ಸಾಧ್ಯವಾಗಲಿಲ್ಲ.


ಕರೋಲಿನಾ ಪ್ಲಿಸ್ಕೋವ ಚೆಂಡನ್ನು ರಿಟರ್ನ್ ಮಾಡಿದ ಬಗೆ –ಎಎಫ್‌ಪಿ ಚಿತ್ರ

ಪದಕ ಗೆಲ್ಲುವ 'ಒಂದೇ ಲಕ್ಷ್ಯ'

ಮುಂಬೈ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ನಿರೀಕ್ಷೆ ಇರುವ ಕ್ರೀಡಾಪಟುಗಳ ನೆರವಿಗಾಗಿ 'ಒಂದು ಕನಸು, ಒಂದೇ ಲಕ್ಷ್ಯ' ಯೋಜನೆಗೆ ಶುಕ್ರವಾರ ಚಾಲನೆ ನೀಡಲಾಯಿತು.

ಐದು ಕ್ರೀಡೆಗಳಲ್ಲಿ ಹೆಸರು ಮಾಡಿರುವ ಏಳು ಮಂದಿ ಯುವ ಅಥ್ಲೀಟ್‌ಗಳಿಗೆ ಇದರಡಿ ವಿಶೇಷ ತರಬೇತಿ ಸಿಗಲಿದೆ.

ರಾಷ್ಟ್ರೀಯ ಖೇಲ್ ಪ್ರೋತ್ಸಾಹನ್ ಪುರಸ್ಕಾರ್ ವಿಜೇತ ಲಕ್ಷ್ಯ ಸಂಸ್ಥೆಯ ಈ ಯೋಜನೆಗೆ ಡ್ರೀಮ್ ಸ್ಪೋರ್ಟ್ಸ್ ಫೌಂಡೇಷನ್ (ಡಿಎಸ್‌ಎಫ್) ಕೈಜೋಡಿಸಿದೆ.

ಮಹಾರಾಷ್ಟ್ರ ಲಾನ್ ಟೆನಿಸ್ ಸಂಸ್ಥೆಯ ಕಾರ್ಯದರ್ಶಿ ಸುಂದರ್ ಅಯ್ಯರ್ ಮತ್ತು ಡ್ರೀಮ್ ಸ್ಪೋರ್ಟ್ಸ್‌ನ ಮುಖ್ಯ ಯೋಜನಾ ಅಧಿಕಾರಿ ಕಿರಣ್ ವಿವೇಕಾನಂದ ಅವರ ಸಮಕ್ಷಮದಲ್ಲಿ ಉದ್ಘಾಟನೆಗೊಂಡಿತು.

ಶೂಟಿಂಗ್, ಬಾಕ್ಸಿಂಗ್, ಕುಸ್ತಿ, ಬ್ಯಾಡ್ಮಿಂಟನ್ ಮತ್ತು ಟೇಬಲ್ ಟೆನಿಸ್‌ನಲ್ಲಿ 2024ರ ಪ್ಯಾರಿಸ್ ಒಲಿಂಪಿಕ್ಸ್ ಮತ್ತು 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಗುರಿ ಹೊಂದಲಾಗಿದೆ.


ಮಣಿಕಾ ಬಾತ್ರಾ

ಪಂದ್ಯ ಫಿಕ್ಸ್ ಮಾಡಲು ಹೇಳಿದ್ದ ಕೋಚ್: ಮಣಿಕಾ ಆರೋಪ

ನವದೆಹಲಿ (ಪಿಟಿಐ): ಟೇಬಲ್ ಟೆನಿಸ್ ಆಟಗಾರ್ತಿ ಮಣಿಕಾ ಬಾತ್ರಾ ಅವರು ರಾಷ್ಟ್ರೀಯ ಕೋಚ್ ಸೌಮ್ಯದೀಪ್ ರಾಯ್ ಅವರ ಮೇಲೆ ಗಂಭೀರ ಆರೋಪ ಮಾಡಿದ್ದಾರೆ.

ಹೋದ ಮಾರ್ಚ್‌ನಲ್ಲಿ ನಡೆದಿದ್ದ ಟೋಕಿಯೊ ಒಲಿಂಪಿಕ್ಸ್‌ನ ಅರ್ಹತಾ ಟೂರ್ನಿಯ ಸಂದರ್ಭದಲ್ಲಿ ಪಂದ್ಯಗಳನ್ನು ಫಿಕ್ಸ್ ಮಾಡಿಕೊಳ್ಳುವಂತೆ ಪ್ರಚೋದಿಸಿದ್ದರು. ಆದ್ದರಿಂದಲೇ ಒಲಿಂಪಿಕ್ ಕೂಟದ ಮಹಿಳೆಯರ ಸಿಂಗಲ್ಸ್ ವಿಭಾಗದ ಪಂದ್ಯಗಳು ನಡೆದ ಸಂದರ್ಭದಲ್ಲಿ ಅವರನ್ನು ತಾವು ದೂರ ಇಟ್ಟಿದ್ದಾಗಿ ಮಣಿಕಾ ಹೇಳಿದ್ದಾರೆ.

ಜುಲೈ–ಆಗಸ್ಟ್‌ನಲ್ಲಿ ನಡೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ತಮ್ಮ ಪಂದ್ಯಗಳನ್ನು ಆಡುವ ಸಂದರ್ಭದಲ್ಲಿ ಕೋಚ್ ನೆರವನ್ನು ಮಣಿಕಾ ನಿರಾಕರಿಸಿದ್ದು ಚರ್ಚೆಗೆ ಗ್ರಾಸವಾಗಿತ್ತು. ಭಾರತ ಟೇಬಲ್ ಟೆನಿಸ್ ಫೆಡರೇಷನ್ (ಟಿಟಿಎಫ್‌ಐ) ಮಣಿಕಾ ಅವರಿಗೆ ಶೋಕಾಸ್ ನೋಟಿಸ್ ಕೂಡ ಜಾರಿ ಮಾಡಿತ್ತು. ವಿಚಾರಣೆಯ ಸಂದರ್ಭದಲ್ಲಿ ಮಣಿಕಾ ಈ ಆರೋಪ ಮಾಡಿದ್ದಾರೆಂದು ಫೆಡರೇಷನ್ ಮೂಲಗಳು ತಿಳಿಸಿವೆ.

'ದೋಹಾದಲ್ಲಿ ಮಾರ್ಚ್ ನಲ್ಲಿ ನಡೆದಿದ್ದ ಅರ್ಹತಾ ಟೂರ್ನಿಯಲ್ಲಿ ಸೌಮ್ಯದೀಪ್ ಅವರು ತಮ್ಮ ವಿದ್ಯಾರ್ಥಿನಿಗೆ ಅರ್ಹತೆ ಸಿಗುವಂತೆ ಮಾಡಲು ನಾನು ಪಂದ್ಯದಲ್ಲಿ ಸೋಲಬೇಕು. ಅದಕ್ಕಾಗಿ ಫಿಕ್ಸಿಂಗ್ ಮಾಡಿಕೊಳ್ಳಬೇಕು ಎಂದು ಒತ್ತಡ ಹಾಕಿದ್ದರು. ಆದರೆ ನಾನು ಅದಕ್ಕೆ ಸೊಪ್ಪು ಹಾಕಿರಲಿಲ್ಲ' ಎಂದು ಮಣಿಕಾ ಹೇಳಿದ್ದಾರೆ.

ಈ ಕುರಿತು ಪ್ರತಿಕ್ರಿಯೆಗಾಗಿ ಕೋಚ್ ಸೌಮ್ಯದೀಪ್ ರಾಯ್ ಅವರನ್ನು ಸಂಪರ್ಕಿಸಲಾಯಿತು. ಆದರೆ ಅವರು ಕರೆಗೆ ಲಭ್ಯರಾಗಲಿಲ್ಲ. ಒಲಿಂಪಿಕ್ಸ್‌ನಲ್ಲಿ ಆಡಿದ್ದ ಮಣಿಕಾ ಮತ್ತು ಸುತೀರ್ಥ ಮುಖರ್ಜಿ ಅವರು ರಾಯ್ ಅವರಿಂದ ತರಬೇತಿ ಪಡೆದಿದ್ದಾರೆ.